ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 16 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 1 | ಪುಟಗಳು: 12+XII

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಕ್ಕರೆ ಅದೇ ಸ್ವರ್ಗ

(ಕಮಲಿಗೆ ಹೆರಿಗೆಯಾಗಿತ್ತು. ಸ್ವಲ್ಪ ಹೊತ್ತಿಗೆ ಆಕೆ ಕಣ್ಣು ತೆರೆದು ಗಾಬರಿಯಿಂದ ಹಾಸಿಗೆಯನ್ನು ತಡವುತ್ತಾ ಹುಡುಕಲು ಆರಂಭಿಸಿದಳು.)

ನರ್ಸ್ : ಗಾಬರಿ ಆಗಬೇಡಿ. ತಗೊಳ್ಳಿ ನಿಮ್ಮ ಮಗು ಇಲ್ಲಿದೆ.

ಕಮಲಿ : ಅಂಯ್ಯೋ, ನಾನು ಹುಡುಕುತ್ತಿರುವುದು ಮಗು ಅಲ್ಲ. ನನ್ನ ಮೊಬೈಲ್, ಅದು ಎಲ್ಲಿ ಹೋಯ್ತು?!

ಮೈಸೂರು ಮಿತ್ರ

ಮಂಗಳವಾರ, 16 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮರಗಳಂತೆ ಎತ್ತರದ ವ್ಯಕ್ತಿತ್ವದವರಾಗಿ. ಪರ್ವತಗಳಂತೆ ದೃಢವಾಗಿ ಜೀವಿಸಿ.ವಸಂತದ ತಂಗಾಳಿಯಂತೆ ಸಭ್ಯರಾಗಿರಿ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಳೆ ಎಂದವನಿಗೆ ಹಾಳು, ಇಂದೇ ಎಂದವನಿಗೆ ಬೀಳಾಗದು ಬಾಳು

ನಿಮ್ಮ ಪತ್ರಗಳು

■ ಮೈಸೂರಿನ ನ್ಯಾಯಾಲಯದ ಎದುರು ಅನೈರ್ಮಲ್ಯ




ಮಾನ್ಯರೆ,

ಮೈಸೂರಿನ ಜಯನಗರದ ಎರಡನೇ ಕ್ರಾಸ್ ಬಳಿ ಇರುವ ಈ ರಸ್ತೆಯಲ್ಲಿ ಡ್ರೈನೇಜ್ ಒಡೆದು ಕೊಳಚೆ ನೀರಿನಿಂದ ಗಬ್ಬು ನಾರುತ್ತಿದೆ. ಮೈಸೂರು ಮಹಾನಗರ ಪಾಲಿಕೆಯಿಂದ 18 ಲಕ್ಷ ರೂಪಾಯಿ ಖರ್ಚು ಮಾಡಿ ಕಾಮಗಾರಿಯನ್ನು ಕೈಗೊಂಡು ಅದಕ್ಕೆ ಶಾಶ್ವತವಾದ ಯೋಜನೆಯನ್ನು ರೂಪಿಸದಿರುವುದರಿಂದ ಪುನಃ ಡ್ರೈನೇಜ್ ಒಡೆದು ಹೋಗಿರುವುದು ಎದ್ದು ಕಾಣುತ್ತಿದೆ. ಈ ಪರಿಸ್ಥಿತಿಯಿಂದ ಅಕ್ಕಪಕ್ಕದ ನಿವಾಸಿಗಳ ಮಕ್ಕಳ ಆರೋಗ್ಯ ಹದಗೆಟ್ಟಿದ್ದು, ಹಾಗೂ ಈ ಕೊಳಚೆ ನೀರು ಅಂತರ್ಜಲವನ್ನು ಸೇರುತ್ತಿದೆ. ಈ ವಿಷಯವನ್ನು ಈಗಾಗಲೇ ಶಾಸಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಕೂಡಲೇ ನಗರ ಪಾಲಿಕೆಯು ಈ ವ್ಯವಸ್ಥೆಯನ್ನು ಸರಿಪಡಿಸದಿದ್ದಲ್ಲಿ, ನಿವಾಸಿಗಳೆಲ್ಲರೂ ಒಟ್ಟಿಗೆ ಸೇರಿ ಘೇರಾವ್ ಹಾಕುವ ದಿನವೂ ಖಂಡಿತ ಬಂದೇ ಬರುತ್ತದೆ. ಬೇಸಿಗೆಯ ಈ ಸಮಯದಲ್ಲಿ ಈ ಕೊಳಚೆ ನೀರಿನಲ್ಲಿರುವ ಸೊಳ್ಳೆಗಳ ಮುಖಾಂತರ ಸಾಂಕ್ರಾಮಿಕ ರೋಗಗಳು ಆರಂಭವಾದರೆ ಅದಕ್ಕೆ ಮೈಸೂರು ಮಹಾನಗರ ಪಾಲಿಕೆ ಹೊಣೆ ಹೊರಬೇಕೆಂದು ಈ ಮೂಲಕ ಎಚ್ಚರಿಸುತ್ತೇವೆ.

–ಎಂ.ಇ. ಚೇತನ್, ಪ್ರಧಾನ ಕಾರ್ಯದರ್ಶಿ, ಒಕ್ಕಲಿಗರ ಸಂಘ, ಮೈಸೂರು.

■ ಕಸದ ಬುಟ್ಟಿ ಈಗ ಗಟ್ಟಿ



ಮಾನ್ಯರೇ,

'ಕಳಚಿ ಬೀಳುತ್ತಿರುವ ಕಸದ ಬುಟ್ಟಿ ಬಗ್ಗೆ 'ಮೈಸೂರು ಮಿತ್ರ' ದಲ್ಲಿ (ದಿ.28.3.24) ದೂರು ಪ್ರಕಟವಾಗಿತ್ತು. ನಗರ ಪಾಲಿಕೆಯ ನಿರ್ಲಕ್ಷ್ಯ ಹಾಗೂ ಅಳವಡಿಕೆ ಗುಣಮಟ್ಟದ ಬಗ್ಗೆ ಚರ್ಚೆಗಳೂ ನಡೆದಿತ್ತು. ಈಗ ಇದನ್ನು ಸರಿಪಡಿಸಲಾಗಿದೆ. ಕಳ್ಳರು ಈ ಸುಂದರ ಕಸದ ಬುಟ್ಟಿಗಳನ್ನು ಮಾಯ ಮಾಡುವ ಮೊದಲೇ, ಚುನಾವಣೆಯ ಬಿಸಿ ಹಾಗೂ ಬ್ಯುಸಿ ಮಧ್ಯೆಯೂ ಸರಿ ಪಡಿಸಿದ ಪಾಲಿಕೆಗೂ ಹಾಗೂ ಮೈಸೂರು ಮಿತ್ರನಿಗೂ ಪರಿಸರ ಪ್ರೇಮಿಗಳ ಪರವಾಗಿ ಧನ್ಯವಾದಗಳು.

–ಅನಿಲ್ ಕುಮಾರ್ ನಾಡಿಗೇರ್

ಇಂಧನ ಹಾಗೂ ಪರಿಸರ ಸಲಹಾಗಾರರು, ಮೈಸೂರು

■ ದೇವನೂರಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ನಂಜನಗೂಡು ತಾಲೂಕಿನ ದೇವನೂರು ಗ್ರಾಮದಲ್ಲಿ 1984ರಲ್ಲಿ ಸ್ಥಾಪಿತವಾದ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಚ್ಚುವ ಪರಿಸ್ಥಿತಿಯಲ್ಲಿ ಇತ್ತು. ಕಳೆದ ಎರಡು ವರ್ಷಗಳಿಂದ ಕಾಲೇಜನ್ನು ಉಳಿಸಿಕೊಳ್ಳುವ ಪ್ರಯತ್ನ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರಿಂದ ನಡೆದಿದ್ದರ ಫಲವಾಗಿ ಕೇವಲ 10–20 ವಿದ್ಯಾರ್ಥಿಗಳು ಇದ್ದ ಕಾಲೇಜು ಇಂದು 58 ವಿದ್ಯಾರ್ಥಿಗಳ ಸೇರ್ಪಡೆಗೆ ಕಾರಣವಾಗಿದೆ. ಆದರೆ ಈ ಕಾಲೇಜಿನಲ್ಲಿ ಇರುವ ಪ್ರಮುಖ ಕೊರತೆ ಏನೆಂದರೆ ತಗಡೂರಿನಿಂದ ದೇವನೂರಿಗೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದ ಕಾರಣ ವಿದ್ಯಾರ್ಥಿಗಳು ಈ ಕಾಲೇಜಿಗೆ ಸೇರಲು ಬಯಸುತ್ತಿಲ್ಲ. ಅದರಲ್ಲೂ ಹೆಣ್ಣುಮಕ್ಕಳನ್ನು ಅವರ ಪೋಷಕರು ತಗಡೂರಿನಿಂದ ನಂಜನಗೂಡಿಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ.

ಕೂಡಲೇ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಬಸ್ ಸೌಕರ್ಯ ಕಲ್ಪಿಸಿ ವಿದ್ಯಾರ್ಥಿಗಳು ಮತ್ತು ಗ್ರಾಮದ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.


– ಎಂ.ಚೈತ್ರ, ಮಹಾರಾಜ ಕಾಲೇಜು, ಮೈಸೂರು

■ ಮಿತ್ರನಿಗೆ 45ರ ಶುಭಾಶಯ

ಮಾನ್ಯರೆ,

ನಲ್ಮೆಯ ಮೈಸೂರು ಮಿತ್ರ,
ನೀನು ಬೆಳೆದಿರುವೆ ಬಹಳಷ್ಟು ಎತ್ರ,
ನೀನು ಭೂಮಿಗೆ ಬಂದು ಆಯಿತು ನಾಲ್ಕೂವರೆ ದಶಕ,
ನಮಗೆ ಬಿಸಿಬಿಸಿ ಸುದ್ದಿ ನೀಡೋದೇ ನಿನ್ನ ಕಾಯಕ,
ನಿನಗೆ ಆ (ಕೆ.ಬಿ) ಗಣಪತಿಯೇ ನಾಯಕ,
ನಿನ್ನದು ಹನ್ನೆರಡು ಪುಟದ ಗಾತ್ರ,
ಸತ್ಯ, ನ್ಯಾಯ, ನಿಷ್ಠೆ , ನಿನ್ನಯ ಸೂತ್ರ,
ನಿನ್ನ ಮುಂದೆ ನಡೆಯಲ್ಲ, ರಾಜಕಾರಣಿಗಳ ತಂತ್ರ ಕುತಂತ್ರ,
ಎಲ್ಲರ ಕಷ್ಟ ಕೇಳಲು ಹೋಗುವೆ ಅವರ ಹತ್ರ,
ನನಗೆ ಬಹಳ ಇಷ್ಟ ಕೆ.ಬಿ.ಜಿ ಅವರ ಭೂ ಮಂತ್ರ,
ನಿನಗಾಗಿ ನಾ ಬರೆದೆ ಈ ಪ್ರೀತಿಯ ಪತ್ರ.

– ಅಹಲ್ಯ .ಸಿ.ನಾ. ಚಂದ್ರ, ಜನತಾನಗರ, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಲೋಕಸಭಾ ಚುನಾವಣೆ–2024: 'ಮ್ಯಾಜಿಕ್ ಮೈತ್ರಿ'



ಪ್ರಧಾನ ಮಂತ್ರಿ ನರೇಂದ್ರ ಮೋದಿ



ವಯನಾಡ್ ಸಂಸದ ರಾಹುಲ್ ಗಾಂಧಿ

ಸಂಸತ್ ಚುನಾವಣೆ–2024ರ ಪ್ರಕ್ರಿಯೆ ಆರಂಭವಾಗಿದೆ. ಏಳು ಹಂತದಲ್ಲಿ ದೇಶದ ಸಂಸತ್‌ನ 543 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. 1977ರ ತುರ್ತು ಪರಿಸ್ಥಿತಿ ನಂತರದ ಚುನಾವಣೆಯನ್ನು ಹೊರತುಪಡಿಸಿ ನಾವು ಎಂದೂ ನೋಡದ ಹೊಸ ರೀತಿಯ ಚುನಾವಣಾ ಜ್ವರವನ್ನು ದೇಶ ಈಗ ಅನುಭವಿಸುತ್ತಿದೆ. ಆಗ, ನಿರೀಕ್ಷೆಯಂತೆ ಜನತಾ ಪಕ್ಷವು ಲೋಕ್‌ನಾಯಕ್ ಜಯಪ್ರಕಾಶ್ ನಾರಾಯಣ್ (ಜೆಪಿ) ಅವರ ಕ್ರಿಯಾತ್ಮಕ ಮತ್ತು ಸರ್ವಸಮ್ಮತ ನಾಯಕತ್ವದಲ್ಲಿ ಪ್ರಪ್ರಥಮ ಬಾರಿಗೆ ಭಾರೀ ಪ್ರಮಾಣದಲ್ಲಿ ಪ್ರತಿಪಕ್ಷಗಳು ಒಗ್ಗೂಡಿ ಕಾಂಗ್ರೆಸ್ ವಿರುದ್ಧ ಸೆಣಸಿ, ಗೆಲುವು ಸಾಧಿಸಿದ್ದವು.

ಆ ಸಮಯದಲ್ಲಿ ಭಾರತೀಯ ಜನ ಸಂಘ ಎಂದು ಕರೆಯಲ್ಪಡುತ್ತಿದ್ದ ಬಿಜೆಪಿಯು ತನ್ನ ಇತರ ಪಾಲುದಾರರಾದ ಕಾಂಗ್ರೆಸ್(ಒ), ಸೋಷಿಯಲಿಸ್ಟ್ ಪಾರ್ಟಿ ಆಫ್ ಇಂಡಿಯಾ (ರಾಜ್ ನರೇನ್ ಮತ್ತು ಜಾರ್ಜ್ ಫರ್ನಾಂಡೀಸ್ ಅವರಿಗೆ ಸೇರಿದ್ದು), ಭಾರತೀಯ ಲೋಕ್ ದಳ, ಚರಣ್ ಸಿಂಗ್ (ಈ ವರ್ಷ ಮರಣೋತ್ತರವಾಗಿ ಭಾರತ ರತ್ನ ಪುರಸ್ಕೃತ) ಅವರಿಗೆ ಸೇರಿದ್ದು, ಸ್ವತಂತ್ರ ಪಕ್ಷ (ಸಿ.ರಾಜಗೋಪಾಲಾಚಾರಿ ಮತ್ತು ಮಿನೂ ಮಸಾನಿಯ ಅವರದ್ದು). ಒಟ್ಟಿನಲ್ಲಿ ಜಯಪ್ರಕಾಶ್ ನಾರಾ ಯಣ್ ನೇತೃತ್ವದ 'ಸಂಪೂರ್ಣ ಕ್ರಾಂತಿ' ಸಿದ್ಧಾಂತದ (Total Revolution) ರಾಜಕೀಯ ಚಳವಳಿ ಜನತಾ ಮೋರ್ಚಾದ ಭಾಗವಾಗಿದ್ದ ಈ ಪಕ್ಷಗಳು ಅಂತಿಮವಾಗಿ ಜನತಾ ಪಕ್ಷವಾದವು (Janata Party).

ಚುನಾವಣಾ ಪ್ರಚಾರದ ಸಮಯದಲ್ಲಿ ಇಂದಿರಾ ಗಾಂಧಿಯವರು ಈ ಜನತಾ ಪಕ್ಷವನ್ನು ಯಾವುದೇ ರಾಜಕೀಯ ಅಥವಾ ನೈತಿಕ ತತ್ವಗಳಿಲ್ಲದ 'ವಿಚಿತ್ರ ಪ್ರಾಣಿ' ಮತ್ತು 'ಕಿಚಡಿ ಪಕ್ಷ' ಎಂದು ವ್ಯಂಗ್ಯವಾಗಿ ಟೀಕಿಸಿದ್ದರು. ಅವರು ಜನತಾ ಪಕ್ಷವನ್ನು 'ಅವಕಾಶವಾದಿ ಪಕ್ಷ' ಎಂದೂ ಜರಿದರು. ಹೀಗೆ ಇಂದಿರಾ ಗಾಂಧಿಯವರು ತಮ್ಮ ಮಾರ್ಮಿಕ ಮಾತುಗಳಲ್ಲಿ ಜನತಾ ಪಕ್ಷದ ವಿರುದ್ಧ ವಾಗ್ದಾಳಿಯನ್ನೇ ನಡೆಸಿದರು. ಜನತಾ ಪಕ್ಷಕ್ಕೆ ಅದೇ ಭವಿಷ್ಯಸೂಚಕವಾಗಿ ಪರಿಣಮಿಸಿತು. ಅಂತೂ ಚುನಾವಣೆಯಲ್ಲಿ ಗೆದ್ದು ಸರ್ಕಾರ ರಚಿಸಿದ ಜನತಾ ಪಕ್ಷದ ನಾಯಕರು ತಮ್ಮ ಮೈತ್ರಿಕೂಟದ ಪಕ್ಷಗಳನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದ ಕಾರಣ ಅತೀ ಶೀಘ್ರವೇ ಛಿದ್ರವಾಯಿತು. ಹೀಗೆ ಅಸಹಜವಾಗಿ ಒಗ್ಗೂಡಿದ್ದ ಪ್ರತಿಯೊಂದು ಪಕ್ಷವೂ ತನ್ನದೇ ಆದ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಕ್ಕೆ ಜೋತು ಬಿದ್ದು, ಕೇಂದ್ರವು ಅವರನ್ನು ಹಿಡಿದಿಡಲು ಸಾಧ್ಯವಾಗದೇ ಇದ್ದಾಗ ಸಹಜವಾಗಿ ಸರ್ಕಾರ ಕುಸಿಯುತ್ತದೆ.

ಈ ಮೈತ್ರಿಕೂಟದ ರಾಜಕೀಯ ಪಕ್ಷಗಳ ನಾಯಕರು ತಾವೂ ಪ್ರಧಾನ ಮಂತ್ರಿ ಆಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದು, ಅದಕ್ಕಾಗಿ ಎಂತಹ ವಾಮ ಮಾರ್ಗಕ್ಕೂ ಮುಂದಾಗಿದ್ದರು ಎನ್ನುವುದಕ್ಕೆ ಆಗಿನ ಕಾಲಮಾನದಲ್ಲಿದ್ದವರು ಸಾಕ್ಷಿಯಾಗಿದ್ದಾರೆ. ಅವರಲ್ಲಿ ನಾನೂ ಒಬ್ಬ. 1989ರಲ್ಲಿ ರಾಜೀವ್ ಗಾಂಧಿ ಸೋತಾಗ ಇದೇ ರೀತಿಯ ರಾಜಕೀಯ ಮೇಲಾಟಗಳು ಪುನರಾವರ್ತನೆ ಆಗುವುದನ್ನು ನೋಡುವಂತಾಯಿತು. ಆಗ ವಿ.ಪಿ.ಸಿಂಗ್ ಅವರು ಪ್ರಧಾನಮಂತ್ರಿಯಾಗಿ ಮಂಡಲ್ ಆಯೋಗದ ಮೂಲಕ ರಾಷ್ಟ್ರವನ್ನು ವಿಷಮಯಗೊಳಿಸಿದರು. ನಮ್ಮ ದೇಶದ ಹಿಂದಿನ ಆರೋಗ್ಯಕರ ಮೀಸಲಾತಿ ನೀತಿಯ ಮೇಲೆ ವಿನಾಶಕಾರಿ ಪರಿಣಾಮ ಬೀರಿ, ನಮ್ಮ ಸಮಾಜದ ಮೇಲೆ ಈಗಲೂ ಮಾರಕ ಪರಿಣಾಮ ಉಂಟಾಗುತ್ತಿದೆ.

ಮಂಡಲ್ ಆಯೋಗದ ಪೂರ್ವದಲ್ಲಿ, ಜಾತಿ ವ್ಯವಸ್ಥೆಯ ಅನಿಷ್ಟವು ಚುನಾವಣಾ ರಾಜಕೀಯದಲ್ಲಿ ಕೇವಲ ಒಂದು ಒಳ ಪ್ರವಾಹವಾಗಿತ್ತು. ಆದರೆ ಮುಂದಿನ ಕಾಲಮಾನದಲ್ಲಿ ಈ ಒಳ ಪ್ರವಾಹವು ಹೊರಚಿಮ್ಮಿ ನಂತರದ ಚುನಾವಣೆಗಳಲ್ಲಿ ಇದು ಉತ್ತರ ಪ್ರದೇಶ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ ಅನೇಕ ಜಾತಿ ಆಧಾರಿತ ಪ್ರಾಂತೀಯ ನಾಯಕರನ್ನು ಬೆಳೆಸಿತು. ಕರ್ನಾಟಕದಲ್ಲೂ ಜಾತಿ ಪೀಡೆ ರಾಜಕೀಯವಾಗಿ ಕಾಡತೊಡಗಿತು. ಈಗ ನಮ್ಮ ದೇಶದ ಚುನಾವಣಾ ರಾಜಕೀಯದಲ್ಲಿ ಜಾತಿ ವ್ಯವಸ್ಥೆ ಯನ್ನು ಸುಭದ್ರಗೊಳಿಸಲು ಜಾತಿ ಗಣತಿಗಾಗಿ ನಾವು ಗಟ್ಟಿಧ್ವನಿಯನ್ನು ಕೇಳುತ್ತಿರುವುದರಲ್ಲಿ ಆಶ್ಚರ್ಯವಿಲ್ಲ.

ಈ ಸಮಾಜ ವಿರೋಧಿ ಬೆಳವಣಿಗೆ ಹೋಗಲಾಡಿಸಲು ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕೆಂದು ಹೇಳುವವರು ಯಾರಾದರೂ ಇದ್ದರೆ ಅವರು ನಮ್ಮ ರಾಜಕಾರಣಿಗಳು; ಆದರೆ ಅವರು ಅದರ ಬಗ್ಗೆ ಏನೂ ಮಾಡುವುದಿಲ್ಲ. ನಾವು ವಿವೇಚನಾಶೀಲ ಮತ್ತು ಸಾಮಾಜಿಕ ಜ್ಞಾನದ ಯುಗಕ್ಕೆ ಸಾಗುತ್ತಿದ್ದೇವೆ. ಇಲ್ಲಿ ಸಾಮಾಜಿಕವಾಗಿ ಪ್ರತಿಯೊಬ್ಬ ನಾಗರಿಕನು ಸಮಾನ ಸ್ಥಾನಮಾನ ಹೊಂದಿದ್ದು, ಪರಸ್ಪರ ಗೌರವಾನ್ವಿತರಾಗಿ ಘನತೆಯಿಂದ ಬಾಳುತ್ತಾನೆ. ಆದರೆ ನೋಡಿ, ನಮ್ಮ ರಾಜಕಾರಣಿಗಳು ಏನು ಮಾಡಿದ್ದಾರೆ. ಅವರ ಅಧಿಕಾರದ ದುರಾಸೆಯಿಂದ ನಮ್ಮ ನಾಗರಿಕರನ್ನು ಸಾಮಾಜಿಕ ತಾರತಮ್ಯಕ್ಕೆ ದೂಡಿ ವಂಚಿತ ವರ್ಗಗಳ ಆತ್ಮಗಳನ್ನು ನಾಶಪಡಿಸಿದ್ದಾರೆ. ಆದ್ದರಿಂದ ಇನ್ನು ಮುಂದೆ ಈಗಿರುವ ರಾಜಕೀಯ ನಾಯಕರಿಂದ ಸಮಾಜ ಸುಧಾರಣೆ ಸಾಧ್ಯವಿಲ್ಲ. ಈಗ ಸಾಕಷ್ಟು ರಾಜಕೀಯ ನಾಯಕರಿದ್ದಾರೆ. ಪ್ರಸ್ತುತ ನಮಗೆ ಅಗತ್ಯವಿರುವುದು ಮಹಾತ್ಮ ಗಾಂಧಿ, ಮಹಾತ್ಮ ಜ್ಯೋತಿ ರಾವ್ ಫುಲೆ, ಸುಬ್ರಮಣ್ಯ ಭಾರತಿ, ಸ್ವಾಮಿ ವಿವೇಕಾನಂದ, ಡಾ. ಬಿ.ಆರ್. ಅಂಬೇಡ್ಕರ್, ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ನಾರಾಯಣಗುರು ಮುಂತಾದ **ಸಮಾಜ ಸುಧಾರಕರು**. ಹೌದು ಅಂತಹವರ ಒಂದು ಮಾದರಿಯಾಗಿ 2011ರಲ್ಲಿ ಅಣ್ಣಾ ಹಜಾರೆಯವರು ಬಂದರು. ಆದರೆ...!

ಒಂದು ವೇಳೆ **ಚುನಾವಣಾ ರಾಜಕೀಯದಿಂದ ಜಾತಿಯ ಅಂಶಗಳನ್ನು ಅದರ ಗುರುತುಗಳೊಂದಿಗೆ ಅಳಿಸಿ ಹಾಕದಿದ್ದರೆ, ಎಂದಿಗೂ ನಾವು ನ್ಯಾಯಯುತ ಮತ್ತು ಮುಕ್ತ ಚುನಾವಣೆ ಕಾಣಲು ಸಾಧ್ಯವಿಲ್ಲ**. ಆದ್ದರಿಂದ ಚುನಾವಣೆಯಲ್ಲಿ ಮತೀಯ ಅಂಶವನ್ನು ಸಂಪೂರ್ಣವಾಗಿ ತ್ಯಜಿಸಲು ನಮ್ಮ ರಾಜಕಾರಣಿಗಳನ್ನು ಸುಧಾರಿಸುವ ಉನ್ನತ ಸಮಾಜ ಸುಧಾರಕರ ಅಗತ್ಯ ಈಗ ನಮಗಿದೆ. ಇದು ಆದರ್ಶ ರಾಜ್ಯದ ಕಲ್ಪನೆಯೇ?

ಅದೇನೇ ಇರಲಿ, ಈಗ ಎದುರಾಗಿರುವ ಚುನಾವಣೆಯತ್ತ ಒಮ್ಮೆ ಕಣ್ಣು ಹಾಯಿಸೋಣ. ನಾನು ಹೇಳಿದಂತೆ, ಈ ಹಿಂದೆ 1977 ಮತ್ತು 1989ರಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವು ಚುನಾವಣೆಯಲ್ಲಿ ಗೆದ್ದಿದ್ದವು. ಆ ಮಟ್ಟಿಗೆ ಅದು ಯಶಸ್ವಿ ರಾಜಕೀಯ ತಂತ್ರವಾಗಿತ್ತು. ಆದರೂ ಅದು ಸರ್ಕಾರ ರಚನೆಯಾದ ಕೆಲ ಕಾಲದಲ್ಲೇ ನಾನಾ ಕಾರಣಕ್ಕೆ ಒಳ ಜಗಳಗಳಿಂದ ಕುಸಿದು ಬಿದ್ದಿತ್ತು.

ಆದರೆ, 2024ರ ಚುನಾವಣೆಯಲ್ಲಿ ಬಿಜೆಪಿಯನ್ನು (ಅಂದರೆ ಮೋದಿಯವರನ್ನು!) ಎದುರಿಸಲು ರಚನೆಯಾದ ಇದೇ ರೀತಿಯ ಒಕ್ಕೂಟಕ್ಕೆ ಏನಾಯಿತು ಎಂಬುದನ್ನು ಗಮನಿಸಿ. ಐಎನ್‌ಡಿಐಎ(I.N.D.I.A) ಮೈತ್ರಿಕೂಟ ಪ್ರಯಾಸದ ಪ್ರಸವದಲ್ಲಿ ಹುಟ್ಟಿದ ಮಗುವಂತಿದೆ. ಇದನ್ನು 'ಇಂಡಿಯಾ ಅಲೆಯನ್ಸ್' ಎಂದು ಕರೆಯುತ್ತಾರೆ. ಇಂಡಿಯಾ ಒಕ್ಕೂಟ ಎಂದೂ ಕರೆಯುತ್ತಾರೆ. ಈ ಮೈತ್ರಿಕೂಟ ಆಗಾಗ ಸ್ಫೋಟಗೊಂಡ ರೀತಿಯನ್ನು ನೋಡಿದ್ದೀರಿ. ಸರಪಳಿಯ ಬಲವು ಅದರ ದುರ್ಬಲ ಕೊಂಡಿಯನ್ನು ಅವಲಂಬಿಸಿರುತ್ತದೆ ಎಂದು ಹೇಳಲಾಗುತ್ತದೆ. ಆದರೆ ಇಲ್ಲಿ ಕಾಂಗ್ರೆಸ್ ಒಂದನ್ನು ಹೊರತುಪಡಿಸಿ ಅದರ ಎಲ್ಲಾ ಕೊಂಡಿಗಳು ದುರ್ಬಲವಾದಂತಿವೆ! ಕಾಂಗ್ರೆಸ್ ಸ್ವತಃ ಕಳೆದು ಹೋಗಿರುವಂತೆ ಕಾಣುತ್ತಿದೆ. ಅದರ ಪ್ರಧಾನಮಂತ್ರಿ ಅಭ್ಯರ್ಥಿ ಭಾರತದ ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡುತ್ತಿದ್ದಾರೆ. ನಿರ್ದಿಷ್ಟ ನೆಲೆ ತಲುಪುವ ಗ್ಯಾರಂಟಿ ಕಾಣುತ್ತಿಲ್ಲ.

ದೆಹಲಿಯ ಪತ್ರಿಕಾಗೋಷ್ಠಿಯಲ್ಲಿ, ತನ್ನದೇ ಯುಪಿಎ ಸರ್ಕಾರದ ಅಧಿಸೂಚನೆಯನ್ನು ಹರಿದು ಹಾಕುವಮೊಂಡು ಧೈರ್ಯವನ್ನು ಹೊಂದಿದ್ದ ಕುಪಿತ ಯುವಕ, 2024ರಲ್ಲಿ ಮೋದಿಯನ್ನು ಲೋಕಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಎದುರಿಸುತ್ತಿರುವ ಹಾಗೆ ಕಾಣುತ್ತದೆ. ಕಾಲಾಳುಗಳಿಲ್ಲದ ಒನ್ ಮ್ಯಾನ್ ಆರ್ಮಿಯಂತೆ. ಅವರ ಪಕ್ಷದ ಉನ್ನತ ಮಟ್ಟದ ನಾಯಕರೆಲ್ಲಾ ಒಬ್ಬರ ನಂತರ ಒಬ್ಬರು ಬಿಟ್ಟು ಹೋಗುತ್ತಿದ್ದಾರೆ. ಇತ್ತೀಚೆಗೆ ಡೆಕ್ಕನ್ ಹೆರಾಲ್ಡ್‌ನಲ್ಲಿ "ಎಂದಿಗೂ ಮುಗಿಯದ ಪಟ್ಟಿ" ಉಪ ಶೀರ್ಷಿಕೆಯೊಂದಿಗೆ ಕಾಂಗ್ರೆಸ್ ತೊರೆದ ನಾಯಕರ ಹೆಸರುಗಳ ಪಟ್ಟಿಯನ್ನೇ ಕೊಟ್ಟಿದ್ದರು. ಮತ್ತು ಕೊನೆಯ ಎಣಿಕೆಯಲ್ಲಿ 34 ಇದ್ದವು. ಇನ್ನೂ ಎಣಿಕೆ ನಡೆಯುತ್ತಲೇ ಇದೆ.

ಸರಿ, ಆದರೆ "ವರ್ಜೀನಿಯಾ ವುಲ್ಫ್‌ಗೆ ಯಾರು ಹೆದರುತ್ತಾರೆ?" ಅಥವಾ "ಬಿಗ್ ಬ್ಯಾಡ್ ವುಲ್ಫ್‌ಗೆ ಯಾರು ಹೆದರುತ್ತಾರೆ?" ಎಂದು ಇಂಗ್ಲೀಷ್ ಭಾಷೆಯಲ್ಲಿ ಒಂದು ಮಾತಿದೆ. ಇರಬಹುದು, ಆದರೆ ರಾಹುಲ್‌ಗಾಂಧಿಯಂತೂ ಅಲ್ಲ. ಮುಳುಗುತ್ತಿರುವ ಕಾಂಗ್ರೆಸ್ ದೋಣಿಯನ್ನು ತೊರೆದು ಹೋದವರಲ್ಲಿ ಅನೇಕ ಗೌರವಾನ್ವಿತ, ನಿಷ್ಠಾವಂತ ಕಾಂಗ್ರೆಸ್ಸಿಗರು ಇದ್ದಾರೆ. ಉದಾಹರಣೆಗೆ ಸುಪ್ರೀಂಕೋರ್ಟ್ ವಕೀಲ ಕಪಿಲ್ ಸಿಬಲ್, ಗುಲಾಂ ನಬಿ ಆಜಾದ್, ಅಮರಿಂದರ್ ಸಿಂಗ್, ಜ್ಯೋತಿರಾದಿತ್ಯ ಸಿಂಧಿಯ ಮತ್ತು ಮಿಲಿಂದ್ ದಿಯೋರಾ...! ಹೌದು, ಇತರರು ತಮ್ಮನ್ನು ಇಡಿ (ED) ಯಿಂದ ರಕ್ಷಿಸಿಕೊಳ್ಳಲು ಬಿಟ್ಟು ಹೋಗಿರಬಹುದು.

ಆದಾಗ್ಯೂ, ಸಂಸತ್ತಿನ ಚುನಾವಣೆಯ ನಿರ್ಣಾಯಕ ಸಮಯದಲ್ಲಿ ಕಾಂಗ್ರೆಸ್ ಹೈಕಮಾಂಡ್ ಈ ಹಿರಿಯ ನಾಯಕರನ್ನು ಕಳೆದುಕೊಳ್ಳಬೇಕೇ? ಇಲ್ಲ. ರಾಹುಲ್ ಗಾಂಧಿಯವರ ಮುತ್ತಜ್ಜ ನೆಹರೂ ಅಥವಾ ಅವರ ಅಜ್ಜಿ ಇಂದಿರಾ ಗಾಂಧಿ ಮತ್ತು ಅವರ ತಂದೆ ರಾಜೀವ್ ಗಾಂಧಿ ಆಗಿದ್ದರೆ ಈ ಪ್ರಖ್ಯಾತರು ಬಿಟ್ಟು ಹೋಗಲು ಅವಕಾಶ ಮಾಡಿಕೊಡುತ್ತಿರಲಿಲ್ಲ. ನೆಹರೂರವರು ಜನರಲ್ ಕೆ.ಎಸ್. ತಿಮ್ಮಯ್ಯನವರು ರಾಜೀನಾಮೆ ನೀಡುವುದನ್ನು ವಿ.ಕೆ.ಕೃಷ್ಣ ಮೆನನ್ ಹೊರತಾಗಿಯೂ ತಡೆಯಲಿಲ್ಲವೆ? ಆದರೆ ರಾಹುಲ್ ಗಾಂಧಿಗೆ ಕೆಚ್ಚಿದೆ. ಅವರು ಸುಮ್ಮನೆ, 'ನಿಮಗೆಲ್ಲಾ ನಾನು ಕೇರ್ ಮಾಡಲ್ಲ' ಎಂಬ ಧಾಟಿಯಲ್ಲಿ 'ನಾಳೆ ಹೊರಡುವ ಜನರು ಇಂದೇ ಹೋಗಬೇಕು' ಎಂದು ಹೇಳಿದರು.

ಈಗ 2024ರ ಸಂಸತ್ ಚುನಾವಣೆ ಪ್ರಕ್ರಿಯೆ ನಡೆಯುತ್ತಿದೆ. ಚುನಾವಣೆ ನಂತರ ಯಾರು ಹೊರಡುತ್ತಾರೋ, ಯಾರು ಉಳಿಯುತ್ತಾರೋ ಗೊತ್ತಿಲ್ಲ. ಫಲಿತಾಂಶ ಕಾದು ನೋಡೋಣ.

(ಇಂಗ್ಲೀಷ್ ಲೇಖನದ ಕನ್ನಡಾನುವಾದ)

Email: voice@starofmysore.com

ಮಹಿಳೆಯರು ಯಾವ ರೀತಿ ದಾರಿ ತಪ್ಪಿದ್ದಾರೆಂದು ಕುಮಾರಸ್ವಾಮಿ ಸ್ಪಷ್ಟಪಡಿಸಲಿ


ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಆಗ್ರಹ

ಮೈಸೂರು, ಏ.15(ಬಿಎಲ್‌ಯು)– ಮಹಿಳೆಯರು ಯಾವ ರೀತಿ ದಾರಿ ತಪ್ಪಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಲಿ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಪುಷ್ಪಾ ಅಗ್ರಹಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಕ್ತಿ ಯೋಜನೆ ಉಪಯೋಗ ಪಡೆದಿರುವ ಮಹಿಳೆಯರು ದುಡಿದು ಬದುಕು ಕಟ್ಟಿಕೊಳ್ಳಲು ಕಾರ್ಖಾನೆಗಳಿಗೆ, ಕಚೇರಿಗಳಿಗೆ ಹೋಗುತ್ತಿದ್ದಾರೆ. ಇದರಿಂದ ಹೆಣ್ಣು ಮಕ್ಕಳು ಹೇಗೆ ದಾರಿ ತಪ್ಪಿದ್ದಾರೆ ಎಂದು ಪ್ರಶ್ನಿಸಿದರು.

ಎರಡು ಬಾರಿ ಮುಖ್ಯಮಂತ್ರಿ ಆಗಿದ್ದ ಕುಮಾರಸ್ವಾಮಿ ಹೀಗೆ ಹೆಣ್ಣು ಮಕ್ಕಳ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಅವಶ್ಯಕತೆ ಇಲ್ಲವೆಂದು ಮಂಡ್ಯದಲ್ಲಿ ಗೋ ಬ್ಯಾಕ್ ಪ್ರತಿಭಟನೆ ನಡೆಸಿದ್ದೆವು ಎಂದು ಹೇಳಿದರು.

ಮನೆ ಕೆಲಸ ಮಾಡುವ ಮಹಿಳೆಯರಿಗೆ ಯಾವುದೇ ಭದ್ರತೆ ಇಲ್ಲ. ಆದ ಕಾರಣ ಗೃಹಲಕ್ಷ್ಮಿ ಯೋಜನೆಯಲ್ಲಿ ಎರಡು ಸಾವಿರ ರೂಪಾಯಿ ನೀಡಲಾಗುತ್ತಿದೆ. ಇದರಿಂದ ಮಹಿಳೆಯರಿಗೆ ಬಹಳಷ್ಟು ಅನುಕೂಲವಾಗಿದೆ. ಆದರೆ ಇದನ್ನು ಅರಿಯದೆ ಕುಮಾರಸ್ವಾಮಿ ಮಹಿಳೆಯರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಅಷ್ಟಕ್ಕೂ ಮಹಿಳೆಯರ ಬಗ್ಗೆ ಇವರು ಹೀಗೆಲ್ಲಾ ಮಾತನಾಡಲು ಹಕ್ಕು ಕೊಟ್ಟವರು ಯಾರು ಎಂದು ಪುಷ್ಪಾ ಪ್ರಶ್ನಿಸಿದರು.



ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಹಿಳೆಯರು ಸಮಾಜದ ಮುಖ್ಯ ವಾಹಿನಿಗೆ ಬರುವುದು ಅಂಬೇಡ್ಕರ್ ವಾದವಾಗಿತ್ತು. 12ನೇ ಶತಮಾನದಲ್ಲಿ ಬಸವಣ್ಣನವರ ಆಶಯ ಕೂಡ ಇದೇ ಆಗಿತ್ತು. ಈ ಹಿನ್ನೆಲೆಯಲ್ಲಿ ಬಸವಣ್ಣನವರು ಕೂಡ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡಿದ್ದರು. ಆದರೆ ಕುಮಾರಸ್ವಾಮಿ ಮಾತ್ರ ಮಹಿಳೆಯರ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ ಎಂದು ಕಿಡಿಕಾರಿದರು. ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಆಗಿರುವ ಕಾರಣ ಕುಮಾರಸ್ವಾಮಿ ಮಾತ್ರವಲ್ಲದೆ ಮೋದಿ ಕೂಡ ಮಹಿಳೆಯರಲ್ಲಿ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೈಸೂರಿಗೆ ಬಂದಾಗಲೆಲ್ಲಾ ಮೋದಿ ಸುಳ್ಳು ಹೇಳಿ ಹೋಗುತ್ತಾರೆ. ಮೈಸೂರನ್ನು ಪ್ಯಾರಿಸ್ ಮಾಡುವ ಭರವಸೆ ಕೂಡ ಈಡೇರಿಸಲಿಲ್ಲ. ಇದರಿಂದ ಬಿಜೆಪಿ ಮತ್ತು ಜೆಡಿಎಸ್‌ಗೆ ಮತ ಕೇಳುವ ನೈತಿಕ ಹಕ್ಕು ಇಲ್ಲ ಎಂದರು. ಮಾಜಿ ಮೇಯರ್ ಮೋದಾಮಣಿ, ಕಾಂಗ್ರೆಸ್ ಮುಖಂಡರಾದ ಡಾ.ಸುಜಾತ ಪ್ರತಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 16 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 1 | ಪುಟಗಳು: 12+XII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಧನ್ಯೋಸ್ಮಿ

ಪ್ರಿಯ ಓದುಗರೆ,

ನಿಮ್ಮ ನೆಚ್ಚಿನ 'ಮೈಸೂರು ಮಿತ್ರ' ಇಂದಿಗೆ 44 ವಸಂತಗಳನ್ನು ಪೂರೈಸಿ 45ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾನೆ. ಈ ಶುಭ ಸಂದರ್ಭದಲ್ಲಿ 'ಮಿತ್ರ'ನಿಗೆ ಶಕ್ತಿ ತುಂಬಿದ ನಿಮಗೆ ನಮ್ಮ ಕೃತಜ್ಞತೆಗಳು.

ನಿಮ್ಮ ತುಂಬು ಮನಸ್ಸಿನ ಪ್ರೋತ್ಸಾಹದಿಂದಲೇ ಜಿಲ್ಲಾ ಮಟ್ಟದ ಪತ್ರಿಕೆಯಾಗಿದ್ದ 'ಮೈಸೂರು ಮಿತ್ರ' ಈಗ ದಕ್ಷಿಣ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ಹಾಗೂ ಅತ್ಯಧಿಕ ಪ್ರಸರಣವುಳ್ಳ ಪ್ರಾದೇಶಿಕ ಪತ್ರಿಕೆಯಾಗಿ ರಾರಾಜಿಸುವುದು ಸಾಧ್ಯವಾಗಿದೆ. ನಿಮ್ಮ ಪ್ರೀತಿಯೇ 'ಮಿತ್ರ'ನಿಗೆ ಶ್ರೀರಕ್ಷೆ. ಮುಂದೆಯೂ ನಿಮ್ಮಿಂದ ಇದೇ ರೀತಿಯ ಅಭಿಮಾನಪೂರಕ ಸಹಕಾರವನ್ನು ನಿರೀಕ್ಷಿಸುತ್ತೇವೆ.

'ಮೈಸೂರು ಮಿತ್ರ' 45ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸುಸಂದರ್ಭದಲ್ಲಿ 12 ಪುಟಗಳ ವರ್ಣರಂಜಿತ ವಿಶೇಷಾಂಕವನ್ನು ಹೊರ ತರುತ್ತಿದ್ದೇವೆ. ಈ ಶುಭ ವೇಳೆ ನಮಗೆ ಶುಭ ಹಾರೈಸಿ, ಜಾಹೀರಾತು ನೀಡಿ ಸಹಕರಿಸಿದ ಎಲ್ಲಾ ಜಾಹೀರಾತುದಾರರಿಗೂ ಹೃದಯಪೂರ್ವಕ ಕೃತಜ್ಞತೆಗಳು.

ಒಂದು ಸಂಸ್ಥೆಯ 45 ವರ್ಷಗಳ ಸೇವಾ–ಸಾಧನೆಯ ಹಾದಿ ಸುಲಭವೇನು ಅಲ್ಲ. ಸಾಕಷ್ಟು ಅಡೆತಡೆಗಳು, ಸಮಸ್ಯೆಗಳು ಎದುರಾಗುವುದು ಸಹಜ. ಅವೆಲ್ಲವನ್ನೂ ಸಂಯಮದಿಂದ ದಾಟಿ, ದಿಟ್ಟತನದಿಂದ ಮುಂದೆ ಸಾಗಿದರಷ್ಟೇ ಸಾಧನೆ ಶಿಖರ ಏರಲು ಸಾಧ್ಯ. ಹಾಗೆಯೇ ಈ ನಮ್ಮ 45ರ ಯಶಸ್ಸಿನ ಶಿಖರಾರೋಹಣಕ್ಕೆ ಬೆನ್ನೆಲುಬಾಗಿ, ಬೆಂಬಲವಾಗಿ ನಿಂತಿರುವ ಎಲ್ಲರನ್ನೂ ಮತ್ತೊಮ್ಮೆ ಸ್ಮರಿಸಿಕೊಳ್ಳುತ್ತೇವೆ.

ಕಳೆದ ನಾಲ್ಕು ವರ್ಷಗಳ ಹಿಂದೆ ವಿಶ್ವದಲ್ಲಿ ಆವರಿಸಿದ ಕೊರೊನಾ ಸೋಂಕು ಎಲ್ಲಾ ಕ್ಷೇತ್ರಗಳಲ್ಲೂ ಅಲ್ಲೋಲಕಲ್ಲೋಲವನ್ನೇ ಉಂಟು ಮಾಡಿತ್ತು. ಅದರಲ್ಲೂ ಮೂರು ವರ್ಷವಂತೂ ಜನ ಜೀವ ಉಳಿಸಿಕೊಳ್ಳುವುದಕ್ಕಾಗಿಯೇ ಹೋರಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಸದ್ಯ ಸೋಂಕು ನಿಯಂತ್ರಣಕ್ಕೆ ಬಂದ ಕಾರಣ ಹಂತ ಹಂತವಾಗಿ ಜನ ಜೀವನ ಸುಧಾರಿಸಿದೆ. ಆದರೂ ಕೊರೊನಾ ಕಾಲಘಟ್ಟದಲ್ಲಾದ ಕಷ್ಟ–ನಷ್ಟದ ಕರಿನೆರಳು ಇನ್ನೂ ಸಂಪೂರ್ಣವಾಗಿ ಮರೆಯಾಗಿಲ್ಲ. ಇರಲಿ, ಆಶಾಭಾವನೆಯೊಂದಿಗೆ ಆತ್ಮವಿಶ್ವಾಸದಿಂದ ಸಮಾಜದ ಒಳಿತು ಬಯಸಿ ಮುನ್ನಡೆಯೋಣ.

'ಮಿತ್ರ'ನ ಈ ವಾರ್ಷಿಕೋತ್ಸವ ವೇಳೆ 'ಪ್ರಜಾಪ್ರಭುತ್ವದ ಹಬ್ಬ' ಲೋಕಸಭಾ ಸಾರ್ವತ್ರಿಕ ಚುನಾವಣೆ ನಡೆಯುತ್ತಿದೆ. ನಾವಂತೂ ಈ ನಾಲ್ಕೂವರೆ ದಶಕಗಳ ಪಯಣದಲ್ಲಿ, ಸಾಕಷ್ಟು ಪ್ರಜಾಪ್ರಭುತ್ವದ ಉತ್ಸವಗಳಲ್ಲಿ ಸಂಭ್ರಮದಿಂದ ಭಾಗಿಯಾಗಿದ್ದೇವೆ. ಚುನಾವಣೆ ನಿರ್ವಹಣೆ ಹೊಣೆ ಹೊತ್ತ ಆಡಳಿತ ಯಂತ್ರ, ಚುನಾವಣಾ ಆಯೋಗಕ್ಕೆ ಒತ್ತಾಸೆಯಾಗಿ, ಸಾರ್ವಜನಿಕರಲ್ಲಿ ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಸತ್ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ. ಇದು ನಮ್ಮ ಆದ್ಯ ಕರ್ತವ್ಯವೂ ಹೌದು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳೆಂಬುದು ಎಲ್ಲರ ಅರಿವಿನಲ್ಲಿದೆ. ಪ್ರತಿಯೊಬ್ಬರೂ ಕಾನೂನಿನ ಆಡಳಿತಕ್ಕೆ ಒಳಪಟ್ಟಿರುವುದರಿಂದ ಇಂತಹ ಕಾನೂನು ರೂಪಿಸುವವರನ್ನು ಆಯ್ಕೆ ಮಾಡುವ ಗುರುತರ ಜವಾಬ್ದಾರಿ ಪ್ರತಿಯೊಬ್ಬ ಮತದಾರನ ಮೇಲಿದೆ. ಯಾವ ಅಪೇಕ್ಷೆ ಇಲ್ಲದೆ, ಆಮಿಷಕ್ಕೆ ಒಳಗಾಗದೇ ಪ್ರಾಮಾಣಿಕವಾಗಿ ತಮ್ಮ ಪವಿತ್ರ ಹಕ್ಕು ಚಲಾಯಿಸುವ ಮೂಲಕ ಜನಪರ ಸರ್ಕಾರವನ್ನು ರೂಪಿಸಿಕೊಳ್ಳಬೇಕಿದೆ. ಆ ನಿಟ್ಟಿನಲ್ಲಿ ಎಲ್ಲರದ್ದೂ ಪ್ರಾಮಾಣಿಕ ನಡೆ ಅತ್ಯಂತ ಅವಶ್ಯ. ಹಾಗೆಯೇ ತಪ್ಪದೇ ಮತದಾನ ಮಾಡಬೇಕಿದೆ.

ಕೊನೆಯದಾಗಿ 'ಮೈಸೂರು ಮಿತ್ರ'ನ ಈ ಸುದೀರ್ಘ ಪಯಣದಲ್ಲಿ ಜೊತೆಯಾಗಿ ಸಾಗಿ ಬರುತ್ತಿರುವ ಸರ್ವರಿಗೂ, ಅತೀ ಮುಖ್ಯವಾಗಿ ಬಿಸಿಲು, ಮಳೆ, ಚಳಿ ಯಾವುದನ್ನೂ ಲೆಕ್ಕಿಸದೆ ಪತ್ರಿಕೆಯನ್ನು ಆತ್ಮೀಯ ಓದುಗರ ಮನೆ ಮನೆಗೆ ತಲುಪಿಸುತ್ತಿರುವ ಪತ್ರಿಕಾ ವಿತರಕರಿಗೆ ನಮ್ಮ ಅನಂತಾನಂತ ವಂದನೆಗಳು. ನಿಮ್ಮೆಲ್ಲರ ಪ್ರೀತಿಯ ಆಸರೆ ಸದಾ ಇರಲಿ

–ಸಂಪಾದಕ

ನಾಳೆ ಮಂಡ್ಯ, ಕೋಲಾರದಲ್ಲಿ ರಾಹುಲ್ ಗಾಂಧಿ ಪ್ರಚಾರ ಅಬ್ಬರ

ಜೆಡಿಎಸ್ ಪ್ರಾಬಲ್ಯವುಳ್ಳ ಎರಡೂ ಕ್ಷೇತ್ರದಲ್ಲಿ ರೋಡ್ ಶೋ; ಬೃಹತ್ ಸಮಾವೇಶ



ಬೆಂಗಳೂರು, ಏ.15(ಕೆಎಂಶಿ)– ಜೆಡಿಎಸ್ ಭದ್ರಕೋಟೆ ಮಂಡ್ಯ, ಕೋಲಾರದಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಏಪ್ರಿಲ್ 17ರಂದು ಚುನಾವಣಾ ರೋಡ್ ಶೋ ಹಾಗೂ ಬೃಹತ್ ಸಮಾವೇಶ ನಡೆಸಲಿದ್ದಾರೆ.

ಅಂದು ರಾಹುಲ್ ಗಾಂಧಿ ಮಂಡ್ಯದಲ್ಲಿ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡುವ ಮೂಲಕ ಮೈಸೂರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಎತ್ತಿರುವ ಪ್ರಶ್ನೆಗಳಿಗೆ ಉತ್ತರ ಕೊಡುವ ವೇದಿಕೆ ಮಾಡಿಕೊಳ್ಳಲಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಮೊದಲ ಹಂತದ ಚುನಾವಣೆಯಲ್ಲಿ ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಎನ್‌ಡಿಎ ಅಭ್ಯರ್ಥಿಗಳ ಪರ ಒಂದು ಸುತ್ತಿನ ಚುನಾವಣಾ ಪ್ರಚಾರ ಮುಗಿಸಿ ಹಿಂತಿರುಗುತ್ತಿದ್ದಂತೆ, ರಾಹುಲ್ ಕರ್ನಾಟಕದಲ್ಲಿ ಮೊದಲ ಪ್ರವಾಸ ಕೈಗೊಂಡಿದ್ದಾರೆ. ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಎನ್‌ಡಿಎ ಅಭ್ಯರ್ಥಿಯಾಗಿ ಮಂಡ್ಯದಲ್ಲಿ ಕಣಕ್ಕಿಳಿದಿರುವ ಜೊತೆಗೆ ಬಿಜೆಪಿಯ ಹೆಗಲಿಗೆ ಹೆಗಲು ಕೊಟ್ಟು ಮೈತ್ರಿಕೂಟದ ಅಭ್ಯರ್ಥಿಗಳ ಪರ ಹೋರಾಟ ನಡೆಸಿದ್ದಾರೆ. ರಾಹುಲ್ ಪ್ರಚಾರ ಕೈಗೊಳ್ಳುವ ಕೋಲಾರದಲ್ಲೂ ಜೆಡಿಎಸ್‌ನ ಮಲ್ಲೇಶ ಬಾಬು ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಪ್ರದೇಶ ಕಾಂಗ್ರೆಸ್ ಈ ಎರಡೂ ಕ್ಷೇತ್ರಗಳನ್ನು ಗುರಿಯಾಗಿಟ್ಟುಕೊಂಡು ರಾಹುಲ್ ವರ್ಚಸ್ಸು ಮುಂದಿಟ್ಟುಕೊಂಡು ಮತ ಪಡೆಯಲು ಹೊರಟಿದೆ.

● 8ನೇ ಪುಟಕ್ಕೆ

ನಿಮಗೆ ಈ ಇಳಿವಯಸ್ಸಲ್ಲಿ ಶರಣಾಗತಿ ಸ್ಥಿತಿ ಯಾಕೆ ಬಂತು!

● ಮಾಜಿ ಪ್ರಧಾನಿ ದೇವೇಗೌಡರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಮಿಕ ಪ್ರಶ್ನೆ ● ಮೋದಿ ಟೀಕಿಸಿದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದ ಗೌಡರಿಗೆ ಸಿದ್ದರಾಮಯ್ಯ ತಿರುಗೇಟು



ಬೆಂಗಳೂರು, ಏ. 15– ಆರು ಕೋಟಿ ಜನರ ಪ್ರತಿನಿಧಿಯಾಗಿರುವ ಮುಖ್ಯಮಂತ್ರಿ, 140 ಕೋಟಿ ಜನರ ಪ್ರತಿನಿಧಿಯಾಗಿರುವ ಪ್ರಧಾನಿ ಬಗ್ಗೆ ಮಾತನಾಡುವುದು ಸರಿಯೇ? ಎಂದು ಪ್ರಶ್ನಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿರುದ್ಧ ಕಿಡಿಕಾರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಿರಂತರವಾಗಿ ಕೇಂದ್ರ ಸರ್ಕಾರ ಮತ್ತು ಪ್ರಧಾನಿಯವರನ್ನು ಟೀಕಿಸುತ್ತಾ ಬಂದ ನಿಮಗೆ ಈ ಇಳಿವಯಸ್ಸಿನಲ್ಲಿ ಈ ಬಗೆಯ ಶರಣಾಗತಿ ಸ್ಥಿತಿ ಯಾಕೆ ಬಂತು? ಎಂದು ಪ್ರಶ್ನಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ದೇವೇಗೌಡರೆ ನೀವು ಹಿಂದಿನ ಪ್ರಧಾನಿಗಳನ್ನು ಯಾವ ಯಾವ ರೀತಿಯಲ್ಲಿ ಪ್ರಶ್ನಿಸಿದ್ದೀರಿ, ದೂರಿದ್ದೀರಿ, ಕೆಣಕಿದ್ದೀರಿ ಎಂಬ ಪಟ್ಟಿ ನಾನು ನಿಮಗೆ ಕೊಡಬಲ್ಲೆ. 2002ರ ಗುಜರಾತ್ ಗಲಭೆ ಬಗ್ಗೆ ಲೋಕಸಭೆಯಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ವಿರುದ್ಧ ನೀವು ಪ್ರಯೋಗ ಮಾಡಿರುವ ಟೀಕಾಸ್ತ್ರಗಳು ಸದನದ ದಾಖಲೆಯಲ್ಲಿರಬಹುದು. ಅದನ್ನು ನಾನು ಈಗಲೂ ತಪ್ಪೆಂದು ಹೇಳುವುದಿಲ್ಲ. ಇವೆಲ್ಲವು ಸಂಸದೀಯ, ಪ್ರಜಾಪ್ರಭುತ್ವ ನಡವಳಿಕೆಗಳ ಭಾಗವಾಗಿರುತ್ತವೆ. ಆಗ ನೀವು ಮುಖ್ಯಮಂತ್ರಿಯೂ ಆಗಿರಲಿಲ್ಲ. ಕೇವಲ ಒಂದು ಲೋಕಸಭಾ ಕ್ಷೇತ್ರದ ಪ್ರತಿನಿಧಿಯಾಗಿದ್ದವರು. ಆಗ ನೂರು ಕೋಟಿ ಹಾಗೂ ಆರು ಕೋಟಿ ವ್ಯತ್ಯಾಸಗಳು ನಿಮ್ಮನ್ನು ಬಾಧಿಸಿರಲಿಲ್ಲವೇ? ಕೆಲವೇ ತಿಂಗಳ ಹಿಂದೆ ನರೇಂದ್ರ ಮೋದಿಯವರಿಗಿಂತ ಕನಿಷ್ಠ 10 ವರ್ಷ ಸಣ್ಣವರಾಗಿರುವ ಹಾಗೂ ಕೇವಲ ಒಬ್ಬ ಶಾಸಕನಾಗಿರುವ ನಿಮ್ಮ ಮಗ ಕುಮಾರಸ್ವಾಮಿಯವರು ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಯಾವ ಭಾಷೆ ಬಳಸಿ ತರಾಟೆಗೆ ತೆಗೆದುಕೊಂಡಿದ್ದರು ಎಂಬುದು ನಾಡಿನ ಜನ ಇನ್ನೂ ಮರೆತಿಲ್ಲ. ನಿಮ್ಮ ನೆನಪಿನಲ್ಲೂ ಇರಬಹುದು. ಆಗ ನೀವು ಯಾಕೆ ನೂರು ಕೋಟಿ ಜನರನ್ನು ಪ್ರತಿನಿಧಿಸುತ್ತಿರುವ ಪ್ರಧಾನ ಮಂತ್ರಿಯನ್ನು ಟೀಕಿಸಬಾರದು ಎಂದು ನಿಮ್ಮ ಮಗನಿಗೆ ಕಿವಿಹಿಂಡಿ ಬುದ್ಧಿ

● 8ನೇ ಪುಟಕ್ಕೆ

ಹೆಚ್‌ಡಿಕೆ – ಡಿಕೆಶಿ ಟಾಕ್ ಫೈಟ್....

ಮಿಸ್ಟರ್ ಶಿವಕುಮಾರ್, ಹೆಣ್ಣು ಮಕ್ಕಳ ಹೆದರಿಸಿ ಆಸ್ತಿ ಲಪಟಾಯಿಸಿದಾಗ ಅಳು ಬರಲಿಲ್ಲವೇ?



ಬೆಂಗಳೂರು, ಏ. 15– ಹೆಣ್ಣು ಮಕ್ಕಳನ್ನು ಅವಮಾನಿಸುವ ಯಾವುದೇ ಮಾತುಗಳನ್ನು ಆಡಿಲ್ಲ. ನನ್ನ ಮಾತಿನಿಂದ ನೋವಾಗಿದ್ದರೆ ವಿಷಾದಿಸುತ್ತೇನೆ ಎಂದು ತಿಳಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ತಮ್ಮ ವಿರುದ್ಧ ಹೋರಾಟಕ್ಕೆ ಕರೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಇಂದಿರಾ ಗಾಂಧಿ ಸತ್ತ ನಂತರ ಈಗ ಕಣ್ಣಲ್ಲಿ ನೀರು ಬಂದಿದೆಯಂತೆ. ಹೆಣ್ಣು ಮಕ್ಕಳ ಸಭೆ ನಡೆಸಿ ಗಳಗಳನೇ ಅತ್ತಿದ್ದಾರೆ. ಅಮಾಯಕ ಹೆಣ್ಣು ಮಕ್ಕಳನ್ನು ಕಿಡ್ನಾಪ್ ಮಾಡಿ, ಹೆದರಿಸಿ, ಬೆದರಿಸಿ ಅವರ ಆಸ್ತಿ–ಪಾಸ್ತಿಗಳನ್ನು ಲಪಟಾಯಿಸಿದಾಗ ಮಿಸ್ಟರ್ ಶಿವಕುಮಾರ್ ಅವರಿಗೆ ಅಳುಬಂದಿಲ್ಲ. ಮಿಸ್ಟರ್ ಶಿವಕುಮಾರ್ ಜೊತೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಇದ್ದಾರೆ. ಅವರು ಚಿತ್ರನಟಿ ಹೇಮಾಮಾಲಿನಿ ವಿರುದ್ಧ ಹೇಳಿರುವುದನ್ನು ಕನ್ನಡದಲ್ಲಿ ಹೇಳೋಕ್ಕಾಗಲ್ಲ. ಅದು ಮಹಿಳೆಯರಿಗೆ ಗೌರವ ಕೊಡುವ ಹೇಳಿಕೆಯೇ? ಎಂದು ಪ್ರಶ್ನಿಸಿದ್ದಾರೆ.

ಚಿತ್ರನಟಿ ಕಂಗನಾ ರಣಾವತ್ ಅವರಿಗೆ ಬಿಜೆಪಿ ಟಿಕೆಟ್ ಕೊಟ್ಟಾಗ ಮಿಸ್ಟರ್ ಶಿವಕುಮಾರ್ ನಿಮ್ಮ ಪಕ್ಷದ ಮುಖಂಡರು, ಅವರಿಗೆ ರೇಟ್ ಫಿಕ್ಸ್ ಮಾಡಿದ್ದು, ವಿಧಾನಸಭೆ ಕಲಾಪದಲ್ಲಿ ರಮೇಶ್‌ಕುಮಾರ್, ಅತ್ಯಾಚಾರ ಅನಿವಾರ್ಯವಾದರೆ ಆನಂದಿಸಿ ಎಂದಿದ್ದರು. ಶಾಮನೂರು ಶಿವಶಂಕರಪ್ಪ ಅವರು ಮಹಿಳೆಯರು ಅಡುಗೆ ಮನೆಯಲ್ಲಿರಬೇಕು ಹೊರಗೆ ಬರಬಾರದು ಎಂದು ಹೇಳಿದ್ದಾರೆ. ನಿಮ್ಮ ಕಾಂಗ್ರೆಸ್ ನಾಯಕರ ಇಂತಹ ನೂರಾರು ನುಡಿಮುತ್ತಿನ ನಿದರ್ಶನ ಇದೆ. ಶಿವಕುಮಾರ್ ಇದಕ್ಕೆ ಉತ್ತರ ಕೊಡಪ್ಪಾ ಎಂದು ಅವರು ಹೇಳಿದ್ದಾರೆ.

ಮಿಸ್ಟರ್ ಕುಮಾರಸ್ವಾಮಿ, ನೀನು ಮೋಸಗಾರ, ಸುಳ್ಳುಗಾರ, ಗೆಲ್ಲಲ್ಲ...!




ಬೆಳಗಾವಿ, ಏ.15– ಮಿಸ್ಟರ್ ಕುಮಾರಸ್ವಾಮಿ ನೀನು ಗೆಲ್ಲಲ್ಲ... ನೀನು ಮೋಸಗಾರ, ಸುಳ್ಳುಗಾರ, ನಿನ್ನತ್ರ 48 ಎಕರೆ ಇದೆಯೋ, ಸಾವಿರ ಎಕರೆ ಇದೆಯೋ ವಿಧಾನಸಭೆಯಲ್ಲಿ ಚರ್ಚಿಸೋಣ ಬಾ... ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹರಿಹಾಯ್ದರು. ಬೆಳಗಾವಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಕ್‌ಪ್ಯಾಕೆಟ್ ಮಾಡಿ ಅವನಿಗೆ (ಕುಮಾರಸ್ವಾಮಿ) ರೂಢಿ ಅಲ್ವಾ? ಎಂದು ಏಕವಚನದಲ್ಲೇ ಗುಡುಗಿದ ಅವರು, ಈ ಅಪ್ಪ–ಮಗನ ಬಗ್ಗೆ ವರ್ಷದ ಹಿಂದೆ ಅಮಿತ್ ಷಾ ಮತ್ತು ಬಿಜೆಪಿಯವರು ಏನು ಮಾತನಾಡಿದ್ದರು ಎಂದು ಪ್ರಶ್ನಿಸಿದ ಡಿಕೆಶಿ, ಯಾರು ಬೆನ್ನಿಗೆ ಚೂರಿ ಹಾಕಿದರೋ ಅವರ ಜೊತೆಗೆ ನೆಂಟಸ್ತನ ಮಾಡಿಕೊಂಡಿದ್ದಾರೆ. ಇಬ್ಬರೂ ತಬ್ಬಿಕೊಂಡಿದ್ದಾರೆ ಎಂದು ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ಕುಟುಕಿದರು.

ಮಿಸ್ಟರ್ ಕುಮಾರಸ್ವಾಮಿ ನೀವು ಚುನಾವಣೆಯಲ್ಲಿ ಗೆಲ್ಲಲ್ಲ ಎಂದ ಡಿಕೆಶಿ, ಹೆದರಿಕೆಯಿಂದ ಪಕ್ಕದ ಕ್ಷೇತ್ರಕ್ಕೆ ಹೋಗಿದ್ದೀರಿ. ನೀನು ಮೋಸಗಾರ, ಸುಳ್ಳುಗಾರ, ನಿನ್ನ ಹತ್ತಿರ 48 ಎಕರೆ ಇದೆಯೋ, ಒಂದು ಸಾವಿರ ಎಕರೆ ಇದೆಯೋ ಎಲ್ಲದರ ಬಗ್ಗೆ ವಿಧಾನಸಭೆಯಲ್ಲಿ ಚರ್ಚಿಸೋಣ ಬಾರಯ್ಯ ಎಂದು ಹರಿಹಾಯ್ದರು.

ಹೆಣ್ಣು ಕುಟುಂಬದ ಕಣ್ಣು. ಕುಟುಂಬಕ್ಕೆ ಒಳ್ಳೆಯದಾಗಲಿ ಎಂದು 2 ಸಾವಿರ ರೂ. ಕೊಟ್ಟಿದ್ದೇವೆ. ಹೆಣ್ಣು ಮಕ್ಕಳು ಏನು ದಡ್ಡರಾ? ಮಹಿಳೆಯರಿಗೆ ಕುಮಾರಸ್ವಾಮಿ ಮಾತು ಸ್ವಾಭಿಮಾನದ ಪ್ರಶ್ನೆ, ಕುಮಾರಸ್ವಾಮಿ ಹೇಳಿಕೆ ಖಂಡಿಸಿ ಮಹಿಳೆಯರು ಹೋರಾಟ ಮಾಡಲೇಬೇಕು. ಪ್ರತಿಯೊಂದು ಮಹಿಳಾ ಸಂಘಟನೆ ಪಕ್ಷಭೇದ ಮರೆತು ಸ್ವಾಭಿಮಾನ ಉಳಿಸಿಕೊಳ್ಳಬೇಕು ಎಂದು ನಾನು ಕರೆ ಕೊಡುತ್ತೇನೆ. ಪ್ರತಿಯೊಂದು ತಾಲೂಕಿನಲ್ಲೂ ಹೋರಾಟ ಮಾಡಿ ಖಂಡಿಸಬೇಕು. ಹೆಣ್ಣು ಮಕ್ಕಳ ಪರ ನಾವು ನಿಲ್ಲಬೇಕು ಎಂದು ಶಿವಕುಮಾರ್ ಹೇಳಿದರು.

ಮೇಕೆದಾಟು, ಮಹದಾಯಿ ಯೋಜನೆಗಿರುವ ಕಾನೂನು ತೊಡಕು ನಿವಾರಿಸಿ

ಪ್ರಧಾನಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಮನವಿ




ಮೈಸೂರು,ಏ.15(ಪಿಎಂ)–ಕರ್ನಾಟಕದ ಕುಡಿಯುವ ನೀರಿನ ಬೇಡಿಕೆಗೆ ಅನುಕೂಲವಾಗುವ ಮೇಕೆದಾಟು ಮತ್ತು ಮಹದಾಯಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಎದುರಾಗಿರುವ ಎಲ್ಲಾ ರೀತಿಯ ಕಾನೂನು ತೊಡಕುಗಳನ್ನು ನಿವಾರಿಸುವಂತೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಮನವಿ ಸಲ್ಲಿಸಿದ್ದಾರೆ.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಸಮಾವೇಶದಲ್ಲಿ ಪ್ರಧಾನಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಮನವಿ ಸಲ್ಲಿಸಿದರು. ಲೋಕಸಭಾ ಚುನಾವಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ತವರು ಜಿಲ್ಲೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲೇಬೇಕೆಂಬ ನಿಟ್ಟಿನಲ್ಲಿ ಮುಂದುವರೆದಿದ್ದಾರೆ. ಆದರೆ ನಾವು ಮೈಸೂರು, ಚಾಮರಾಜನಗರ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳು ಮಾತ್ರವಲ್ಲ, ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲಿ ಗೆಲುವು



ಸಾಧಿಸಿ ಇತಿಹಾಸ ಬರೆಯುವುದು ಖಚಿತವಾಗಿದೆ. ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸಮರ್ಥ ನಾಯಕತ್ವದಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತಿದ್ದಾರೆ ಎಂಬುದನ್ನು ಮನವಿಯಲ್ಲಿ ತಿಳಿಸಿರುವ ಜಿ.ಟಿ.ದೇವೇಗೌಡರು, ಬೆಂಗಳೂರು ಕುಡಿಯುವ ನೀರಿಗೆ ಅನುಕೂಲವಾಗುವ ಮೇಕೆದಾಟು ಯೋಜನೆ ಹಾಗೂ ಹುಬ್ಬಳ್ಳಿ–ಧಾರವಾಡ ಸೇರಿದಂತೆ ಕಿತ್ತೂರು ಕರ್ನಾಟಕ ಪ್ರದೇಶದ ಕುಡಿಯುವ ನೀರಿಗೆ ಅನುಕೂಲವಾಗುವ ಮಹದಾಯಿ ನೀರಾವರಿ ಯೋಜನೆ ಅನುಷ್ಠಾನಕ್ಕೆ ಎದುರಾಗಿರುವ ಎಲ್ಲಾ ರೀತಿಯ ಕಾನೂನು ತೊಡಕುಗಳನ್ನು ನಿವಾರಿಸಬೇಕೆಂದು ಕೋರಿದ್ದಾರೆ.





ಸರಣಿ ಅಪಘಾತ: ಇಬ್ಬರು ದುರ್ಮರಣ

● ಎರಡು ಬೈಕ್‌ಗಳಿಗೆ ಕಾರು ಡಿಕ್ಕಿ ಹೊಡೆದು ದುರಂತ ● ಓರ್ವನಿಗೆ ತೀವ್ರ ಗಾಯ: ಆಯಿಷ್ ಗೇಟ್ ಬಳಿ ದುರ್ಘಟನೆ







ಮೈಸೂರು, ಏ.15(ಆರ್‌ಕೆ)– ಅಡ್ಡಾದಿಡ್ಡಿ ಚಲಿಸಿದ ಕಾರು ಎರಡು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಓರ್ವ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಘಟನೆ ಭಾನುವಾರ ಮುಂಜಾನೆ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್) ಗೇಟ್ ಮುಂದೆ ಚದುರಂಗ ರಸ್ತೆಯಲ್ಲಿ ಸಂಭವಿಸಿದೆ. ಮೈಸೂರಿನ ಬೋಗಾದಿ ರಸ್ತೆಯಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸವಾಗಿದ್ದ ಬಿಸಿಎ ಪದವೀಧರ ಉಲ್ಲಾಸ್ (22) ಮತ್ತು ಮೂಲತಃ ಕೇರಳದವರಾದ ಮೈಸೂರಿನ ಬೋಗಾದಿಯಲ್ಲಿ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಿದ್ದ ಶಿವಾನಿ (21) ಸಾವನ್ನಪ್ಪಿದವರು. ತೀವ್ರವಾಗಿ ಗಾಯಗೊಂಡಿರುವ ಜೊಮೆಟೊ ಫುಡ್ ಡೆಲಿವರಿ ಬಾಯ್ ಮಹದೇವಸ್ವಾಮಿಯನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಘಟನೆ ವಿವರ: ಬಿಸಿಎ ಪದವೀಧರ ಉಲ್ಲಾಸ್ ಮತ್ತು ಬಿಸಿಎ ವಿದ್ಯಾರ್ಥಿನಿ ಶಿವಾನಿ, ಭಾನುವಾರ ಮುಂಜಾನೆ ಹುಣಸೂರು ರಸ್ತೆಯಿಂದ ಚದುರಂಗ ರಸ್ತೆಯಲ್ಲಿ ಬೋಗಾದಿ ರಸ್ತೆ ಕಡೆಗೆ ಹೋಂಡಾ ಡಿಯೋ (ಕೆಎ 55 ವಿ 6436) ಸ್ಕೂಟರ್ ನಲ್ಲಿ ತೆರಳುತ್ತಿದ್ದರು. ಅದೇ ವೇಳೆ ಅವರ ಹಿಂದೆ ಫುಡ್ ಡೆಲಿವರಿ ಬಾಯ್ ಮಹದೇವಸ್ವಾಮಿ ಸಹ ಟಿವಿಎಸ್ ಸ್ಟಾರ್ ಸಿಟಿ (ಕೆಎ 55 ಕೆ 7616) ಬೈಕ್‌ನಲ್ಲಿ ಹೋಗುತ್ತಿದ್ದರು. ಆ ಸಂದರ್ಭ ಅದೇ ಮಾರ್ಗ ಬಂದ ಹುಂಡೈ (ಕೆಎ 09 ಎಂಹೆಚ್ 1567) ಕಾರು, ಮೊದಲು ಸ್ಟಾರ್ ಸಿಟಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ನಂತರ ಮುಂದೆ ಹೋಗುತ್ತಿದ್ದ ಹೋಂಡಾ ಡಿಯೋ ವಾಹನಕ್ಕೂ ಡಿಕ್ಕಿ ಹೊಡೆದಿದ್ದು, ಪರಿಣಾಮ ಡಿಯೋ ಹಿಂಭಾಗ ಕುಳಿತಿದ್ದ ಶಿವಾನಿ ತಲೆಗೆ ತೀವ್ರ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟರೆ, ಸ್ಕೂಟರ್ ಚಾಲನೆ ಮಾಡುತ್ತಿದ್ದ ಉಲ್ಲಾಸ್ ಬಿಜಿಎಸ್ ಅಪೊಲೋ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಅಸುನೀಗಿದ್ದಾರೆ. ತೀವ್ರ ಗಾಯಗಳಾಗಿದ್ದ ಬೈಕ್ ಸವಾರರನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಭಾನುಕುಮಾರಿ ಹಾಗೂ ಸಿಬ್ಬಂದಿ, ಮಹಜರು ನಡೆಸಿ, ಮೃತದೇಹಗಳನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು. ಬೆಂಗಳೂರು ಐಟಿ–ಬಿಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮೈಸೂರಿನ ಕುವೆಂಪುನಗರ ನಿವಾಸಿ ಆಕಾಶ್ ಕಾರನ್ನು ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿ, ಅಪಘಾತಕ್ಕೆ ಕಾರಣನಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಆಕಾಶ್ ಮತ್ತು ಕಾರನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ. ಸರಿರಾತ್ರಿ ಯುವಕ–ಯುವತಿ ಸ್ಕೂಟರ್‌ನಲ್ಲಿ ಓಡಾಡುತ್ತಿದ್ದದ್ದು ಹಾಗೂ ಕಾರು ಚಾಲಕ ಆ ಹೊತ್ತಿನಲ್ಲಿ ಅಡ್ಡಾದಿಡ್ಡಿ ಚಾಲನೆ ಮಾಡಿದ ಬಗ್ಗೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇತ್ತ ಜೊಮೆಟೊ ಫುಡ್ ಡೆಲಿವರಿ ಬಾಯ್ ಜೀವನ ನಿರ್ವಹಣೆಗೆ ಅನಿವಾರ್ಯವಾಗಿ ಮಧ್ಯರಾತ್ರಿ ಆರ್ಡರ್ ಮಾಡಿದ್ದ ಆಹಾರವನ್ನು ಗ್ರಾಹಕರಿಗೆ ತಲುಪಿಸಲು ಹೋಗುತ್ತಿದ್ದರು ಎಂದು ತಿಳಿದು ಬಂದಿದೆ.

ನಾಗಮಂಗಲದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಭರ್ಜರಿ ಪ್ರಚಾರ



ನಾಗಮಂಗಲ, ಏ.15–ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರು ಬೈಕ್ ರ್‍ಯಾಲಿ ಮುಖಾಂತರ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಭರ್ಜರಿ ಚುನಾವಣಾ ಪ್ರಚಾರ ನಡೆಸಿ, ಮತಯಾಚನೆ ಮಾಡಿದರು.

ನಾಗಮಂಗಲ ತಾಲೂಕಿನ ಪಂಚಾಯತಿ ವ್ಯಾಪ್ತಿಗಳಾದ ಕದಬಹಳ್ಳಿ, ಲಾಳನಕೆರೆ, ಬಿಂಡಿಗನವಿಲೆ, ಹೊನ್ನಾವರ, ದೊಡ್ಡ ಬಾಲ, ಮಾಯಿಗೋನಹಳ್ಳಿ, ಪಾಲಗ್ರಹಾರ, ಹರದನಹಳ್ಳಿ, ಮಲ್ಲನಾಯಕನಹಳ್ಳಿ, ದೇವಲಾಪುರ, ಬೀಮನಹಳ್ಳಿ, ಕರಡಹಳ್ಳಿ, ಬ್ರಹ್ಮ ದೇವರಹಳ್ಳಿ, ಮಣ್ಣಹಳ್ಳಿ ಹೊಣಕೆರೆ, ಚೀಣ್ಯ, ಕಾಂತಪುರ ಹಾಗೂ ಬೋಗಾದಿ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಬಿರುಸಿನ ಮತ ಪ್ರಚಾರ ಮಾಡಿ ಭರ್ಜರಿ ರೋಡ್ ಶೋ ನಡೆಸಿ ಕಾಂಗ್ರೆಸ್ ಬೆಂಬಲಿಸಿ ರೈತನ ಮಗನಿಗೆ ವಿಜಯಮಾಲೆ ತೊಡಿಸುವಂತೆ ಮನವಿ ಮಾಡಿದರು.

ಕದಬಹಳ್ಳಿ ಗ್ರಾಮದ ಕಾವೇಟಿ ರಂಗನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಮಿಂಚಿನ ಸಂಚಾರ ನಡೆಸಿದ ಸ್ಟಾರ್ ಚಂದ್ರು ಅಂಗಡಿ ಮುಂಗಟ್ಟುಗಳ ಬಳಿತೆರಳಿ ಜನರ ಯೋಗಕ್ಷೇಮ ವಿಚಾರಿಸಿ ಸಾಮಾನ್ಯ ರೈತರ ಮಗನಾಗಿರುವ ತಮ್ಮನ್ನು ಬೆಂಬಲಿಸಿ, ತಮ್ಮ ಸೇವೆ ಮಾಡುವ ಅವಕಾಶವನ್ನು ಕಲ್ಪಿಸಿ ಕೊಡುವಂತೆ ಕೈಮುಗಿದು ಮನವಿ ಮಾಡಿದರು.ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲ ಉತ್ತಮ ಸ್ಪಂದನೆ ಸಿಗುತ್ತಿದೆ. ಅದರಲ್ಲೂ ಮಹಿಳೆಯರು ಆರತಿ ಎತ್ತಿ ಬರ ಮಾಡಿಕೊಳ್ಳುತ್ತಿದ್ದರು. ಉಚಿತ ಬಸ್ ಪ್ರಯಾಣ, ವಿದ್ಯುತ್, ತಿಂಗಳಿಗೆ 2000 ಸಿಗುತ್ತಿರುವ ಬಗ್ಗೆ ಕಾಂಗ್ರೆಸ್ ಸರ್ಕಾರಕ್ಕೆ ಅಭಿನಂದನೆಗಳು ಜೊತೆಗೆ ಕಾಂಗ್ರೆಸ್ ಬೆಂಬಲಿಸುವ ಭರವಸೆಯನ್ನು ಮಹಿಳೆಯರು ನೀಡುತ್ತಿದ್ದಾರೆ ಎಂದರು. ನಾನು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕನ್ನಗಟ್ಟ ಗ್ರಾಮದವನು. ನಾನು ಸಾಮಾನ್ಯ ರೈತರ ಮಗ, ಮಣ್ಣಿನ ಮಗ ನಾನು ಸಹ ಉತ್ತಿದ್ದೇನೆ, ಬಿತ್ತಿದ್ದೇನೆ, ರೈತಾಪಿವರ್ಗ ಕಷ್ಟ ಸುಖಗಳನ್ನು ಚೆನ್ನಾಗಿ ಬಲ್ಲೆ. ನಾನು ಇದೇ ಜಿಲ್ಲೆಯ ಮಣ್ಣಿನ ಮಗ, ರೈತರ ಮಗ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಿದೆ ಎಂದರು. ಜನರ ಮಧ್ಯೆ ಇರಬೇಕು, ಜನಸೇವೆ ಮಾಡಬೇಕು ಎಂಬ ಕನಸು ಕಟ್ಟಿಕೊಂಡು ರಾಜಕೀಯಕ್ಕೆ ಬಂದಿದ್ದೇನೆ. ಹಣ ಮಾಡುವ ಉದ್ದೇಶ ನನಗಿಲ್ಲ ಆದ್ದರಿಂದ ಮಂಡ್ಯ ಜಿಲ್ಲೆಯ ರೈತರ ಸ್ವಾಭಿಮಾನವನ್ನು ಎತ್ತಿ ಹಿಡಿಯಲು ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು. ಇದಕ್ಕೂ ಮೊದಲು ಕದಬಹಳ್ಳಿಯ ಸುತ್ತಮುತ್ತ ಗ್ರಾಮದವರಾದ ಗಿರಿಗೌಡ (ದೊರೆ) ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರು, ಪ್ರಕಾಶ್‌ಗೌಡ ಕರವೇ ಅಧ್ಯಕ್ಷರು ಹಾಗೂ ಗ್ರಾ.ಪಂ ಉಪಾಧ್ಯಕ್ಷ ಕದಬಹಳ್ಳಿ, ರಮೇಶಣ್ಣ ಗ್ರಾ.ಪಂ ಮಾಜಿ ಅಧ್ಯಕ್ಷರು, ರಾಮಲಿಂಗೇಗೌಡ ಕೊಬ್ಬರಿ ವರ್ತಕರು ಕದಬಹಳ್ಳಿ, ಶೇಖರ್ ಗ್ರಾ.ಪಂ ಮಾಜಿ ಅಧ್ಯಕ್ಷರು, ಲಕ್ಷ್ಮಣ, ವೇಣು ಸೇರಿದಂತೆ ನೂರಾರು ಕಾರ್ಯಕರ್ತರು ಜೆಡಿಎಸ್ ಪಕ್ಷವನ್ನು ತೊರೆದು ಕೃಷಿ ಸಚಿವ ಚೆಲುವರಾಯಸ್ವಾಮಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಒಳಚರಂಡಿ ಕೊಳವೆ ಮಾರ್ಗ ದುರಸ್ತಿ; ವಾಹನ ಸಂಚಾರ ಮಾರ್ಗ ಬದಲಾವಣೆ

ಮೈಸೂರು, ಏ.15(ಎಸ್‌ಪಿಎನ್)–ನಗರದ ವಿವಿಧೆಡೆ ಒಳಚರಂಡಿ ಕೊಳವೆ ಮಾರ್ಗದ ದುರಸ್ತಿ ಕಾರ್ಯ ನಡೆಯುತ್ತಿರುವುದರಿಂದ ಸೋಮವಾರದಿಂದ ಏ.19ರವರೆಗೆ ಈ ಮಾರ್ಗದ ವಾಹನ ಸವಾರರು ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಮೈಸೂರು ನಗರ ಪಾಲಿಕೆಯ ನೀರು ಸರಬರಾಜು ಮತ್ತು ಒಳ ಚರಂಡಿ (ಪೂರ್ವ) ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ದೇವನೂರು ಕೆರೆಯಿಂದ ಉದಯಗಿರಿ, ಶಾಂತಿನಗರ ಮಾರ್ಗವಾಗಿ ಕೆ.ಎನ್.ಪುರ ಬಡಾವಣೆಯ ಹರಿಶ್ಚಂದ್ರ ಘಾಟ್ ರಸ್ತೆ ಯವರೆಗೆ ಮತ್ತು ಇಂದಿರಾ ಗಾಂಧಿ ರಸ್ತೆಯಿಂದ ಗೌಸಿಯಾ ನಗರ 'ಸಿ' ಬ್ಲಾಕ್ ಮಾರ್ಗವಾಗಿ ಅಜೀಜ್ ಸೇಠ್ ಬಡಾವಣೆಯ ಅಮೀನ್ ಮಸೀದಿ ರಸ್ತೆಯವರೆಗೆ ತ್ಯಾಜ್ಯ ನೀರು ನಿರ್ವಹಣೆಗಾಗಿ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಸಾರ್ವಜನಿಕ ಸುರಕ್ಷತಾ ಹಿತ ದೃಷ್ಟಿಯಿಂದ ಏ.15ರಿಂದ ಏ.19ರವರೆಗೆ ಉದಯಗಿರಿ ಬಡಾವಣೆ ಅಬ್ದುರ್ ರೆಹಮಾನ್ ರಸ್ತೆಯಲ್ಲಿ, ಅಂಬೇಡ್ಕರ್ ಭವನದ ಬಳಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.



ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಅಂಗವಾಗಿ ಮೈಸೂರಿನ ಟೌನ್‌ಹಾಲ್ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಪಕ್ಷದ ಸಂಭವನೀಯ ಅಭ್ಯರ್ಥಿ ಹಾಗೂ ಅರಣ್ಯ ವಸತಿ, ವಿಹಾರಧಾಮಗಳ ಸಂಸ್ಥೆಯ ಮಾಜಿ ಅಧ್ಯಕ್ಷ ಕೆ.ವಿವೇಕಾನಂದ ಮಾಲಾರ್ಪಣೆ ಮಾಡಿದರು. ನಿವೃತ್ತ ಶಿಕ್ಷಕ ನಾಗಣ್ಣ, ಮುಖಂಡರುಗಳಾದ ಪಿ.ಸೋಮು, ವಿಜಯ್‌ಕುಮಾರ್, ಸುಮಂತ್, ಗಗನ್, ಅಂಬೇಡ್ಕರ್ ಸಂಘದ ಯುವ ಮುಖಂಡ ಅಮೃತ್ ಶರ್ಮಾ, ಸೂರಿ ಇತರರಿದ್ದರು.

ಕಾಡಾನೆ ದಾಳಿಗೆ ಕಾಫಿ ಬೆಳೆಗಾರ ಬಲಿ

● ಬೀರುಗ ಗ್ರಾಮದ ಚಾಮುಂಡಿಕೊಲ್ಲಿಯಲ್ಲಿ ಘಟನೆ ● ರಸ್ತೆಯಲ್ಲಿ ಶವವಿಟ್ಟು ಅರಣ್ಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ

ಗೋಣಿಕೊಪ್ಪ, ಏ.15–ತೋಟಕ್ಕೆ ತೆರಳುತ್ತಿದ್ದ ಕಾಫಿ ಬೆಳೆಗಾರ ಕಾಡಾನೆ ದಾಳಿಗೆ ಬಲಿಯಾಗಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬೀರುಗ ಗ್ರಾಮದ ಚಾಮುಂಡಿ ಕೊಲ್ಲಿ ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ. ಬೀರುಗ ಗ್ರಾಮದ ಅಯ್ಯಮಾಡ ಮಾದಯ್ಯ(50) ಎಂಬವರು ಬೆಳಗ್ಗೆ 7 ಗಂಟೆಯಲ್ಲಿ ತೋಟಕ್ಕೆ ತೆರಳುತ್ತಿದ್ದರು. ಈ ವೇಳೆ ಚಾಮುಂಡಿಕೊಲ್ಲಿ ರಸ್ತೆಯಲ್ಲಿ ಏಕಾಏಕಿ ಎದುರಾದ ಕಾಡಾನೆ ಮಾದಯ್ಯನ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ.

ಸ್ಥಳಕ್ಕಾಗಮಿಸಿದ ಗ್ರಾಮಸ್ಥರು ಮತ್ತು ವಿವಿಧ ಸಂಘಟನೆಗಳ ಪ್ರಮುಖರು ರಸ್ತೆಯಲ್ಲೇ ಶವವಿಟ್ಟು ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ತ್ರಿಪಾಠಿ ಮಾತನಾಡಿ, ಕಾಡಾನೆಗಳನ್ನು ತಕ್ಷಣ ಕಾಡಿಗಟ್ಟುವ ಕಾರ್ಯಾಚರಣೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ನಂತರ ಪ್ರತಿಭಟನೆ ಕೈ ಬಿಡಲಾಯಿತು. ಬಳಿಕ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಶವ ಹಸ್ತಾಂತರಿಸಲಾಯಿತು. ಇದೇ ವೇಳೆ ಡಿಎಫ್‌ಓ ಭಾಸ್ಕರ್ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರದ ಚೆಕ್ ನೀಡಿದರು. ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ವಿರಾಜಪೇಟೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್, ಎಸಿಎಫ್ ಕೆ.ಎ.ನೆಹರು, ಆರ್‌ಎಫ್‌ಓ ಶಂಕರ್, ಡಿಆರ್‌ಎಫ್‌ಓಗಳಾದ ಗಣೇಶ್, ನವೀನ್, ದಿವಾಕರ್, ಸಚಿನ್, ಶ್ರೀಶೈಲಾ, ಗ್ರಾಮಸ್ಥರಾದ ಮಾಣೀರ ಮುತ್ತಪ್ಪ, ಅಯ್ಯಮಾಡ ಉದಯ ಹಾಜರಿದ್ದರು.

ರಾಘವೇಂದ್ರನಗರದಲ್ಲಿ ಗೋದಾಮಿಗೆ ಬೆಂಕಿ: ಲಕ್ಷಾಂತರ ರೂ. ಮೌಲ್ಯದ ಮರ–ಮುಟ್ಟು ಭಸ್ಮ



ಮೈಸೂರು, ಏ. 15 (ಆರ್‌ಕೆ)–ಮೈಸೂರಿನ ರಾಘವೇಂದ್ರನಗರದ ಗೋದಾಮಿಗೆ ಆಕಸ್ಮಿಕ ಬೆಂಕಿ ತಗುಲಿದ ಪರಿಣಾಮ ಲಕ್ಷಾಂತರ ರೂ. ಬೆಲೆ ಬಾಳುವ ಮರಮುಟ್ಟು ಸುಟ್ಟು ಹೋದ ಘಟನೆ ಕಳೆದ ರಾತ್ರಿ ಸಂಭವಿಸಿದೆ.

ಸೈಯ್ಯದ್ ಮುಜಾಯಿದ್‌ಗೆ ಸೇರಿದ ಮರದ ಹಳೇ ಕಿಟಕಿ, ಬಾಗಿಲು, ಮನೆ ಸಾಮಗ್ರಿ ಶೇಖರಿಸಿದ್ದ ಗೋದಾಮಿನಲ್ಲಿ ಭಾನುವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ಬೆಂಕಿ ಕಾಣಿಸಿಕೊಂಡಿತ್ತು. ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಬನ್ನಿಮಂಟಪ ಅಗ್ನಿಶಾಮಕ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ ಇಂದು ಬೆಳಗ್ಗೆ 7.20 ಗಂಟೆ ವೇಳೆಗೆ ಬೆಂಕಿ ನಂದಿಸಿದರು.

8 ವಾಹನಗಳ 60 ಮಂದಿ ಸಿಬ್ಬಂದಿ ಅತ್ಯಾಧುನಿಕ ಸಲಕರಣೆಗಳ ಮೂಲಕ ನಿರಂತರ 10 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದರು. ನಂದಿಸಿದಷ್ಟೂ ಬೆಂಕಿ ಜ್ವಾಲೆ ಹೆಚ್ಚಾಗುತ್ತಲೇ ಇದ್ದಿದ್ದ ರಿಂದ ಅಗ್ನಿ ಶಮನ ಮಾಡಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಣಗಾಡಿದರು. ಮನೆಗಳ ಹಳೇ ಕಿಟಕಿ–ಬಾಗಿಲು, ದೊಡ್ಡದೊಡ್ಡ ತೊಲೆಗಳು, ಜಂತಿ, ಇತರ ಒಣಗಿದ ಮರದ ಸಾಮಗ್ರಿಗಳನ್ನು ಟೆಂಡರ್‌ನಲ್ಲಿ ಖರೀದಿಸಿ 50x50 ಅಡಿ ಅಳತೆಯ ಜಾಗದಲ್ಲಿ ಇರಿಸಿದ್ದರು. ಬೆಂಕಿ ತಗುಲಿ ಇಡೀ ರಾತ್ರಿ ಬೆಂಕಿ ಜ್ವಾಲೆ ಹಾನಿ ಮಾಡಿದೆ ಒಂದು ವೇಳೆ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ಶಮನ ಮಾಡದಿದ್ದರೆ, ಸುತ್ತಮುತ್ತಲ ಕಟ್ಟಡಗಳಿಗೂ ಹರಡಿ ಭಾರಿ ಪ್ರಮಾಣದ ಆಸ್ತಿಪಾಸ್ತಿ ನಷ್ಟವಾಗುತ್ತಿತ್ತು. ಮುಖ್ಯ ಅಗ್ನಿಶಾಮಕ ಅಧಿಕಾರಿ ಪಿ.ಎಸ್.ಜಯರಾಮಯ್ಯ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಾದ ಕೆ.ಪಿ.ಗುರುರಾಜ್, ಕೆ.ಸಿ.ರಮೇಶ್, ಕೆ.ಜೆ. ಗಂಗಾನಾಯಕ್, ರಾಘವೇಂದ್ರ ಇತರರು ಪಾಲ್ಗೊಂಡಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಉದಯಗಿರಿ ಹಾಗೂ ನಜರ್‌ಬಾದ್ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದರು. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಶಂಕಿಸಲಾಗಿದ್ದು, ಅಗತ್ಯ ಮುಂಜಾಗ್ರತಾ ಕ್ರಮ ವಹಿಸದಿರುವುದು ಅವಘಡಕ್ಕೆ ಕಾರಣ ಎನ್ನಲಾಗಿದ್ದು, ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನಿಧನ

ದೊಡ್ಡಶೆಟ್ಟಿ



ಯಳಂದೂರು, ಏ.15–ತಾಲೂಕಿನ ವೈ.ಕೆ.ಮೋಳೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಚಿಕ್ಕರಂಗಮ್ಮ ಅವರ ಪತಿ ಹಾಗೂ ಉಪ್ಪಾರ ಬಡಾವಣೆಯ ನಿವಾಸಿ ದೊಡ್ಡಶೆಟ್ಟಿ (73) ಅನಾರೋಗ್ಯದಿಂದ ಸೋಮವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಪುತ್ರ, ಮೂವರು ಪುತ್ರಿ, ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ಜರುಗಿತು.

ಸೈಯದ್ ಕಲೀಮುಲ್ಲಾ



ಮೈಸೂರು, ಏ. 15– ಮೈಸೂರಿನ ಎನ್.ಆರ್. ಮೊಹಲ್ಲಾದ ಬಡೇ ಮಕಾನ್ ನಿವಾಸಿ ಸೈಯದ್ ಕಲೀಮುಲ್ಲಾ (ಅಕ್ರಮ್ ಪಾಷ) ನಿನ್ನೆ (ಏ.14) ನಿಧನರಾದರು. ಅವರಿಗೆ 60 ವರ್ಷ ವಯಸ್ಸಾಗಿತ್ತು. ಮೃತರು ತಾಯಿ, ಪತ್ನಿ, ನಾಲ್ವರು ಸಹೋದರಿಯರು, ಮೂವರು ಸಹೋದರರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.5ರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೋ. ಕೆ.ಲೋಕನಾಥ್



ರೋಟರಿ ಮೈಸೂರು ನಾರ್ತ್ ಮಾಜಿ ಅಧ್ಯಕ್ಷರು ಹಾಗೂ ಮೈಸೂರಿನ ಕುವೆಂಪುನಗರದ ನಿವಾಸಿ ರೋ. ಕೆ.ಲೋಕನಾಥ್ (70) ಏ.13ರಂದು ನಿಧನರಾದರು. ಮೃತರು ಪತ್ನಿ ಶೈಲಜಾ ಲೋಕನಾಥ್, ಪುತ್ರ ಯದುನಂದನ್, ಪುತ್ರಿ ಡಾ.ಸುಪ್ರಿಯಾ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅದೇ ದಿನ ಸಂಜೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಶಿವಣ್ಣ



ಮೈಸೂರಿನ ದಟ್ಟಗಳ್ಳಿ ನಿವಾಸಿ ದಿವಂಗತ ಬಸವರಾಜಪ್ಪ ಅವರ ಪುತ್ರ ಬಿ. ಶಿವಣ್ಣ (75) ಸೋಮವಾರ ಬೆಳಗ್ಗೆ ನಿಧನರಾದರು. ಮೂಲತಃ ಮಂಡ್ಯ ಜಿಲ್ಲೆ ಪುರತಾಗಳ್ಳಿ ಗ್ರಾಮದವರಾದ ಇವರು ನಾಲ್ವರು ಪುತ್ರರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಪುರತಾಗಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣಪ್ಪ ಶೆಟ್ಟಿ



ಹುಣಸೂರು ತಾಲೂಕಿನ ಬಿಳಿಕೆರೆ ಗ್ರಾಮದ 24 ಮನೆ ತೆಲುಗು ಶೆಟ್ಟರ ಜನಾಂಗದ ಹಿರಿಯ ಮುಖಂಡರಾದ ಬಿಳಿಕೆರೆ ಗ್ರಾಮದ ಕೃಷ್ಣಪ್ಪ ಶೆಟ್ಟಿ (74) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆಯು ಬಿಳಿಕೆರೆ ಗ್ರಾಮದ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ಪ್ರಚಾರ ಸಮಾವೇಶ ನಡೆದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ

ಯದುವೀರ್-ತ್ರಿಷಿಕಾ ಕುಮಾರಿ ದಂಪತಿ ಸ್ವಚ್ಛತಾ ಕಾರ್ಯ



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ತಮ್ಮ ಪತ್ನಿ ಶ್ರೀಮತಿ ತ್ರಿಷಿಕಾ ಕುಮಾರಿ ಅವರೊಂದಿಗೆ ಭಾನುವಾರ ಪ್ರಧಾನಿ ಮೋದಿಯವರ ಪ್ರಚಾರ ಕಾರ್ಯಕ್ರಮ ನಡೆದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ಸ್ವಚ್ಛತಾ ಕಾರ್ಯ ಕೈಗೊಂಡರು.

ಮೈಸೂರು, ಏ.15(ಬಿಎಲ್‌ಯು)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದು ಪತ್ನಿ ಶ್ರೀಮತಿ ತ್ರಿಷಿಕಾ ಕುಮಾರಿ ಅವರೊಂದಿಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡು ಮೈಸೂರಿನ ಯುವಪೀಳಿಗೆಗೆ ಪ್ರೇರಣೆಯಾದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸಿದ್ದ ನಿನ್ನೆಯ ಸಮಾವೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದ್ದರು. ಸಹಜವಾಗಿ ರಾಶಿ ರಾಶಿ ಕಸ ಆವರಿಸಿತ್ತು. ಚಿಪ್ಸ್ ಪ್ಯಾಕೆಟ್, ಐಸ್ ಕ್ರೀಂ ಕವರ್ ಸೇರಿದಂತೆ ಇನ್ನಿತರೆ ತ್ಯಾಜ್ಯ ಅಲ್ಲಲ್ಲಿ ಹರಡಿತ್ತು.

ಮೈದಾನ ಸ್ವಚ್ಛಗೊಳಿಸುವ ಕಾರ್ಯ ಸಮಾವೇಶದ ಆಯೋಜಕರ ಜವಾಬ್ದಾರಿಯಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ ಸಮಾವೇಶದ ಸ್ಥಳದಲ್ಲಿ ಪ್ಲಾಸ್ಟಿಕ್ ಸೇರಿದಂತೆ ಇತರೆ ತ್ಯಾಜ್ಯವನ್ನು ಸ್ವಚ್ಛಗೊಳಿಸುವ ಕಾರ್ಯ ನಡೆಯುತ್ತಿತ್ತು. ಈ ಮಧ್ಯೆ ಸೋಮವಾರ ಬೆಳಗ್ಗೆ ದಿಢೀರ್ ಮಹಾರಾಜ ಕಾಲೇಜು ಮೈದಾನಕ್ಕೆ ಆಗಮಿಸಿದ ಯದುವೀರ್ ಹಾಗೂ ತ್ರಿಷಿಕಾ ಕುಮಾರಿ, ಸ್ವಚ್ಛಗೊಳಿಸುವ ಕಾರ್ಯದಲ್ಲಿ ತಾವು ಕೈ ಜೋಡಿಸಿದರು. ತಾವಲ್ಲದೆ ತಮ್ಮ ಸ್ನೇಹಿತರು ಹಾಗೂ ಬೆಂಬಲಿಗರೊಡನೆ ಮಹಾರಾಜ ಕಾಲೇಜು ಮೈದಾನದಲ್ಲಿದ್ದ ಪ್ಲಾಸ್ಟಿಕ್ ಸೇರಿದಂತೆ ಇತರೆ ಕಸವನ್ನು ಸಂಗ್ರಹಿಸಿ ಒಂದೆಡೆ ಸುರಿದರು.

ಸುಮಾರು 45 ನಿಮಿಷಗಳ ಕಾಲ ಸ್ವಚ್ಛತಾ ಕಾರ್ಯದಲ್ಲಿ ಯದುವೀರ್ ದಂಪತಿ ನಿರತರಾಗಿದ್ದರು. ಮಹಾರಾಜ ಕಾಲೇಜು ಮೈದಾನದ ಮುಂದಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಸಾಮಾನ್ಯವಾಗಿ ನೂರಾರು ಜನರು ಬೆಳಗ್ಗೆ ವಿಹರಿಸುತ್ತಾರೆ. ಈ ವೇಳೆ ಮಹಾರಾಜ ಕಾಲೇಜು ಮೈದಾನದಲ್ಲಿ ಯದುವೀರ್ ಹಾಗೂ ತ್ರಿಷಿಕಾ ಕುಮಾರಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವುದನ್ನು ಕಂಡು ಬಹಳಷ್ಟು ವಾಯುವಿಹಾರಿಗಳು, ಅಚ್ಚರಿಗೊಂಡು, ತಾವೂ ಮೈದಾನ ಸ್ವಚ್ಛಗೊಳಿ ಸುವ ಕಾರ್ಯದಲ್ಲಿ ಭಾಗಿಯಾದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ ಅಭಿಯಾನದಿಂದ ಪ್ರೇರಣೆಗೊಂಡ ಯದುವೀರ್ ದಂಪತಿ, ಸ್ವಯಂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರು. ಮಹಾರಾಜ ಕಾಲೇಜು ಮೈದಾನದಲ್ಲಿ ರಾಜಕೀಯ ಸಭೆ-ಸಮಾರಂಭವಲ್ಲದೆ ನಾನಾ ಕಾರ್ಯಕ್ರಮ ನಡೆಯುತ್ತದೆ. ಪ್ರತಿಯೊಬ್ಬರು ಯದುವೀರ್‌ರಂತೆ ತಾವು ಭಾಗವಹಿಸಿದ್ದ ಕಾರ್ಯಕ್ರಮದ ನಂತರ ಆ ಸ್ಥಳ ಸ್ವಚ್ಛ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿದರೆ ಸ್ವಚ್ಛತೆ ಬಗ್ಗೆ ಪರಿಣಾಮಕಾರಿ ಸಂದೇಶ ನೀಡಬಹುದು.

ಸ್ವಚ್ಛತೆ ನನ್ನ ಕರ್ತವ್ಯ

ಈ ವೇಳೆ ಪ್ರತಿಕ್ರಿಯೆ ನೀಡಿದ ಯದುವೀರ್, ತಾವು ವಾಸ ಮಾಡುವ ಸ್ಥಳ, ತಾವು ಕರ್ತವ್ಯ ನಿರ್ವಹಿಸುವ ಸ್ಥಳ ಹಾಗೂ ತಮ್ಮ ನಗರ ಸ್ವಚ್ಛವಾಗಿಡುವುದು ಪ್ರತಿಯೊಬ್ಬರ ಕರ್ತವ್ಯ. ಈ ಹಿನ್ನೆಲೆಯಲ್ಲಿ ನಾನು ಭಾಗವಹಿಸಿದ್ದ ಕಾರ್ಯಕ್ರಮ ನಡೆದ ಸ್ಥಳ ಸ್ವಚ್ಛವಾಗಿಡುವುದು ನನ್ನ ಕರ್ತವ್ಯ ಎಂದು ಭಾವಿಸಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದೇನೆ ಎಂದರು. ನರೇಂದ್ರ ಮೋದಿ ಅವರ ಸ್ವಚ್ಛ ಭಾರತ್ ಅಭಿಯಾನಕ್ಕೆ ಅನುಗುಣವಾಗಿ ನಾನು ಇಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಿದ್ದೇನೆ. ಮೈಸೂರು ನಗರದ ಸ್ವಚ್ಛತೆ ನನ್ನ ಮೊದಲ ಆದ್ಯತೆಯಾಗಿದ್ದು, ಇದು ಮುಂದುವರೆಯುತ್ತದೆ ಎಂದು ಸ್ಪಷ್ಟಪಡಿಸಿದರು. ಪ್ರತಿಯೊಬ್ಬರು ಸ್ವಚ್ಛತೆಗೆ ಆದ್ಯತೆ ನೀಡಿದರೆ ಇಡೀ ನಗರ, ದೇಶ ಸ್ವಚ್ಛವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಇದನ್ನು ತಮ್ಮ ಕರ್ತವ್ಯ ಎಂದು ಭಾವಿಸಬೇಕು ಎಂದು ಯದುವೀರ್ ಸಲಹೆ ನೀಡಿದರು.




ಯದುವೀರ್ ಅವರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವುದು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಏನಪ್ಪಾ ಈ ನಾಮ ಲೀಲೆ...!



ಕಳೆದ ಶನಿವಾರ ಮುಂಜಾನೆ, ನಾನು ಖ್ಯಾತ ಟಿವಿ ಪತ್ರಕರ್ತ ರಾಜದೀಪ್ ಸರ್‌ದೇಸಾಯಿ ಅವರನ್ನು ಮುಂಬರುವ ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಗೆ ಸಂಬಂಧಪಟ್ಟಂತೆ, ಉಪಾಹಾರ ಸಂದರ್ಶನಕ್ಕಾಗಿ ಭೇಟಿಯಾಗಿದ್ದೆ.

ಹೊರಗಿನವರು ಸಾಮಾನ್ಯವಾಗಿ ಉಪಾಹಾರಕ್ಕಾಗಿ ಆಯ್ಕೆ ಮಾಡಿಕೊಳ್ಳುವ ಮೈಸೂರಿನ ನಜರ್‌ಬಾದ್‌ನ ಮೈಲಾರಿ ಹೋಟೆಲ್ಲಿನಲ್ಲಿ ಭೇಟಿಯಾಗಲು ನಾವು ನಿರ್ಧರಿಸಿದೆವು. ಅದರಂತೆ ನಾನೇ ಮೊದಲು ಬಂದು, 'ಒರಿಜಿನಲ್' ಮೈಲಾರಿ ಹೋಟೆಲ್ ಅಂದುಕೊಂಡ ಸ್ಥಳದಲ್ಲಿ ಕಾದಿದ್ದೆ.

ಕೆಲವು ನಿಮಿಷಗಳ ನಂತರ, ರಾಜ್‌ದೀಪ್ ಹಾಗೂ ಅವರ "ಇಂಡಿಯಾ ಟುಡೇ" ತಂಡ ಅಲ್ಲಿಗೆ ಬಂದು ತಲು ಪಿತು. ಆದರೆ, ಅವರು ಇಲ್ಲಿಂದ ಹೊರನಡೆದು ಬೇರೊಂದು ರೆಸ್ಟೋರೆಂಟ್ ಪ್ರವೇಶಿಸಿದರು. ಅವರೂ 'ಒರಿಜಿನಲ್ ಮೈಲಾರಿ' ಅಂದುಕೊಂಡು ಆ ಹೋಟೆಲ್ ಪ್ರವೇಶಿಸಿದ್ದರು. ಅಂತೂ ನಾವೆಲ್ಲಾ 'ಒರಿಜಿನಲ್' ಮೈಲಾರಿ ಹೋಟೆಲಿನಲ್ಲಿ ಸಂಧಿಸಲು ಸಾಧ್ಯವಾಗದೇ ಹೊರನಡೆದೆವು. ಅಂತಿಮವಾಗಿ ವೇಟರ್ ವೊಬ್ಬರು ಹೇಳಿದ ಮೇಲೆ ಮೂರನೇ, 'ನಿಜವಾದ ಒರಿಜಿನಲ್ ಮೈಲಾರಿ ಹೋಟೆಲ್ಲನ್ನು' ಅಂತೂ ತಲುಪಿದೆವು.

ಮೈಸೂರಿನ ನಜರ್‌ಬಾದ್‌ನ ಮುಖ್ಯರಸ್ತೆಯಲ್ಲಿ 1938 ರಿಂದಲೂ ನಾಲ್ಕು 'ಒರಿಜಿನಲ್' ಮೈಲಾರಿ ಹೋಟೆಲ್‌ಗಳು "ದೋಸೆ" ಬಡಿಸುತ್ತಾ ಬಂದಿರುವುದು ನಮಗೆ ಮನದಟ್ಟಾಯಿತು.

ಈ ರೀತಿ ಮೈಲಾರಿಗೆ ಬಹುಮುಖ ಹೆಸರುಗಳು ಇರುವುದು ದೋಸೆ ಪ್ರಿಯರಲ್ಲಿ ಖಂಡಿತ ಗೊಂದಲ ಮೂಡಿಸಿ, ಹೇಗೋ ಅವರಿಗೆ ಹತ್ತಿರವಿರುವ ಮೈಲಾರಿ ಹೋಟೆಲ್ಲನ್ನು ಆಯ್ಕೆ ಮಾಡಿಕೊಳ್ಳಲು ಪ್ರೇರೇಪಿಸುತ್ತದೆ.

ವ್ಯವಹಾರ ಕುದುರಿಸಲು ಈ ರೀತಿಯ ಹೆಸರಿನ ಲೀಲೆ, ಮತದಾರರನ್ನು ವಂಚಿಸುವ ಇಲ್ಲವೇ ಅವರನ್ನು ಗೊಂದಲಕ್ಕೆ ಸಿಕ್ಕಿಸುವ ನಾಮಲೀಲೆಯಂತೆಯೇ ಕಂಡುಬರುತ್ತದೆ. ಈ ಒಂದು ವಿಚಾರ ಡಾ.ಸಿ.ಎನ್. ಮಂಜುನಾಥ್‌ರತ್ತ ನನ್ನ ಗಮನ ಹರಿಯುವಂತೆ ಮಾಡಿತು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರಿಗೆ ಪ್ರಬಲ ಸ್ಪರ್ಧೆ ಒಡ್ಡಿರುವ, ಇದೇ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್‌ಮಂಜುನಾಥ್ ದಿಢೀರನೆ ಮತಪತ್ರದಲ್ಲಿ ತಮ್ಮ ಹೆಸರಿನೊಂದಿಗೆ ಕಮಲ ಗುರುತನ್ನು ಸಹ ಗಮನಿಸುವಂತೆ ಮತದಾರರಲ್ಲಿ ಮನವಿ ಮಾಡುತ್ತಿದ್ದಾರೆ. ಕಾರಣ ಹೆಸರಿನ ಪಿಡುಗು. ಮಂಜುನಾಥ್ ಹೆಸರಿನ ನಾಲ್ವರು ನಾಮಪತ್ರ ಸಲ್ಲಿಸಿದ್ದಾರೆ. ಅವರಲ್ಲಿ ಮೂವರು ನಾಮಪತ್ರ ವಾಪಸ್ ಪಡೆದರೆ, ಈಗ ಒಬ್ಬರು ಕಣದಲ್ಲಿ ಉಳಿದಿದ್ದಾರೆ. ಕುತೂಹಲಕಾರಿ ಸಂಗತಿ ಎಂದರೆ, ಅವರೂ ಸಹ ವೈದ್ಯರೆ. ಆದಾಗ್ಯೂ ಅವರು, ಗೌರವ ಡಾಕ್ಟರೇಟ್ ಪಡೆದವರು. ಅದಕ್ಕಿಂತ ಅಚ್ಚರಿ ಸಂಗತಿ ಎಂದರೆ, ಈ ಡಾಕ್ಟರ್ ಸಹ ಅದೇ ಇನಿಷಿಯಲ್ಸ್ ಹೊಂದಿದ್ದು, ಅವರೂ ಡಾ.ಸಿ.ಎನ್.ಮಂಜುನಾಥ್. ಹೋಗಲಿ, ಡಾ.ಸಿ.ಎನ್.ಮಂಜುನಾಥ್ ಅವರು ತಮ್ಮನ್ನು ಗುರುತಿಸಿಕೊಳ್ಳಲು ಬಿಜೆಪಿಯ ಚಿನ್ಹೆ ಇದ್ದರೆ, 2019 ರಲ್ಲಿ ಮಂಡ್ಯದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಶ್ ಇದರಿಂದಾಗಿಯೇ ಸಾಕಷ್ಟು ಸಂಕಷ್ಟ ಎದುರಿಸಿದ್ದರು.

ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಅವರ ಎದುರಾಳಿಯಾಗಿ ಸುಮಲತಾ ಅವರು ಮಂಡ್ಯದಲ್ಲಿ ರಾಜಕೀಯ ಅಗ್ನಿಪರೀಕ್ಷೆ ಎದುರಿಸಬೇಕಾಗಿ ಬಂದಿದ್ದನ್ನು ಅನೇಕರು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ. ಆ ವೇಳೆ ಮತ ಪತ್ರದಲ್ಲಿ, ಸುಮಲತಾ ಹೆಸರಿನ ಮೂವರು ಕಣದಲ್ಲಿದ್ದರು. ಅದೃಷ್ಟವಶಾತ್ ಅಸಲಿ ಸುಮಲತಾರ ಮುಂದೆ ಅವರ ಪತಿ ಅಂಬರೀಶ್ ಹೆಸರು ಇತ್ತು. ಇದು ಅವರನ್ನು ಪಾರು ಮಾಡಿತು.

ಅಂತೂ, ಸುಮಲತಾರವರು ನಿಖಿಲ್ ಕುಮಾರಸ್ವಾಮಿಯವರನ್ನು 1,40,000 ಅಧಿಕ ಮತಗಳಿಂದ ಪರಾಭವಗೊಳಿಸಿದರು. ಆದರೆ ಆಶ್ಚರ್ಯಕರ ಸಂಗತಿ ಎಂದರೆ, ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಉಳಿದ ಮೂವರು, ಸುಮಲತಾ ಹೆಸರಿನ ಮಹಿಳೆಯರು 20,203 ಮತಗಳನ್ನು ಪಡೆದಿದ್ದರು. ಯೋಚಿಸಿ, ಒಂದು ವೇಳೆ ನೇರ ಸ್ಪರ್ಧೆ ಏರ್ಪಟ್ಟಿದ್ದರೆ? ಹಾಗಾಗಿಯೇ, ಒಂದೇ ಹೆಸರಿನ ಅಭ್ಯರ್ಥಿಗಳನ್ನು 'ಮತಗಳನ್ನು ಕಬಳಿಸುವವರು' (ವೋಟರ್-ಕಟ್ಟರ್ಸ್) ಎಂದು ಕರೆಯಲಾಗುತ್ತದೆ.

ಹೊಳೆನರಸೀಪುರದಲ್ಲಿ, ಹಿರಿಯ ಜೆಡಿಎಸ್ ನಾಯಕ ಹೆಚ್.ಡಿ.ರೇವಣ್ಣ ಮತ್ತೊಬ್ಬ ಹೆಚ್.ಡಿ.ರೇವಣ್ಣನವರನ್ನು ಎದುರಿಸಬೇಕಾಯಿತು. ಅಸಲಿ ಹೆಚ್.ಡಿ.ರೇವಣ್ಣ ತಮ್ಮ ಎದುರಾಳಿ ಕಾಂಗ್ರೆಸ್ ಪಕ್ಷದ ಶ್ರೇಯಸ್ ಎಸ್.ಪಟೇಲರ ವಿರುದ್ಧ 3,152 ಮತಗಳ ಅಂತರದಿಂದೇನೋ ಗೆದ್ದರು. ಆದರೆ, ನಕಲಿ ಹೆಚ್.ಡಿ.ರೇವಣ್ಣ 2,061 ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಅವರು ಚುನಾವಣೆಗೆ ನಿಲ್ಲದೆ ಹೋಗಿದ್ದರೆ, ಅಸಲಿ ಹೆಚ್.ಡಿ.ರೇವಣ್ಣ 5,213 ಮತಗಳ ಅಂತರದಿಂದ ಗೆಲುವು ಸಾಧಿಸುತ್ತಿದ್ದರು.

2018ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ, ಬೆಂಗಳೂರು ಒಂದರಲ್ಲೇ ಇರುವ 28 ಕ್ಷೇತ್ರಗಳಲ್ಲೂ ಒಂದೇ ಹೆಸರಿನ ಒಬ್ಬರಿಗಿಂತ ಅಧಿಕ ಅಭ್ಯರ್ಥಿಗಳಿದ್ದರು! ಅವರೆಲ್ಲಾ ಪಕ್ಷೇತರ ಅಭ್ಯರ್ಥಿಗಳು.

ಈ ರೀತಿ ಮತಗಳನ್ನು ಕಬಳಿಸುವ ಕುತಂತ್ರ "ಇದೇ ದೇಶದ" ಪಿಡುಗಾಗಿ ಪರಿಣಮಿಸಿದೆ. ತಮಿಳುನಾಡಿನ ರಾಮನಾಥಪುರಂ ಕ್ಷೇತ್ರದಲ್ಲಿ, ನಂತರ ಮುಖ್ಯಮಂತ್ರಿಯಾದ ಒ.ಪನ್ನೀರ್ ಸೆಲ್ವಂರವರು ನಾಲ್ವರು ನಕಲಿ ಪನ್ನೀರ್ ಸೆಲ್ವಂರನ್ನು ಎದುರಿಸಬೇಕಾಗಿ ಬಂದಿತ್ತು. ಮಥುರಾದಿಂದ ಸ್ಪರ್ಧಿಸಿದ್ದ ಹೇಮಮಾಲಿನಿ, ಇಬ್ಬರು ಇನ್ನಿತರೆ ಹೇಮಮಾಲಿನಿಯರನ್ನು ಎದುರಿಸಬೇಕಾಯಿತು. ಕೇರಳದಲ್ಲಿ 2016ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ, ಒಟ್ಟು 140 ವಿಧಾನಸಭಾ ಕ್ಷೇತ್ರಗಳ ಪೈಕಿ 50 ಕ್ಷೇತ್ರಗಳಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳ ಹಾವಳಿ ಇತ್ತು.

ರಾಹುಲ್ ಗಾಂಧಿ ಸಹ 2019ರ ಲೋಕಸಭಾ ಚುನಾವಣೆಯಲ್ಲಿ ಮತಗಳನ್ನು ಸೆಳೆಯುವವರ ಎದುರಿಸಬೇಕಾಯಿತು. ಅಸಲಿ ರಾಹುಲ್ ಗಾಂಧಿ ನಾಮಪತ್ರ ಸಲ್ಲಿಸಿದ ನಂತರ, ರಾಹುಲ್ ಗಾಂಧಿ ಹೆಸರಿನ ಮೂವರು ಇತರೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಕೇರಳದ ವಯನಾಡಿನಲ್ಲಿ ರಾಹುಲ್ ಗಾಂಧಿ ಹೆಸರಿನ ಮೂವರು ಅಭ್ಯರ್ಥಿಗಳನ್ನು ರಾಹುಲ್ ವಿರೋಧಿಗಳು ಹುಡುಕಿದ್ದಕ್ಕೆ ಶಹಬ್ಬಾಸ್‌ಗಿರಿ ಹೇಳಲೇಬೇಕು. ಏಕೆಂದರೆ, ಗಾಂಧಿ ಹೆಸರಿನ ಉಪನಾಮವು ಆ ಪ್ರದೇಶದಲ್ಲಿ ಅಸ್ತಿತ್ವದಲ್ಲೇ ಇರಲಿಲ್ಲ. ಓರ್ವ ರಾಹುಲ್ ಗಾಂಧಿಯನ್ನು ಬೇರೊಂದು ರಾಜ್ಯದಿಂದ ಕರೆತರಲಾಗಿತ್ತು. ಈ ಮೂವರು ರಾಹುಲ್ ಗಾಂಧಿಗಳ ಪೈಕಿ, ಒಬ್ಬರ ಹೆಸರು ಅಕ್ಷರ ಜೋಡಣೆಯಲ್ಲಿ ರಾಹುಲ್ ಗಾಂಧಿ ಎಂಬುದಾಗಿತ್ತು. ಅವರ ಹೆಸರನ್ನು ರಾಗುಲ್ ಗಾಂಧಿ (RaGhul Gandhi) ಎಂದು ನಮೂದಿಸಲಾಗಿತ್ತು.

ಪ್ರಧಾನಮಂತ್ರಿ ನರೇಂದ್ರ ಮೋದಿ ಸಹ ಈ ಪಿಡುಗಿನಿಂದ ಹೊರತಾಗಲಿಲ್ಲ. ಅವರೂ ತಮ್ಮದೇ ಹೆಸರು ಹೋಲುವ ಪಕ್ಷೇತರ ಅಭ್ಯರ್ಥಿ ನರೇಂದ್ರ ಬಾಬೂಲಾಲ್ ಮೋದಿ ಎಂಬುವರನ್ನು ಎದುರಿಸಬೇಕಾಯಿತು. ಈ ಮೋದಿ 2014ರಲ್ಲಿ ವಡೋದರ ಲೋಕಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದರು. ಆದರೆ ಕಡೆಯ ಗಳಿಗೆಯಲ್ಲಿ ಅವರು ನಾಮಪತ್ರ ವಾಪಸ್ ಪಡೆದರು.

ನೇರ ಹಣಾಹಣಿಯಲ್ಲಿ, ಪ್ರತಿ ಮತವೂ ತನ್ನದೇ ಆದ ಪರಿಣಾಮ ಉಂಟು ಮಾಡುತ್ತದೆ. ಇಂತಹ ಡಮ್ಮಿ ಅಥವಾ ನಕಲಿ ಅಭ್ಯರ್ಥಿಗಳು ಸಾಕಷ್ಟು ನಷ್ಟ ಉಂಟುಮಾಡಿ ಅಸಲಿ ಅಭ್ಯರ್ಥಿಗಳ ಭವಿಷ್ಯವನ್ನೇ ಹಾಳು ಮಾಡಬಹುದು.

ಕಳೆದ ವರ್ಷ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರಿನ ಜಯನಗರ ಕ್ಷೇತ್ರದಿಂದ ಕಾಂಗ್ರೆಸ್‌ನ ಸೌಮ್ಯರೆಡ್ಡಿಯವರು ಕೇವಲ 16 ಮತಗಳ ಅಂತರದಿಂದ ಸೋತರು. ಕಣದಲ್ಲಿ ಸೌಮ್ಯರೆಡ್ಡಿ ಹೆಸರಿನ ಮತ್ತೊಬ್ಬ ಅಭ್ಯರ್ಥಿ ಸಹ ಇದ್ದು, ಅವರಿಗೆ 320 ಮತಗಳು ಲಭಿಸಿತ್ತು. ಕಣದಲ್ಲಿ ಸೌಮ್ಯ ಹೆಸರಿನ ಆ ಅಭ್ಯರ್ಥಿ ಇಲ್ಲದೆ ಹೋಗಿದ್ದಲ್ಲಿ ಅಸಲಿ "ಸೌಮ್ಯರೆಡ್ಡಿ" ವಿಜಯಶಾಲಿಯಾಗುತ್ತಿದ್ದರು.

ರಾಜಕೀಯ ಪಕ್ಷಗಳು ಒಂದೇ ಹೆಸರಿನ ಅಭ್ಯರ್ಥಿಗಳನ್ನು ಮಾತ್ರವೇ ಬಳಸಿಕೊಳ್ಳುವುದಿಲ್ಲ. ಅವುಗಳು ಪಕ್ಷದ ಸಂಕ್ಷೇಪಣ ರೂಪಗಳು ಹಾಗೂ ಚಿನ್ಹೆಗಳ ಬಳಸಿಕೊಂಡೂ ಮತದಾರರಲ್ಲಿ ಗೊಂದಲ ಸೃಷ್ಟಿಸುತ್ತವೆ. ಚುನಾವಣೆಗಳು ಬಂದಾಗ, ಬೇರೆ ಪಕ್ಷಗಳ ಮತಗಳನ್ನು ಸೆಳೆಯಲು ಅವುಗಳ ಹೆಸರನ್ನೂ ಕಾಪಿ ಮಾಡುತ್ತವೆ. ಆಮ್ ಆದ್ಮಿ ಪಕ್ಷವು (ಎಎಪಿ) ಇನ್ನೂ ಎರಡು ಎಎಪಿಗಳ ಜೊತೆ ಹೆಣಗಾಡಬೇಕಾಗಿತ್ತು. ಒಂದು ಪಕ್ಷದ ಹೆಸರು ಆಪ್‌ಕಿ ಅಪನಿ ಪಾರ್ಟಿ (ಅದೂ ಎಎಪಿ), ಆದರೆ, ಬ್ರಾಕೆಟ್‌ನಲ್ಲಿ ಜನತಾ ಎಂದು ಸೇರಿಸಿ, ಎಎಪಿ(ಪಿ) ಎಂದು ನಮೂದಿಸಲಾಗಿತ್ತು.

ಇಂತಹದ್ದು ಇಲ್ಲಿಗೇ ಮುಗಿಯುವುದಿಲ್ಲ. ಒಂದೇ ಹೆಸರಿನವರು, ಹಾಗೂ ಪಕ್ಷದ ಸಂಕ್ಷೇಪಣ ರೂಪ ಸಾಕಾಗದಿದ್ದರೆ, ಅವರ ಗಮನ ಚಿನ್ಹೆಗಳತ್ತಲೂ ಹರಿಯುತ್ತದೆ. ಆಪ್‌ಕಿ ಅಪನಿ ಪಾರ್ಟಿ (ಜನತಾ) ಪಕ್ಷವು ಪ್ರಕಾಶಮಾನವಾದ ಬೆಳಕು ಸೂಸುವ ಬ್ಯಾಟರಿ(ಟಾರ್ಚ್)ಯನ್ನು ತನ್ನ ಚಿನ್ಹೆಯನ್ನಾಗಿ ಆರಿಸಿಕೊಂಡರೆ, ಎಎಪಿ ಪಕ್ಷವು ಈ ಬ್ಯಾಟರಿ ಚಿನ್ಹೆಯು ತನ್ನ ಚಿನ್ಹೆ, ಪೊರಕೆಯಂತೆಯೇ ಕಾಣುತ್ತದೆ ಎಂದು ದೂರಿತು. ದೆಹಲಿ ಹೈಕೋರ್ಟ್, ಎಎಪಿ ಪಕ್ಷದ ಚಿನ್ಹೆಯು ಹೋಲಿಕೆಯಾಗುವುದರಿಂದ ಎಎಪಿ (ಪಿ)ಯೂ ಪ್ರಕಾಶಮಾನ ಬ್ಯಾಟರಿಯ ತನ್ನ ಚಿನ್ಹೆಯನ್ನು ಬಳಸದಂತೆ ಆದೇಶಿಸಿತು.

ಆಂಧ್ರಪ್ರದೇಶದಲ್ಲೂ ಚಿನ್ಹೆಗೆ ಸಂಬಂಧಿಸಿದಂತೆ, ಇಬ್ಬರು ಅಭ್ಯರ್ಥಿಗಳು ಕಾನೂನಿನ ಮೊರೆ ಹೋದರು. ಅವರ ಪೈಕಿ ಒಬ್ಬರದ್ದು ಸೀಲಿಂಗ್ ಫ್ಯಾನ್ ಚಿನ್ಹೆಯಾದರೆ, ಮತ್ತೊಬ್ಬರದ್ದು, ಹೆಲಿಕಾಪ್ಟರ್. ವಾಸ್ತವವಾಗಿ ಮತದಾರರು, ಫ್ಯಾನಿನ (ಬ್ಲೇಡ್) ಹಾಗೂ ಹೆಲಿಕಾಪ್ಟರಿನ ಅಲಗುಗಳ ನಡುವೆ ಅಷ್ಟೇನೂ ವ್ಯತ್ಯಾಸ ಕಾಣಲಾರರು!

ಚುನಾವಣಾ ಆಯೋಗವು ಪ್ರಗತಿಪರವೆಂದು ಬಿಂಬಿಸಿಕೊಳ್ಳುವ ನಿಟ್ಟಿನಲ್ಲಿ ಮತದಾರರುಗಳನ್ನು ವಂಚಿಸುವ ಇಂತಹ ಪಿಡುಗನ್ನು ಹತ್ತಿಕ್ಕುವಲ್ಲಿ ವಿಫಲವಾಗಿದೆ.

ಚುನಾವಣಾ ಆಯೋಗವು, ಖಂಡಿತವಾಗಿ, ಅನಕ್ಷರಸ್ಥ ಮತದಾರನನ್ನು ವಂಚಿಸುವ ಇಂತಹ ಪ್ರತಿಯೊಂದು ಪ್ರಯತ್ನವನ್ನು ತಡೆಯಬೇಕು. ಮತಪತ್ರಗಳಲ್ಲಿ ಅಭ್ಯರ್ಥಿಗಳ ಹೆಸರಿನ ನಂತರ ಅವರ ಭಾವಚಿತ್ರವನ್ನು ಮುದ್ರಿಸಬೇಕು. ಈ ಕ್ರಮವನ್ನು ಚುನಾವಣಾ ಆಯೋಗ ಅನುಸರಿಸುತ್ತೇವೆ ಎಂದು ಹೇಳುತ್ತಾ ಬಂದಿದ್ದರೂ ಇದುವರೆಗೂ ಜಾರಿಯಾಗಿಲ್ಲ.

ಅದರಲ್ಲೂ ರಾಜಕೀಯ ಪಕ್ಷಗಳು ಮತದಾರರಿಗೆ ಸ್ಪಷ್ಟತೆ ನೀಡಬೇಕೆಂದು ಚುನಾವಣಾ ಆಯೋಗ ಹೇಳುತ್ತಿರುವುದು ದುರದೃಷ್ಟಕರವಾಗಿದೆ.

ಸದ್ಯಕ್ಕೆ, ಶೇಕ್ಸ್‌ಪಿಯರ್ ಬರೆದಿರುವರು, "ಹೆಸರಿನಲ್ಲಿ ಏನಿದೆ? ಗುಲಾಬಿಯನ್ನು ಬೇರೆ ಹೆಸರಿನಿಂದ ಕರೆದರೂ, ಅದು ಸುಗಂಧ ಪರಿಮಳವನ್ನೇ ಬೀರುತ್ತದೆ".


ಖಂಡಿತ, ಅದು ಹಾಗೆಯೇ ಇರುತ್ತದೆ ಬಿಡಿ. ಆದರೆ ಮತಪತ್ರದಲ್ಲಿ, ಮತದಾರನನ್ನು ವಂಚಿಸಲು ನಕಲಿ ಹೆಸರುಗಳ ಹರಿಯಬಿಟ್ಟರೆ ಅದು ನಮ್ಮ ಚುನಾವಣಾ ವ್ಯವಸ್ಥೆ ದುರ್ನಾತ ಬೀರುವಂತೆ ಮಾಡದೇ ಇರದು.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಚೆಕ್‌ಪೋಸ್ಟ್‌ನಲ್ಲಿ

4 ದಿನದಲ್ಲಿ 20.51 ಲಕ್ಷ ರೂ. ಹಣ ಜಪ್ತಿ

ಮೈಸೂರು,ಏ.15(ಆರ್‌ಕೆ)- ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸ್ಥಾಪಿಸಿರುವ ತಪಾಸಣಾ ಕೇಂದ್ರದಲ್ಲಿ ಕಳೆದ 4 ದಿನದಲ್ಲಿ ಸೂಕ್ತ ದಾಖಲೆ ಇಲ್ಲದ ಒಟ್ಟು 20.51 ಲಕ್ಷ ರೂ. ಹಣವನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಚೆಕ್‌ಪೋಸ್ಟ್ ಮ್ಯಾಜಿಸ್ಟ್ರೇಟ್, ಮೈಸೂರು ಮಹಾನಗರಪಾಲಿಕೆ ಅಸಿಸ್ಟೆಂಟ್ ಇಂಜಿನಿಯರ್ ಕೆ.ಮಣಿ ನೇತೃತ್ವದ ತಂಡ ತಪಾಸಣೆ ನಡೆಸಿದಾಗ ಇಂದು ಬೆಳಗ್ಗೆ 11 ಗಂಟೆಯಲ್ಲಿ ಪ್ರಯಾಣಿಕರೊಬ್ಬರು 2,27,900 ರೂ ಹಣ ಸಾಗಿಸುತ್ತಿದ್ದುದು ಪತ್ತೆಯಾಯಿತು. ಆ ಹಣಕ್ಕೆ ಯಾವುದೇ ಪೂರಕ ದಾಖಲೆ ಇಲ್ಲದ ಕಾರಣ ತಪಾಸಣಾ ಕೇಂದ್ರದ ಅಧಿಕಾರಿಗಳು ನಗದನ್ನು ವಶಪಡಿಸಿಕೊಂಡರು. ನಿನ್ನೆ(ಭಾನುವಾರ)ಯೂ ಪ್ರಯಾಣಿಕರೊಬ್ಬರು ಸಾಗಿಸುತ್ತಿದ್ದ 1,54,000 ರೂ ನಗದನ್ನು ವಶಪಡಿಸಿಕೊಳ್ಳಲಾಗಿತ್ತು. ಅದೇ ರೀತಿ ಕಳೆದ ಬುಧವಾರ ಇಬ್ಬರು ಪ್ರಯಾಣಿಕರಿಂದ 8,25,000 ರೂ. ಹಾಗೂ ಗುರುವಾರ ಒಬ್ಬರಿಂದ 2,45,000 ರೂ., ಹೀಗೆ ಇನ್ನೊಬ್ಬರಿಂದ 6 ಲಕ್ಷ ರೂ.ಗಳನ್ನು ಅಧಿಕಾರಿಗಳು ಜಪ್ತಿ ಮಾಡಿದ್ದರು. ಎಲ್ಲಾ ಹೆದ್ದಾರಿ ಚೆಕ್‌ಪೋಸ್ಟ್‌ಗಳಲ್ಲಿ, ತೀವ್ರ ತಪಾಸಣೆ ನಡೆಸುತ್ತಿದ್ದಾಗ್ಯೂ ಹಾಡಹಗಲೇ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಹಣ ಸಾಗಿಸುವಾಗ ತಪಾಸಣೆ ವೇಳೆ ಹಣದ ಸಮೇತ ಸಿಕ್ಕಿಬೀಳುತ್ತಿದ್ದಾರೆ. ಅಧಿಕಾರಿಗಳ ಕಣ್ತಪ್ಪಿಸಿ ಟ್ರೇನು, ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ದಾಖಲೆ ಇಲ್ಲದೆ ಹಣ ಸಾಗಿಸಲೆತ್ನಿಸುತ್ತಿದ್ದಾರೆ. ಸೂಕ್ತ ದಾಖಲೆಗಳಿಲ್ಲದೆ, ಹಣ, ಆಭರಣ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಸಾಗಿಸುವ ಸಾಹಸ ಮಾಡಬಾರದು ಎಂದು ಅಧಿಕಾರಿಗಳು ಸಲಹೆ ನೀಡಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ತೀವ್ರಗೊಳಿಸುತ್ತಿರುವುದಲ್ಲದೆ, ಸ್ಟಾಟಿಕ್ ಸರ್ವಲನ್ಸ್, ಟೀಂ ಫ್ಲೈಯಿಂಗ್ ಸ್ಕ್ವಾಡ್, ವಿಡಿಯೋ ಸರ್ವೆಲನ್ಸ್ ಟೀಂಗಳಂತಹ ತಂಡಗಳ ಅಧಿಕಾರಿಗಳು ದಿನವಿಡೀ ಕಾರ್ಯಪ್ರವೃತ್ತರಾಗಿದ್ದಾರೆ.

ವೈನಾಡಿಗೆ ತೆರಳುವ ಮಾರ್ಗ ಮಧ್ಯೆ ಮೈಸೂರಲ್ಲಿ ಕೆಲ ಸಮಯ ಕಳೆದ ರಾಹುಲ್ ಗಾಂಧಿ




ಕೇರಳದ ವೈನಾಡಿಗೆ ತೆರಳಲು ದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಸೋಮವಾರ ಬೆಳಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗಮಿಸಿದ್ದರು.

ಮೈಸೂರು,ಏ.15(ಪಿಎಂ)- ಚುನಾವಣಾ ಪ್ರಚಾರಕ್ಕಾಗಿ ಕೇರಳದ ವೈನಾಡಿಗೆ ತೆರಳಲು ದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಸೋಮವಾರ ಬೆಳಗ್ಗೆ ಆಗಮಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರನ್ನು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸ್ವಾಗತಿಸಿದರು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸಹ ರಾಹುಲ್ ಗಾಂಧಿಯವರೊಂದಿಗಿದ್ದರು. ಮಂಡಕಳ್ಳಿ ವಿಮಾನ ನಿಲ್ದಾಣದ ವಿಐಪಿ ಕೊಠಡಿಯಲ್ಲಿ ರಾಹುಲ್‌ಗಾಂಧಿ ಹಾಗೂ ವೇಣುಗೋಪಾಲ್ ಕೆಲಕಾಲ ವಿಶ್ರಾಂತಿ ಪಡೆದರು.

ಇದೇ ವೇಳೆ ಡಾ.ಬಿ.ಜೆ.ವಿಜಯಕುಮಾರ್ ಅವರೊಂದಿಗೆ ಮೈಸೂರು-ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಬಗ್ಗೆ ಚರ್ಚೆ ನಡೆಸಿದರು ಎನ್ನಲಾಗಿದೆ. ಜೊತೆಗೆ ಈ ಎರಡೂ ಕ್ಷೇತ್ರಗಳ ಪ್ರಸ್ತುತ ಚಿತ್ರಣ ಒಳಗೊಂಡ ವರದಿಯನ್ನೂ ಇದೇ ಸಂದರ್ಭದಲ್ಲಿ ವಿಜಯಕುಮಾರ್ ತಮ್ಮ ನಾಯಕರಿಗೆ ಸಲ್ಲಿಸಿದರು ಎಂದು ಹೇಳಲಾಗಿದೆ.

ಇದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದೂರವಾಣಿ ಕರೆ ಮಾಡಿದ ರಾಹುಲ್ ಗಾಂಧಿ, ಅವರ ಆರೋಗ್ಯ ವಿಚಾರಿಸಿದರು. ಮೈಸೂರಿನ ಮೈಲಾರಿ ಹೋಟೆಲ್ ದೋಸೆ ಸೇವಿಸಿದ ಉಭಯ ನಾಯಕರು, ಬಳಿಕ ಬೆಳಗ್ಗೆ 9.45ರ ವೇಳೆಗೆ ಹೆಲಿಕ್ಯಾಪ್ಟರ್‌ನಲ್ಲಿ ವೈನಾಡಿಗೆ ತೆರಳಿದರು. ರಾಷ್ಟ್ರೀಯ ವಿದ್ಯಾರ್ಥಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಾಗೇಶ್ ಕರಿಯಪ್ಪ ಸಹ ಡಾ.ಬಿ.ಜೆ.ವಿಜಯಕುಮಾರ್ ಜೊತೆಗಿದ್ದು ತಮ್ಮ ನಾಯಕರನ್ನು ಸ್ವಾಗತಿಸಿದರು.

ಈಶ್ವರಪ್ಪಗೆ ಏಪ್ರಿಲ್ 22 ಡೆಡ್‌ಲೈನ್: ನಾಮಪತ್ರ ವಾಪಸ್ ಪಡೆಯದಿದ್ದರೆ ಬಿಜೆಪಿಯಿಂದ ಉಚ್ಚಾಟನೆ?



ಶಿವಮೊಗ್ಗ: ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ತಮ್ಮ ಪುತ್ರ ಕೆ.ಇ. ಕಾಂತೇಶ್‌ಗೆ ಹಾವೇರಿ ಲೋಕಸಭೆ ಕ್ಷೇತ್ರದ ಟಿಕೆಟ್ ನಿರಾಕರಿಸಿದ್ದರಿಂದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ವಿರುದ್ಧ ಮುನಿಸಿಕೊಂಡಿದ್ದು ಇದೀಗ ಶಿವಮೊಗ್ಗದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ವಿರುದ್ಧ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

ಬಿಎಸ್‌ವೈ ಕುಟುಂಬದಿಂದ ಬಿಜೆಪಿಯನ್ನು ಮುಕ್ತಗೊಳಿಸಬೇಕು ಎಂದು ಪಣತೊಟ್ಟಿರುವ ಈಶ್ವರಪ್ಪ ಕಳೆದ ವಾರ ತಮ್ಮ ನಾಮಪತ್ರವನ್ನೂ ಸಲ್ಲಿಕೆ ಮಾಡಿದ್ದರು. ಇದರ ಬೆನ್ನಲ್ಲೇ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮುಂದಿನ ದಿನಗಳಲ್ಲಿ ಈಶ್ವರಪ್ಪ ನಾಮಪತ್ರ ವಾಪಸ್ ಪಡೆಯಲಿದ್ದಾರೆ ಎಂದು ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಬ್ರಹ್ಮನೇ ಬಂದು ಹೇಳಿದರೂ ನಾನು ನಾಮಪತ್ರ ವಾಪಸ್ ಪಡೆಯುವುದಿಲ್ಲ ಎಂದು ಈಶ್ವರಪ್ಪ ಹೇಳುತ್ತಿದ್ದಾರೆ. ಈ ಹಿಂದೆ ಈಶ್ವರಪ್ಪರಿಗೆ ಹೈಕಮಾಂಡ್ ದೆಹಲಿಗೆ ಬರುವಂತೆ ಬುಲಾವ್ ನೀಡಿತ್ತು ಆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಈಶ್ವರಪ್ಪರ ಭೇಟಿಗೆ ಅವಕಾಶ ನೀಡದ ಹಿನ್ನೆಲೆಯಲ್ಲಿ ಈಶ್ವರಪ್ಪ ನಾನು ಶಿವಮೊಗ್ಗದಿಂದ ಸ್ಪರ್ಧಿಸೇ ತೀರುತ್ತೇನೆ ಎಂದು ಹಠ ತೊಟ್ಟಿದ್ದಾರೆ.

ಇನ್ನು ಈಶ್ವರಪ್ಪ ಮನವೊಲಿಕೆ ಮಾಡುವ ಕೆಲಸವನ್ನು ಬಿಜೆಪಿ ಹೈಕಮಾಂಡ್ ಕೈಬಿಟ್ಟಿದೆ. ಅಲ್ಲದೆ ಕಾದು ನೋಡುವ ತಂತ್ರ ಅನುಸರಿಸುತ್ತಿದ್ದು ಏಪ್ರಿಲ್ 22ರೊಳಗೆ ಈಶ್ವರಪ್ಪ ನಾಮಪತ್ರ ವಾಪಸ್ ಪಡೆಯದಿದ್ದರೆ ಅವರನ್ನು ಪಕ್ಷದಿಂದ ಉಚ್ಚಾಟಿಸುವ ಕ್ರಮಕ್ಕೆ ಹೈಕಮಾಂಡ್ ಮುಂದಾಗಲಿದೆ ಎಂದು ಹೇಳಲಾಗುತ್ತಿದೆ. ಈ ಸಂಬಂಧ ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು, ಈಶ್ವರಪ್ಪ ಅವರು ನಾಮಪತ್ರ ವಾಪಸ್ ಪಡೆಯದಿದ್ದರೆ ಪಕ್ಷ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಿದೆ ಎಂದರು.

ಲೋಕಸಭಾ ಚುನಾವಣಾ ಕಣದಲ್ಲಿ ವ್ಯಾಪಕವಾಗಿ ಸಾಗಾಣೆಯಾಗುತ್ತಿದೆ ಹಣ–ಹೆಂಡ

- ಎಷ್ಟೇ ಬಿಗಿ ಕ್ರಮ ಕೈಗೊಂಡರೂ ನಿಲ್ಲುತ್ತಿಲ್ಲ ಅಕ್ರಮ ವಹಿವಾಟು
- ರಾಜಕೀಯ ಪ್ರಜ್ಞಾವಂತರರದಲ್ಲಿ ಆತಂಕದ ವಾತಾವರಣ

ಮೈಸೂರು, ಏ.15(ಎಸ್‌ಬಿಡಿ)– ಲೋಕಸಭಾ ಚುನಾವಣಾ ಅಖಾಡದಲ್ಲಿ ಒಂದೆಡೆ ಪ್ರಚಾರದ ಅಬ್ಬರ ಜೋರಾಗುತ್ತಿದ್ದು, ಮತ್ತೊಂದೆಡೆ ಹಣ–ಹೆಂಡದ ಹೊಳೆಯೇ ಹರಿಯುತ್ತಿದೆ.

ಅಬಕಾರಿ ಇಲಾಖೆಯವರು ಕೆಎಸ್‌ಬಿಎಲ್ ಡಿಪೋಗಳು ಸೇರಿದಂತೆ ವಿವಿಧೆಡೆ ದಾಸ್ತಾನು ಮಾಡಿದ್ದ ದಾಖಲೆ ರಹಿತ ಕೋಟ್ಯಾಂತರ ಮೌಲ್ಯದ ಮದ್ಯವನ್ನು ವಶಪಡಿಸಿಕೊಳ್ಳುತ್ತಿದ್ದು, ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಹಣವನ್ನು ಚೆಕ್‌ಪೋಸ್ಟ್‌ಗಳಲ್ಲಿ ಜಪ್ತಿ ಮಾಡಲಾಗುತ್ತಿದೆ. ಗಾಂಜಾ ಘಾಟು ಕೂಡ ಜೋರಾಗಿದ್ದು, ಲಕ್ಷಾಂತರ ರೂ. ಮೌಲ್ಯದ ಮಾಲನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಅಮಲಿನಲ್ಲಿ ಚುನಾವಣೆ ಆತಂಕ: ಭಾರೀ ಪ್ರಮಾಣದ ಅಕ್ರಮ ಮದ್ಯ ಪತ್ತೆಯಾಗುತ್ತಿರುವುದು ಆತಂಕ ಸೃಷ್ಟಿಸಿದೆ. ಯಥೇಚ್ಛವಾಗಿ ಮದ್ಯ ಹಂಚಿ ಮದ್ಯ ಪ್ರಿಯರನ್ನು ಅಮಲಿನಲ್ಲಿಟ್ಟು ಚುನಾವಣಾ ನಡೆಸಲಾಗುತ್ತಿದೆಯೇ? ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ಶುರುವಾಗಿದೆ. ಮೊನ್ನೆ ಬೆಂಗಳೂರು ವಿಭಾಗದ ಲೋಕಸಭಾ ಕ್ಷೇತ್ರಗಳಲ್ಲಿ ಭಾರೀ ಪ್ರಮಾಣದ ಬಿಯರ್ ಹಾಗೂ ಇನ್ನಿತರ ಮದ್ಯವನ್ನು ವಶಪಡಿಸಿಕೊಳ್ಳಲಾಗಿದ್ದು, ಬಹುತೇಕ ಕೆಎಸ್‌ಬಿಎಲ್ ಡಿಪೋಗಳಲ್ಲೇ ಪತ್ತೆಯಾಗಿರುವುದು ಗಮನಾರ್ಹ.

ಭಾರೀ ಪ್ರಮಾಣದ ಮದ್ಯ: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕೊತ್ನೂರು–ಕಮ್ಮಸಂದ್ರದ ಬಳಿ 23.46 ಲಕ್ಷ, ಕೆ.ಜಿ.ಹಳ್ಳಿಯಲ್ಲಿ 49.88 ಲಕ್ಷ, ಕಾಡುಗೊಂಡನಹಳ್ಳಿ ಬಳಿ 46.14 ಲಕ್ಷ, ಇನ್‌ಲ್ಯಾಂಡ್ ಕಂಟೈನರ್ ಡಿಪೋದಲ್ಲಿ 77.31 ಲಕ್ಷ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಹೊಂಗಸಂದ್ರದಲ್ಲಿ 34 ಲಕ್ಷ, ಚಿಕ್ಕಬಳ್ಳಾಪುರ ಕ್ಷೇತ್ರದ ಮಾದನಾಯಕನಹಳ್ಳಿಯಲ್ಲಿ 46.14 ಲಕ್ಷ ಹಾಗೂ ಬೆಂಗಳೂರು ಉತ್ತರ ಕ್ಷೇತ್ರದ ಬಳ್ಳಾರಿ ಮುಖ್ಯರಸ್ತೆಯಲ್ಲಿ 27.43 ಲಕ್ಷದ ಬಿಯರ್ ವಶಪಡಿಸಿಕೊಳ್ಳಲಾಗಿದೆ. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ 89.25 ಲಕ್ಷ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ದೊಡ್ಡಕಮ್ಮನಹಳ್ಳಿಯಲ್ಲಿ 55.62 ಲಕ್ಷ, ಕೋಲಾರ ಲೋಕಸಭಾ ಕ್ಷೇತ್ರದ ತಮಕಾ ಕೈಗಾರಿಕಾ ಪ್ರದೇಶದಲ್ಲಿ 76.86 ಲಕ್ಷ ಹಾಗೂ ಬಾಗಲಕೋಟೆ ಕ್ಷೇತ್ರದಲ್ಲಿ 59 ಲಕ್ಷ ಮೌಲ್ಯದ ಇತರೆ ಮಾದರಿ ಮದ್ಯ ಸೇರಿದಂತೆ ಮೊನ್ನೆ ಸುಮಾರು ಏಳೂವರೆ ಕೋಟಿ ಮೌಲ್ಯದ ಮದ್ಯವನ್ನು ವಶಕ್ಕೆ ಪಡೆಯಲಾಗಿದೆ.

ಹಣ–ಗಾಂಜಾ: ಬೆಂಗಳೂರು ದಕ್ಷಿಣ ಕ್ಷೇತ್ರದ ಜಯನಗರದಲ್ಲಿ ಎಫ್‌ಎಸ್‌ಟಿ ತಂಡದವರು ದಾಖಲೆ ಇಲ್ಲದೆ ಸಾಗಿಸುತ್ತಿದ್ದ 1.35 ಕೋಟಿ ರೂ. ಹಣವನ್ನು ಜಪ್ತಿ ಮಾಡಿದ್ದಾರೆ. ಕೋಲಾರ ಕ್ಷೇತ್ರದ ರಾಬರ್ಟ್‌ಸನ್‌ಪೇಟ್‌ನಲ್ಲಿ 20 ಲಕ್ಷ ಹಾಗೂ ಬೆಳಗಾವಿ ಕ್ಷೇತ್ರದ ಕೋಗನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ 12.49 ಲಕ್ಷ ರೂ. ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಬೆಂಗಳೂರು ದಕ್ಷಿಣ ಕ್ಷೇತ್ರ ಹಾಗೂ ಕೋಲಾರ ಕ್ಷೇತ್ರ ವ್ಯಾಪ್ತಿಯಲ್ಲಿ ತಲಾ 10 ಲಕ್ಷ ಮೌಲ್ಯದ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ಈವರೆಗೆ ಹಣ, ಮದ್ಯ ಸೇರಿ 356 ಕೋಟಿ ಮೌಲ್ಯದ ವಸ್ತು ವಶ

ಚುನಾವಣಾ ನೀತಿ ಸಂಹಿತೆ ಜಾರಿಯಾದಾಗಿನಿಂದ ಈವರೆಗೆ ಅಬಕಾರಿ ಇಲಾಖೆಯವರು ಸುಮಾರು 159 ಕೋಟಿ ರೂ. ಮೌಲ್ಯದ ಮದ್ಯ ವಶಪಡಿಸಿಕೊಂಡಿದ್ದಾರೆ. ಪೊಲೀಸ್, ಎಫ್‌ಎಸ್‌ಟಿ, ಎಸ್‌ಎಸ್‌ಟಿ ತಂಡಗಳು, ಆದಾಯ ತೆರಿಗೆ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯವರ ಕಾರ್ಯಾಚರಣೆಯಲ್ಲಿ ದಾಖಲೆ ಇಲ್ಲದ ಸುಮಾರು 49 ಕೋಟಿ ರೂ. ಹಣ, ಚಿನ್ನ, ಬೆಳ್ಳಿ ಆಭರಣಗಳು ಹಾಗೂ ಇತರೆ ಉಡುಗೊರೆ ವಸ್ತುಗಳು ಸೇರಿದಂತೆ ಒಟ್ಟು 356 ಕೋಟಿ ರೂ. ಮೌಲ್ಯದ ಹಣ ಮತ್ತು ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

ಐದನೇ ಪುಟದಿಂದ

ಶರಣಾಗತಿ ಸ್ಥಿತಿ ಯಾಕೆ ಬಂತು!

ಹೇಳಿರಲಿಲ್ಲ? ಎಂದು ಪ್ರಶ್ನಿಸಿರುವ ಸಿದ್ದರಾಮಯ್ಯ, ಇವೆಲ್ಲವೂ ಅನುಕೂಲ ಶಾಸ್ತ್ರ ಅಷ್ಟೇ ಎಂಬುದು ರಾಜ್ಯದ ಜನರಿಗೆ ತಿಳಿದಿದೆ ಎಂದಿದ್ದಾರೆ.

ರಾಜ್ಯ ಸರ್ಕಾರಕ್ಕೆ ಅನ್ಯಾಯವಾದಾಗ ಅದನ್ನು ವಿರೋಧಿಸಿ ಕೇಂದ್ರ ಸರ್ಕಾರ ಮತ್ತು ಪ್ರಧಾನಿಯನ್ನು ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ. ಇದೇ ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಅಂದಿನ ಪ್ರಧಾನಿ ಡಾ. ಮನಮೋಹನ್ ಸಿಂಗ್ ವಿರುದ್ಧ ಯಾವ ಭಾಷೆ ಬಳಸಿದ್ದರೂ ಎಂದು ನಿಮಗೆ ನೆನಪಿರಬಹುದೆಂದು ಭಾವಿಸಿದ್ದೇನೆ. ದೇವೇಗೌಡರೇ ಈಗಲೂ ಕಾಲ ಮಿಂಚಿಲ್ಲ. ನಿಮ್ಮ ತಪ್ಪನ್ನು ತಿದ್ದಿಕೊಂಡು ಕನ್ನಡಿಗರಿಗೆ ಕೇಂದ್ರ ಸರ್ಕಾರದಿಂದ ಆಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿ. ತೆರಿಗೆ ಹಂಚಿಕೆ, ಬರ ಪರಿಹಾರ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ನರೇಂದ್ರ ಮೋದಿ ಸರ್ಕಾರ ಕನ್ನಡಿಗರ ಕತ್ತು ಕುಯ್ಯುತ್ತಿದೆ. ಅದರ ವಿರುದ್ಧ ನೀವು ಧ್ವನಿ ಎತ್ತದೇ ಇರುವುದರಿಂದ ವರ್ತಮಾನದಲ್ಲಿ ನಿಮ್ಮ ಪಕ್ಷಕ್ಕೆ ಒಂದಷ್ಟು ಲಾಭವಾಗಲೂಬಹುದು. ಆದರೆ, ಇತಿಹಾಸ ನಿಮ್ಮನ್ನು ಖಂಡಿತಾ ಕ್ಷಮಿಸುವುದಿಲ್ಲಾ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ರಾಹುಲ್ ಗಾಂಧಿ ಪ್ರಚಾರ ಅಬ್ಬರ

ತದನಂತರ ಸಂಜೆ ಕೋಲಾರದಲ್ಲಿ ಎಂಟು ಕಿಲೋ ಮೀಟರ್ ರೋಡ್ ಶೋ ಹಾಗೂ ಬೃಹತ್ ಸಮಾವೇಶ ಉದ್ದೇಶಿಸಿ ಕಾಂಗ್ರೆಸ್ ಅಭ್ಯರ್ಥಿ ಪರ ಮತ ಯಾಚಿಸಲಿದ್ದಾರೆ.

ಮಂಡ್ಯದಲ್ಲಿ ಕೇವಲ ಈ ಕ್ಷೇತ್ರಕ್ಕೆ ಸೀಮಿತವಾಗಲ್ಲದೆ, ಬೆಂಗಳೂರು ಗ್ರಾಮಾಂತರ, ಮೈಸೂರು–ಕೊಡಗು, ಚಾಮರಾಜನಗರ ಹಾಗೂ ಹಾಸನದಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಲಿದ್ದಾರೆ.

ಕೋಲಾರದಲ್ಲಿ ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಉತ್ತರ ಕ್ಷೇತ್ರಗಳ ಅಭ್ಯರ್ಥಿಗಳ ಪರವೂ ಮತಯಾಚನೆ ನಡೆಸಲಿದ್ದಾರೆ. ಈ ಮೊದಲ ಕಾರ್ಯಕ್ರಮದಂತೆ ರಾಹುಲ್ ಗಾಂಧಿ ಏಪ್ರಿಲ್ 17ರಂದು ಚಿತ್ರದುರ್ಗ ಹಾಗೂ ತುಮಕೂರಿನಲ್ಲಿ ರೋಡ್ ಶೋ ಹಾಗೂ ಚುನಾವಣಾ ಪ್ರಚಾರ ಕೈಗೊಳ್ಳಬೇಕಿತ್ತು. ಆದರೆ, ಪ್ರವಾಸ ಕಾರ್ಯಕ್ರಮದಲ್ಲಿ ಕೆಪಿಸಿಸಿ ಬದಲಾವಣೆ ಮಾಡಿ ಜೆಡಿಎಸ್ ಭದ್ರಕೋಟೆಯಲ್ಲಿ ರಾಹುಲ್ ವರ್ಚಸ್ಸಿಗೆ ಮೊರೆ ಹೋಗಿದೆ.

ಎಲ್ಲದಕ್ಕೂ ಮಿಗಿಲಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ದೇವೇಗೌಡರು ಎನ್‌ಡಿಎ ಅಭ್ಯರ್ಥಿಗಳ ಪರ ಮತಯಾಚನೆ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಹಾಗೂ ಇಂಡಿಯಾ ಒಕ್ಕೂಟದ ಬಗ್ಗೆ ಮಾಡಿರುವ ಟೀಕೆಗಳಿಗೆ ಉತ್ತರಿಸುವ ಉದ್ದೇಶದಿಂದ ಈ ವೇದಿಕೆ ಸೃಷ್ಟಿಸಲಾಗಿದೆ ಎನ್ನಲಾಗಿದೆ. ರಾಹುಲ್ ಗಾಂಧಿ ಹಿಂತಿರುಗುತ್ತಿದ್ದಂತೆ ಪ್ರಿಯಾಂಕ ಗಾಂಧಿ ಅವರಿಂದ ರಾಜ್ಯದಲ್ಲಿ ಒಂದು ಸುತ್ತಿನ ಪ್ರವಾಸ ಮಾಡಿಸಲು ಕೆಪಿಸಿಸಿ ಭರದ ಸಿದ್ಧತೆ ಮಾಡಿದೆ. ಬೆಂಗಳೂರು ಗ್ರಾಮಾಂತರ ಹಾಗೂ ಶಿವಮೊಗ್ಗದಲ್ಲಿ ಬೃಹತ್ ಸಮಾವೇಶ ಮತ್ತು ರೋಡ್ ಶೋ ಮಾಡಿಸಲು ಸಿದ್ಧತೆ ಮಾಡಿದ್ದು, ಪ್ರಿಯಾಂಕ ಅವರ ಅನುಮತಿ ಇನ್ನೂ ಸಿಕ್ಕಿಲ್ಲ. ರಾಹುಲ್ ಪ್ರವಾಸದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಉಪಸ್ಥಿತರಿರುವರು.

ಕಾಂಗ್ರೆಸ್‌ನವರು ಹಳೇ ಡೈಲಾಗ್ ಹೊಡಿತಲೇ ಇರಲಿ... ಮೋದಿ ಮತ್ತೆ ಮತ್ತೆ ಪ್ರಧಾನಿ ಆಗುತ್ತಲೇ ಇರ್ತಾರೆ...!

- ಮಾಜಿ ಸಚಿವ, ಜೆಡಿಎಸ್ ನಾಯಕ ಬಂಡೆಪ್ಪ ಕಾಶೆಂಪೂರ್ ವ್ಯಂಗ್ಯ
- ಮೋದಿಯವರೇ ಬಿಜೆಪಿ-ಜೆಡಿಎಸ್‌ಗೆ ಸ್ಪಿರಿಟ್



ಮೈಸೂರು ನಗರದ ಬಿಜೆಪಿ ಕಚೇರಿಗೆ ಸೋಮವಾರ ನಡೆದ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರ ಸಭೆಯಲ್ಲಿ ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್ ಮಾತನಾಡಿದರು.

ಮೈಸೂರು, ಏ.15(ಎಂಕೆ)– ಕಾಂಗ್ರೆಸ್‌ನವರದ್ದು ಅದೇ ಹಳೇ ಡೈಲಾಗ್... ಅವರ ಬಳಿ ಹೇಳಲು ಹೊಸದೇನು ಇಲ್ಲ... ಅವರು ಹಳೇ ಡೈಲಾಗ್‌ಗಳನ್ನು ಹೇಳುತ್ತಲೇ ಇರಲಿ.. ಮೋದಿಯವರು ಮತ್ತೆ ಮತ್ತೆ ಪ್ರಧಾನಿಯಾಗುತ್ತಲೇ ಇರುತ್ತಾರೆ ಎಂದು ಜೆಡಿಎಸ್ ಮುಖಂಡ, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್ ವ್ಯಂಗ್ಯವಾಡಿದರು.

ನಗರದ ಬಿಜೆಪಿ ಕಚೇರಿಗೆ ಸೋಮವಾರ ಭೇಟಿ ನೀಡಿ, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಮೈಸೂರು–ಕೊಡಗು, ಚಾ.ನಗರ ಲೋಕಸಭಾ ಕ್ಷೇತ್ರ ಸೇರಿದಂತೆ ರಾಜ್ಯದ ಎಲ್ಲಾ ಲೋಕಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಗೆಲ್ಲುವ ವಾತಾವರಣವಿದೆ ಭಾನುವಾರ ಮೈಸೂರಿನಲ್ಲಿ ನಡೆದಿರುವ ಮೈತ್ರಿ ಸಮಾವೇಶದಲ್ಲಿ ಪ್ರಧಾನಿ ಹಾಗೂ ಮಾಜಿ ಪ್ರಧಾನಿಗಳು ರಾಜ್ಯ ಮತ್ತು ದೇಶಕ್ಕೆ ಗೆಲುವಿನ ಸಂದೇಶ ನೀಡಿದ್ದಾರೆ. ಮೋದಿಯವರೇ ನಮಗೆ ಸ್ಪಿರಿಟ್ ಎಂದು ಹೇಳಿದರು.

ಕಾಂಗ್ರೆಸ್‌ನವರು ಬರೀ ಹಳೇ ಡೈಲಾಗ್‌ಗಳನ್ನೇ ಹೇಳುತ್ತಾರೆ. 15 ಲಕ್ಷ ಕೊಡಲಿಲ್ಲ ಎಂಬುದನ್ನು ಬಿಟ್ಟರೆ ಅವರ ಬಳಿ ಹೇಳಲು ಹೊಸದೇನು ಇಲ್ಲ. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿಯೂ ಇದೇ ಡೈಲಾಗ್ ಹೇಳುತ್ತಿದ್ದರೂ ಮೋದಿಯವರು ಪ್ರಧಾನಿಯಾಗಲಿಲ್ಲವೇ... ಈಗ ಮತ್ತದೇ ಡೈಲಾಗ್ ಹೇಳುತ್ತಿದ್ದು, ಮತ್ತೊಮ್ಮೆ ಮೋದಿಯವರು ಪ್ರಧಾನಿಯಾಗಲಿದ್ದಾರೆ. ಇದರಿಂದ ಕಾಂಗ್ರೆಸ್‌ನವರ ಹಳೇ ಡೈಲಾಗ್‌ಗಳು ಫೇಲ್ ಆಗಿವೆ ಎಂಬುದು ಸ್ಪಷ್ಟವಾಗಿದೆ ಎಂದು ಲೇವಡಿ ಮಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ವರ್ಷವಾಗುತ್ತಿದ್ದು, ರಾಜ್ಯದ ಜನತೆ ಏನು ಕೊಟಿದ್ದಾರೆ. ಮಹಿಳೆಯರಿಗೆ 2 ಸಾವಿರ ಕೊಡುತ್ತಿರುವುದು ಒಳ್ಳೆಯದೇ. ಆದರೆ ಅದಕ್ಕಿಂತ ಹೆಚ್ಚಿನ ಹಣವನ್ನು ತೆರಿಗೆ ರೂಪದಲ್ಲಿ ವಸೂಲಿ ಮಾಡಿತಿದ್ದಿರಲ್ಲಾ. ಒಂದು ಜೇಬಿಗೆ ಕೊಟ್ಟು, ಇನ್ನೊಂದು ಜೇಬಿನಿಂದ ಕಿತ್ತುಕೊಳ್ಳುವುದೇ ಕಾಂಗ್ರೆಸ್ ಗ್ಯಾರಂಟಿ. ಉಚಿತ ವಿದ್ಯುತ್ ಎಂದೇಳಿ ವ್ಯಾಪಾರಸ್ಥರಿಗೆ ಡಬಲ್ ಶಾಕ್ ನೀಡಿದ್ದಾರೆ. 5 ಕೆಜಿ ಅಕ್ಕಿಯನ್ನು ಕೇಂದ್ರ ಸರ್ಕಾರ ಕೊಡುತ್ತಿದೆ ಉಳಿದ 5 ಕೆಜಿ ಕೊಡಲು ಸಾಧ್ಯವಾಗದೆ ಹಣ ಕೊಡುತ್ತಿದ್ದೀರಿ. ಕೆಜಿ ಅಕ್ಕಿಗೆ 70 ರೂ. ಆಗಿರುವಾಗ ನಿಮ್ಮ 35 ರೂ. ಬಡವರ ಹೊಟ್ಟೆ ತುಂಬಿಸುವುದೇ ಎಂದು ಪ್ರಶ್ನಿಸಿದರು.

ಅಣ್ಣತಮ್ಮಂದಿರ ಮೈತ್ರಿ: ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಬಿಜೆಪಿ–ಜೆಡಿಎಸ್‌ನದ್ದು ಅಣ್ಣ–ತಮ್ಮಂದಿರ ಮೈತ್ರಿಯಾಗಿದ್ದು, ಯಾವುದೇ ಮುಜುಗರವಿಲ್ಲದೆ ಬಿಜೆಪಿ ಕಾರ್ಯಕರ್ತರು ಜೆಡಿಎಸ್ ಕಚೇರಿಗೆ ಹಾಗೂ ಜೆಡಿಎಸ್ ಮುಖಂಡರು ಬಿಜೆಪಿ ಕಚೇರಿಗೆ ಬರುತ್ತಿದ್ದಾರೆ. ಈ ಹಿಂದೆ ರಾಜ್ಯದಲ್ಲಿದ್ದ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ನೀಡಿದ ಆಡಳಿತವನ್ನು ಯಾವ ಸರ್ಕಾರವೂ ನೀಡಲು ಸಾಧ್ಯವಿಲ್ಲ. ರೈತರ ಸಾಲಮನ್ನಾ, ರೈತರ ಬಜೆಟ್ ಮಂಡನೆ ಪ್ರಮುಖವಾದುದ್ದಾಗಿವೆ ಎಂದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಜೆಡಿಎಸ್ ಹಿಂದುಳಿದ ವರ್ಗ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೇಮಾದ್ರಿ, ನಗರ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಕಾರ್ಮಿಕ ವಿಭಾಗದ ಅಧ್ಯಕ್ಷ ಸಿದ್ದೇಶ್, ಎನ್.ಆರ್.ಬ್ಲಾಕ್ ಅಧ್ಯಕ್ಷ ರಿಜ್ವಾನ್, ಬಿಜೆಪಿ ಮುಖಂಡ ಜೋಗಿ ಮಂಜು, ಜೆಡಿಎಸ್ ಚಾ.ನಗರ ಮಹಿಳಾ ಘಟಕ ಅಧ್ಯಕ್ಷ ಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ಯದುವೀರ್ ಗೆಲ್ಲಿಸಿ...

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಒಳ್ಳೆಯ ಅಭ್ಯರ್ಥಿ ಹಾಗೂ ಉತ್ತಮ ವ್ಯಕ್ತಿತ್ವವುಳ್ಳ ಯುವಕರಾಗಿದ್ದಾರೆ. ಅವರನ್ನು ಅತೀ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವ ಜವಾಬ್ದಾರಿ ಜೆಡಿಎಸ್ ಮುಖಂಡರು ಸೇರಿದಂತೆ ಎಲ್ಲರದ್ದಾಗಿದೆ.


- ಬಂಡೆಪ್ಪ ಕಾಶೆಂಪೂರ್, ಮಾಜಿ ಸಚಿವ

500 ವರ್ಷಗಳ ನಂತರ ಅಯೋಧ್ಯೆಯಲ್ಲಿ ರಾಮನವಮಿ


ಅಯೋಧ್ಯೆ: ಹಿಂದೂ ಕ್ಯಾಲೆಂಡರ್ ಪ್ರಕಾರ ರಾಮನವಮಿಯನ್ನು ಏ. 17 ರಂದು ಆಚರಿಸಲಾಗುವುದು. ರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ವಿಶೇಷ ಸಿದ್ಧತೆಗಳನ್ನು ಮಾಡಲಾ ಗುತ್ತಿದೆ. ಏಕೆಂದರೆ ಬಾಲರಾಮನ ಪ್ರತಿಷ್ಠಾಪನೆ ಆದ ಬಳಿಕ ಇದೇ ಮೊದಲ ಬಾರಿಗೆ ಅಂದರೆ ಸರಿಸುಮಾರು 500 ವರ್ಷಗಳ ನಂತರ ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮನವಮಿ ಉತ್ಸವ ನಡೆಯುತ್ತಿದೆ.

ಬಾಲರಾಮನ ಹಣೆಗೆ ಸೂರ್ಯರಶ್ಮಿ: ಶ್ರೀ ರಾಮ ಜನ್ಮದಿನೋತ್ಸವ ಸಂದರ್ಭದಲ್ಲಿ ಏ. 17 ರಂದು ಮಧ್ಯಾಹ್ನ 12 ಗಂಟೆಗೆ ಸೂರ್ಯನ ಕಿರಣಗಳ ತಿಲಕ ಬಾಲರಾಮನ ಹಣೆಯಲ್ಲಿ ರಾರಾಜಿಸಲಿದೆ. ಈ ಸೂರ್ಯ ತಿಲಕವು 75 ಮಿ.ಮೀ. ಆಕಾರದಲ್ಲಿ ಇರಲಿದ್ದು, ಈಗಾಗಲೇ ಅಣಕು ಪ್ರಯೋಗ ಯಶಸ್ವಿಯಾಗಿದೆ. ಬಾಲರಾಮನ ಮೂರ್ತಿಯ ಮೇಲೆ ಮೂರು ಕನ್ನಡಿಗಳ ಸಹಾಯದಿಂದ ಎರಡೂವರೆ ನಿಮಿಷಗಳ ಕಾಲ ಸೂರ್ಯರಶ್ಮಿ ಬೀಳಲಿದೆ.

ರಾಮನವಮಿ ಆಚರಣೆಗೆ ಕಲಾವಿದರ ದಂಡು ಅಯೋಧ್ಯೆಗೆ ಭರಲಿದ್ದು ರಾಮನ ನಾಮಗಳ ಸ್ಮರಣೆ, ಭಜನೆ ಮತ್ತು ಭಕ್ತಿಗೀತೆಗಳನ್ನು ಹಾಡಲಿದ್ದಾರೆ. ವಿವಿಧ ರೀತಿಯ ಹೋಮ– ಹವನಗಳನ್ನು ಕೂಡ ಆಯೋಜಿಸಲಾಗಿದ್ದು ಶಾಸ್ತ್ರುದ್ಧವಾಗಿ ರಾಮ ನವಮಿ ಆಚರಣೆ ನಡೆಯಲಿದೆ. ಅಯೋಧ್ಯೆಯಲ್ಲೂ ಬಿಸಿಲು ಹೆಚ್ಚಾಗಿರುವುದರಿಂದ ರಾಮನ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು 600 ಮೀಟರ್ ಉದ್ದದ ಟೆಂಟ್ ವ್ಯವಸ್ಥೆ ಮಾಡಲಾಗುತ್ತಿದೆ. ಜೊತೆಗೆ ಅಲ್ಲಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಇರಲಿದೆ ಎಂದು ಟ್ರಸ್ಟ್ ಮೂಲಗಳು ತಿಳಿಸಿವೆ







ಮೈಸೂರು ಮೃಗಾಲಯದಲ್ಲಿ ಬೇಸಿಗೆ ಶಿಬಿರಕ್ಕೆ ಚಾಲನೆ

ಇಂದು ಮೃಗಾಲಯ ತೆರೆದಿರುತ್ತದೆ

ಬೇಸಿಗೆ ರಜೆ ಇರುವ ಹಿನ್ನೆಲೆಯಲ್ಲಿ ವಿವಿಧೆಡೆಯಿಂದ ಮಕ್ಕಳೊಂದಿಗೆ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದರಿಂದ ನಾಳೆ(ಏ.16) ಮೃಗಾಲಯದ ವಾರದ ರಜೆ ರದ್ದುಗೊಳಿಸಿ, ಪ್ರವಾಸಿಗರ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿರುವುದಾಗಿ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಮೃಗಾಲಂಯುದ ಆಂಪಿ ಥಿಯೇಟರ್‌ನಲ್ಲಿ ಸೋಮವಾರ ನಡೆದ ಪ್ರಸಕ್ತ ಸಾಲಿನ ಮೊದಲ ತಂಡದ ಬೇಸಿಗೆ ಶಿಬಿರವನ್ನು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಉದ್ಘಾಟಿಸಿ, ಮಕ್ಕಳೊಂದಿಗೆ ಸಂವಾದ ನಡೆಸುತ್ತಿರುವುದು.

ಮೈಸೂರು,ಏ.15(ಎಂಟಿವೈ)– ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡು ಧ್ವನಿ ಇಲ್ಲದ ಪ್ರಾಣಿಗಳಿಗೆ ಧ್ವನಿಯಾಗುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರು ಮೃಗಾಲಯದ ಆಂಪಿ ಥಿಯೇಟರ್‌ನಲ್ಲಿ ಸೋಮವಾರ ನಡೆದ ಪ್ರಸಕ್ತ ಸಾಲಿನ ಮೊದಲ ತಂಡದ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಮೃಗಾಲಯವು ಕಳೆದ ಹಲವು ವರ್ಷಗಳಿಂದ ಬೇಸಿಗೆ ಶಿಬಿರ ಆಯೋಜಿಸಿ ಮಕ್ಕಳಿಗೆ ಪರಿಸರ ಸಂರಕ್ಷಣೆ, ಪ್ರಾಣಿಗಳ ಜೀವನ ಕ್ರಮ, ಆಹಾರ ಪದ್ಧತಿ, ಜೀವವೈವಿಧ್ಯತೆ, ಅಳಿವಿನಂಚಿನಲ್ಲಿರುವ ಪ್ರಾಣಿ ಸಂಕುಲ, ವನ್ಯಜೀವಿಗಳ ಸಂರಕ್ಷಣೆ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ಒದಗಿಸಲಾಗುತ್ತಿದೆ ಎಂದರು.

1892ರಲ್ಲಿ ಸ್ಥಾಪಿತವಾದ ಮೈಸೂರು ಮೃಗಾಲಯದ ಇದುವರೆಗೆ ಸಾಕಷ್ಟು ಅಭಿವೃದ್ಧಿ ಕಂಡಿದೆ. ವರ್ಷದಿಂದ ವರ್ಷಕ್ಕೆ ಮೈಸೂರು ಮೃಗಾಲಯ ಸಾಧನೆ ಮಾಡುತ್ತಲೇ ಗಮನ ಸೆಳೆದಿದೆ. ದೇಶದ ಮೊಟ್ಟ ಮೊದಲ ಸ್ವಾವಲಂಬಿ ಮೃಗಾಲಯ ಎಂಬ ಕೀರ್ತಿ ಪಡೆದಿದೆ. ಸರ್ಕಾರದಿಂದ ಯಾವುದೇ ವಿಶೇಷ ಅನುದಾನ ಪಡೆಯದೇ ಇಲ್ಲಿ ಸಂಗ್ರಹವಾಗುವ ಮೃಗಾಲಯದಲ್ಲಿರುವ ಪ್ರಾಣಿ–ಪಕ್ಷಿಗಳ ಸಂಕುಲವನ್ನು ಆರೈಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ವೇಸ್ಟ್ ಟು ವೆಲ್ತ್ ಶೀರ್ಷಿಕೆಯಲ್ಲಿ ಮೈಸೂರು ಮೃಗಾಲಯದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದಿಂದ ವರ್ಮಿ ಕಾಂಪೋಸ್ಟ್ ತಯಾರಿಕೆ, ಪ್ರಾಣಿ–ಪಕ್ಷಿ ದತ್ತು ಸ್ವೀಕಾರ ಕಾರ್ಯಕ್ರಮವನ್ನು ದೇಶದಲ್ಲೇ ಮೊದಲ ಬಾರಿಗೆ ಮೈಸೂರು ಮೃಗಾಲಯದಲ್ಲಿ ಜಾರಿಗೊಳಿಸಲಾಯಿತು. ಈ ಎಲ್ಲಾ ಕಾರ್ಯಕ್ರಮಗಳು ಇತರೆ ಮೃಗಾಲಯಗಳಿಗೆ ಮಾದರಿಯಾಗಿವೆ. ಮೈಸೂರು ಮೃಗಾಲಯ ಪ್ರತಿವರ್ಷ ಬೇಸಿಗೆ ಶಿಬಿರ ಮಾತ್ರವಲ್ಲದೆ, ಯೂತ್ ಕ್ಲಬ್ ಮೂಲಕವೂ ವಿದ್ಯಾರ್ಥಿಗಳಿಗೆ ಪರಿಸರ, ವನ್ಯಜೀವಿ ಸಂರಕ್ಷಣೆ ಮಹತ್ವದ ಬಗ್ಗೆ ಶಿಕ್ಷಣ ನೀಡುತ್ತಾ ಬಂದಿದೆ. ಈ ಶಿಬಿರಗಳಲ್ಲಿ ತೊಡಗಿಸಿಕೊಂಡವರು ಮುಂದಿನ ದಿನಗಳಲ್ಲಿ ಮೃಗಾಲಯದ ಒಂದು ಭಾಗವಾಗುತ್ತಾರೆ. ಪ್ರಾಣಿ–ಪಕ್ಷಿಗಳಿಗೆ ಮಾತನಾಡಲು ಬರುವುದಿಲ್ಲ. ಈ ಶಿಬಿರದಲ್ಲಿ ಕಲಿತ ನಂತರ ಧ್ವನಿಯಿಲ್ಲದ ಪ್ರಾಣಿ–ಪಕ್ಷಿ(ಮಾತು ಬರದ) ಧ್ವನಿಯಾಗಬೇಕು. ಅವುಗಳ ಸಂರಕ್ಷಣೆಗೆ ಮೃಗಾಲಯ, ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

10 ದಿನಗಳ ಶಿಬಿರ: ಇಂದಿನಿಂದ ಆರಂಭವಾಗಿ ಏ.24ರವರೆಗೆ ನಡೆಯುವ ಬೇಸಿಗೆ ಶಿಬಿರದಲ್ಲಿ ಮೊದಲ ತಂಡದಲ್ಲಿ ಮೈಸೂರಿನ ವಿವಿಧ ಶಾಲೆಗಳ 65 ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಪ್ರತಿದಿನ ಸಂಪನ್ಮೂಲ ವ್ಯಕ್ತಿಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳಿಂದ ವನ್ಯಜೀವಿ ಸಂರಕ್ಷಣೆ ಹಾಗೂ ಜೀವನ ಕ್ರಮ ಸೇರಿದಂತೆ ಇನ್ನಿತರ ಮಹತ್ತರ ವಿಷಯಗಳ ಬಗ್ಗೆ ವಿವರಣೆ ನೀಡಲಿದ್ದಾರೆ. ಎರಡನೇ ತಂಡದ ಶಿಬಿರ ಮೇ 6ರಿಂದ ಮೇ 15ರವರೆಗೆ ನಡೆಯಲಿದೆ.

ಈ ಸಂದರ್ಭದಲ್ಲಿ ಮೈಸೂರು ಮೃಗಾಲಯದ ಸಹಾಯಕ ನಿರ್ದೇಶಕ ಡಾ.ಶ್ರೀನಿವಾಸ್, ಆರ್‌ಎಫ್‌ಓ ಮುನಿರಾಜು ಇನ್ನಿತರರಿದ್ದರು.

ವ್ಯಾಪಾರಕ್ಕಾಗಿ ಸೂಡಾನ್‌ಗೆ ತೆರಳಿದ್ದ ಮಹಿಳೆ ಸಾವು



ಹುಣಸೂರು, ಏ.15– ಈಶಾನ್ಯ ಆಫ್ರಿಕಾದ ಸೂಡಾನ್ ದೇಶಕ್ಕೆ ವ್ಯಾಪಾರಕ್ಕೆ ತೆರಳಿದ್ದ ತಾಲೂಕಿನ ಪಕ್ಷಿರಾಜಪುರದ ಅಲೆಮಾರಿ ಜನಾಂಗದ (ಹಕ್ಕಿಪಿಕ್ಕಿ) ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ.

ಅಲೆಮಾರಿ ಜನಾಂಗದ ನಂದಿನಿ ಸಾವನ್ನಪ್ಪಿದವರು. ಆಕೆ ಸಾವನ್ನಪ್ಪಿರುವ ವಿಚಾರವನ್ನು ಸೂಡಾನ್‌ನಲ್ಲಿರುವ ಹಕ್ಕಿಪಿಕ್ಕಿ ಸಮುದಾಯದವರು ದೂರವಾಣಿ ಮೂಲಕ ಕುಟುಂಬದವರಿಗೆ ತಿಳಿಸಿದ್ದಾರೆ. ನಂದಿನಿ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಪಕ್ಷಿರಾಜಪುರದಲ್ಲಿ ವಾಸವಿದ್ದ ನಂದಿನಿ ಪತಿ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಗ್ರಾಮಸ್ಥರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಮೈಸೂರಿನ ನಿವಾಸಕ್ಕೆ ತೆರಳಿ ಮಾಹಿತಿ ನೀಡಿ ಸೂಡಾನ್‌ನಿಂದ ನಂದಿನಿ ಶವ ತರಲು ನೆರವಾಗುವಂತೆ ಮನವಿ ಮಾಡಿದರು.

ಇವರ ಮನವಿಗೆ ಸ್ಪಂದಿಸಿದ ಮಂಜುನಾಥ್ ಅವರು ಮುಖ್ಯಮಂತ್ರಿಗಳ ಕಚೇರಿಯ ಹಿರಿಯ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡಿ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್ ಅವರ ಮೂಲಕ ಸೂಡಾನ್ ದೇಶದಲ್ಲಿರುವ ಭಾರತದ ರಾಯಭಾರಿ ಕಚೇರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ನಂದಿನಿಯವರ ಶವವನ್ನು ಸ್ವದೇಶಕ್ಕೆ ತರಲು ಎಲ್ಲಾ ರೀತಿಯ ವ್ಯವಸ್ಥೆ ಮಾಡಿದ್ದು, ಶವ ಏ.17 ರಂದು ಹುಣಸೂರಿಗೆ ಬರುವ ನಿರೀಕ್ಷೆ ಇದೆ.

ಮಹಿಳೆಯ 40 ಗ್ರಾಂ ತೂಕದ ಚಿನ್ನದ ಸರ ಕಳವು

ಮೈಸೂರು, ಏ.15(ಎಸ್‌ಪಿಎನ್)– ಮೈಸೂರಿಂದ ಮದ್ದೂರಿಗೆ ತೆರಳುವ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯ 40 ಗ್ರಾಂ ತೂಕದ ಚಿನ್ನದ ಸರ ಕಳುವಾಗಿದೆ.

ಎಚ್.ಡಿ.ಕೋಟೆಯ ಟೈಗರ್ ಬ್ಲಾಕಿನ ನಿವಾಸಿ ನೀಲಂ, ಚಿನ್ನದ ಸರ ಕಳೆದುಕೊಂಡವರು. ಇವರು ಏ.12ರಂದು ಎಚ್.ಡಿ.ಕೋಟೆಯಿಂದ ಮೈಸೂರಿನ ಗ್ರಾಮಾಂತರ ನಿಲ್ದಾಣಕ್ಕೆ ಆಗಮಿಸಿ, ಇಲ್ಲಿಂದ ಬಸ್ ಹತ್ತಿ ಮದ್ದೂರಿಗೆ ತೆರಳುವ ಸಂದರ್ಭದಲ್ಲಿ ಕತ್ತಿನಲ್ಲಿದ್ದ ಚಿನ್ನದ ಸರ ಕಳವು ಮಾಡಲಾಗಿದೆ ಎಂದು ನೀಲಂ ದೂರು ನೀಡಿದ್ದು, ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಾಳೆ ಶ್ರೀರಾಮ ನವಮಿ: ವಿಶೇಷ ಪೂಜೆ

ಚುಂಚನಕಟ್ಟೆ, ಏ.15– ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಏ.17 ರಂದು ಶ್ರೀರಾಮ ನವಮಿ ಪ್ರಯುಕ್ತ ವಿಶೇಷ ಪೂಜಾ ಕಾರ್ಯ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 5 ಗಂಟೆಗೆ ಶ್ರೀರಾಮನಿಗೆ ಅಭಿಷೇಕ, 10.30ಕ್ಕೆ ಉತ್ಸವ ಮತ್ತು ತೀರ್ಥ ಪ್ರಸಾದ, ಮಹಾಮಂಗಳಾರತಿ, 12 ರಿಂದ ಸಂಜೆ 6 ತನಕ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀರಾಮನ ಕೃಪೆಗೆ ಪಾತ್ರರಾಗುವಂತೆ ದೇವಾಲಯದ ಆಡಳಿತ ಮಂಡಳಿಯ ರಘು ಮತ್ತು ದೇವಾಲಯದ ಅರ್ಚಕ ನಾರಾಯಣ ಅಯ್ಯಂಗಾರ್, ವಾಸುದೇವನ್ ಕೋರಿದ್ದಾರೆ.

ಬೆದರಿಸಿ ಮಹಿಳೆ ಮೇಲೆ ಅತ್ಯಾಚಾರ

ನಂಜನಗೂಡು, ಏ.15– ವ್ಯಕ್ತಿಯೋರ್ವ ಮನೆಗೆ ನುಗ್ಗಿ ಮಹಿಳೆ ಮೇಲೆ ಅತ್ಯಾಚಾರ ನಡೆಸಿರುವ ಘಟನೆ ತಾಲೂಕಿನ ದೇವೀರಮ್ಮನಹಳ್ಳಿ ಗ್ರಾಮದಿಂದ ತಡವಾಗಿ ಬೆಳಕಿಗೆ ಬಂದಿದೆ.

ತಾಲೂಕಿನ ಕಳಲೆ ಗ್ರಾಮದ ನಿವಾಸಿ ನಾಗರಾಜು ಅತ್ಯಾಚಾರವೆಸಗಿದ ಆರೋಪಿ. ಉತ್ತರ ಪ್ರದೇಶ ಮೂಲದ ದಂಪತಿ ದೇವೀರಮ್ಮನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಮಹಿಳೆ ಪತಿ ಪಾನಿಪುರಿ ವ್ಯಾಪಾರ ಮಾಡಿಕೊಂಡಿದ್ದರು. ಇದೇ ಪಾನಿಪುರಿ ಅಂಗಡಿ ಬಳಿ ಎಳನೀರು ವ್ಯಾಪಾರ ಮಾಡಿಕೊಂಡಿದ್ದ ನಾಗರಾಜು ಏ.5ರಂದು ಮಧ್ಯಾಹ್ನ ಮಹಿಳೆ ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಮನೆಗೆ ನುಗ್ಗಿ ಚಾಕು ತೋರಿಸಿ ಬೆದರಿಸಿ ಅತ್ಯಾಚಾರ ಎಸಗಿದ್ದಾನೆ. ಬಳಿಕ ಈ ವಿಷಯ ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ. ಬಳಿಕ ಮಹಿಳೆ ತನ್ನ ಪತಿಗೆ ನಡೆದ ವಿಷಯ ತಿಳಿಸಿದ್ದು, ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಆರೋಪಿ ನಾಗರಾಜುನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ ವಾಸು ನಿಧನ



ಚಾಮರಾಜನಗರ: ನಗರದ ಸೋಮವಾರಪೇಟೆಯ ವಾಟಾಳ್ ಬಡಾವಣೆ ನಿವಾಸಿ ಕಾರ್ ವಾಸು (70) ಸೋಮವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಪುತ್ರನನ್ನು ಅಗಲಿದ್ದಾರೆ. ನಗರದ ಶಂಕರ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನಡೆಯಲಿದೆ.

ಬಿಜೆಪಿಗೆ ಜಿಲ್ಲಾ ವಿಶ್ವಕರ್ಮ ಸಾಮಾಜಿಕ ನ್ಯಾಯ ಸಮನ್ವಯ ಸಮಿತಿ ಬೆಂಬಲ

ಮೈಸೂರು, ಏ.15(ಜಿಎ)–ಮೈಸೂರು ಜಿಲ್ಲಾ ವಿಶ್ವಕರ್ಮ ಸಾಮಾಜಿಕ ನ್ಯಾಯ ಸಮನ್ವಯ ಸಮಿತಿ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಗಳಾದ ಯದುವೀರ್ ಮತ್ತು ಬಾಲರಾಜು ಅವರನ್ನು ಬೆಂಬಲಿಸಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಮಿತಿ ಉಪಾಧ್ಯಕ್ಷ ಹುಯಿಲಾಳು ಕುಮಾರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಪಿಎಂ ವಿಶ್ವಕರ್ಮ ಯೋಜನೆಯನ್ನು ಜಾರಿಗೆ ತಂದು ವಿಶ್ವಕರ್ಮರ ಬಗ್ಗೆ ಒಂದು ಗಂಟೆಗೂ ಹೆಚ್ಚಿನ ಕಾಲ ಸಮಾಜದ ಕುರಿತು ಲೋಕಸಭೆಯಲ್ಲಿ ಮಾತನಾಡಿದ ಏಕೈಕ ಪ್ರಧಾನಿಯಾಗಿದ್ದಾರೆ. ಈ ದೇಶದ ಭದ್ರತೆ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಬಿಜೆಪಿ ಹಾಗೂ ಮೈತ್ರಿ ಅಭ್ಯರ್ಥಿಗಳನ್ನು ಬೆಂಬಲಿಸುವ ಮೂಲಕ ವಿಶ್ವಕರ್ಮ ಸಮಾಜದ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಪಕ್ಷಾತೀತವಾಗಿ ಮತ ಹಾಕುವಂತೆ ಮನವಿ ಮಾಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.04.2024 ಮಂಗಳವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024 ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** 15ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ವಿದ್ಯಾ ಷೋಡಶ ದುರ್ಗಾ ಹೋಮ, ಶ್ರೀ ವನ ದುರ್ಗಾ, ಶ್ರೀಶೂಲಿನಿದುರ್ಗಾ, ಶ್ರೀಜಾತವೇದದುರ್ಗಾ, ಶ್ರೀ ಶಾಂತಿದುರ್ಗಾ, ಶ್ರೀ ಶಬರಿ ದುರ್ಗಾ, ಶ್ರೀ ಜ್ವಲದುರ್ಗಾ, ಶ್ರೀ ಲವಣ ದುರ್ಗಾ, ಶ್ರೀ ದೀಪಾ ದುರ್ಗಾ, ಶ್ರೀ ಆಸುರೀ ದುರ್ಗಾ, ಶ್ರೀ ಅಷ್ಟಾಕ್ಷರಿದುರ್ಗಾ, ಶ್ರೀ ಜಯದುರ್ಗಾ, ಶ್ರೀ ಶೀತಲದುರ್ಗಾ, ಶ್ರೀ ಪಕ್ಷಿದುರ್ಗಾ, ಶ್ರೀ ಮಹಿಷ ಮರ್ದಿನಿ ದುರ್ಗಾ, ಶ್ರೀ ಭ್ರಮರ ದುರ್ಗಾ, ಶ್ರೀ ದೃಷ್ಟಿದುರ್ಗಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಚತುಃಷಷ್ಠಿ ಯೋಗಿನಿ ಮತ್ತು ದಿಕ್ಪಾಲಕ, ಕ್ಷೇತ್ರಪಾಲ ಬಲಿಹರಣ, ಸ್ಥಳ: ತ್ರಯೀನ್ಯಾಸ್ ಆವರಣ, ಜಯಲಕ್ಷ್ಮೀಪುಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ:** ವಿಶ್ವ ಧ್ವನಿ ದಿನ ಆಚರಣೆ, ಸ್ಥಳ: ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ.

■ **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್:** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್.ಸರ್ಕಲ್, ದೇವರಾಜ ಅರಸು ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ:** ಶ್ರೀ ಅರಸಿಕುಮಾರ್ ಅವರ ವಿಶಿಷ್ಟ 3ಡಿ ಛಾಯಾಚಿತ್ರಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11 ಗಂಟೆಗೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್.ರಾಮನಾಥ್, ನಿರ್ದೇಶನ: ಹ್ಯೆಸ್ನಾಂ ತೋಂಬಾ, ಸ್ಥಳ: ಭೂಮಿ ಗೀತ ರಂಗಮಂದಿರ, ಬೆಳಗ್ಗೆ 11.30ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ರಾಮನವಮಿ ಕಾರ್ಯಕ್ರಮಗಳು, ಬೆಳಗ್ಗೆ 9.30 ರಿಂದ ಅಭಿಷೇಕ, ಅರ್ಚನೆ, ಪೂಜಾ ಕಾರ್ಯಕ್ರಮಗಳು, ಬೆಳಗ್ಗೆ 11.30ಕ್ಕೆ ಮಹಾಮಂಗಳಾರತಿ, ಸಂಜೆ 5ರಿಂದ ವಿದ್ವಾನ್ ರಾಕೇಶ್ ಸುಧೀರ್ ಅವರಿಂದ ಕೊಳಲು ವಾದನ, ಸಹಕಾರ : ಚಂದ್ರ ಆರ್. ತವಿಲ್, ಸ್ಥಳ: ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ಐದನೆಯ ರಾಮೋತ್ಸವ ಕಾರ್ಯಕ್ರಮ, ಸ್ವರರಾಗಾಲಯ ತಂಡದಿಂದ ಭಜನೆ, ವಿದುಷಿ ಕು. ಕೀರ್ತನ ಅವರಿಂದ ಶಾಸ್ತ್ರೀಯ ಸಂಗೀತ ಕಛೇರಿ, ವಿದ್ವಾನ್ ಎಂ.ಡಿ. ಅರ್ಜುನ್–ಪಿಟೀಲು, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ಸ್ಥಳ: ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಗೆ

■ **ಶ್ರೀ ರಾಮ ಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ :** 30ನೇ ಶ್ರೀರಾಮನವಮಿ ಸಂಗೀತೋತ್ಸವ–2024, ಸಂಜೆ 5.15 ರಿಂದ ಪ್ರಜ್ಞ ಮತ್ತು ಶ್ರೇಯ–ಅಮೃತವರ್ಷಿಣಿ–ಯಶಸ್ ಅವರಿಂದ ದ್ವಂದ್ವ ಗಾಯನ, ಸಂಜೆ 6.15ಕ್ಕೆ ವಿದುಷಿ ಸಂಜನಾ ಕೌಶಿಕ್ ಅವರಿಂದ ಹಿಂದೂಸ್ಥಾನಿ ಗಾಯನ, ಪಂಡಿತ್ ಭೀಮಾ ಶಂಕರ್ ಬಿದನೂರು–ಹಾರ್ಮೋನಿಯಂ, ಪಂಡಿತ್ ವೀರಭದ್ರಯ್ಯ ಹಿರೇಮಠ್–ತಬಲ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ, ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಡಾ.ರಶ್ಮಿ ಆದೀಶ್ ಮತ್ತು ತಂಡದಿಂದ ಸಮೂಹ ಗಾಯನ, ಸ್ಥಳ: ಸಮಾಜದ ಆವರಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ವಿನೋದಾ ರವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಪ್ರಸ್ತುತಿ–ಡಾ.ವಿನೋದಾ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀಧರ್ ಹೆಗಡೆ ಭದ್ರನ್, 6.50 ರೈತರಿಗೆ ಸಲಹೆ, 7.15 ಚುನಾವಣಾ ಪರ್ವ–ದೇಶದ ಗರ್ವ 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ವಿಶೇಷ ಸರಣಿ–part-2 ವಿಷಯ–ಚುನಾವಣಾ ನೀತಿ ಸಂಹಿತೆ. ಭಾಗವಹಿಸುತ್ತಾರೆ–ರಾಜ್ಯ ಅಪರ ಮುಖ್ಯ ಚುನಾವಣಾ ಅಧಿಕಾರಿ ವೆಂಕಟೇಶ್‌ಕುಮಾರ್ ಇವರೊಂದಿಗೆ ಅನುಪಮಾ, 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ–ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಚಿತ್ರಗೀತೆ, 10.00 ಶಾಸ್ತ್ರೀಯ ಸಂಗೀತ–ಡಾ.ಎಸ್.ರಾಜನ್–ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ ಮಧ್ಯಾಹ್ನ: 12.10 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 1.20 ಭಾವಗೀತೆಗಳು, 2.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 4.30 ಕಥಾ ಕಾಲಕ್ಷೇಪ–ಶ್ರೀರಾಮ ಪಟ್ಟಾಭಿಷೇಕ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನಿಲಿ ಸರಣಿ–ಹಿಪ್ಪುನೇರಳೆ ಬೇಸಾಯದಲ್ಲಿ ಟ್ರೆಂಚಿಂಗ್ ಮಲ್ಚಿಂಗ್ ಅಳವಡಿಕೆ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಸಿ.ಎಂ. ಬಾಬು ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 9.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಷ್ಟ್ರಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ (DLC 5, 8 & 12), 10.10 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ–ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ–ಮಾರ್ಕಂಡೇಯ ಅವಧಾನಿ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು



ಹಳೆ ಮೈಸೂರು ಭಾಗದ ಜನರ ಒಡನಾಡಿಯಾಗಿರುವ
"ಮೈಸೂರು ಮಿತ್ರ" ನಿಗೆ
45ನೇ ವಾರ್ಷಿಕೋತ್ಸವದ
ಶುಭಾಶಯಗಳು
ಮೈಸೂರು ಮಿತ್ರ
45
ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕರಾದ
ಡಾ. ಕೆ.ಬಿ.ಗಣಪತಿ
ಅವರ ಕುಟುಂಬಕ್ಕೆ ಈ ಸುಸಂದರ್ಭದಲ್ಲಿ ನಮ್ಮ ಹೃತ್ಪೂರ್ವಕ ಅಭಿನಂದನೆಗಳು
ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ
ನಿಕಟಪೂರ್ವ ಅಧ್ಯಕ್ಷರು, ರಾಜ್ಯ ಸಹಕಾರ ಪತ್ತಿನ ಮಹಾಮಂಡಳ
ಮಾಜಿ ಸದಸ್ಯರು, ಜಿಲ್ಲಾ ಪಂಚಾಯತ್, ಮೈಸೂರು
" ಪ್ರಜಾಪ್ರಭುತ್ವದಲ್ಲಿ
ಪ್ರಜೆಗಳೇ ಪ್ರಭುಗಳು,
ಇದು ತಪ್ಪದೇ ನ್ಯಾಯಪರವಾಗಿ
ಮತದಾನ ಮಾಡಿದಾಗ
ಮಾತ್ರ "
ಜಿ.ಡಿ.ಹರೀಶ್‌ಗೌಡ
ಶಾಸಕರು, ಹುಣಸೂರು ವಿಧಾನಸಭಾ ಕ್ಷೇತ್ರ
ಉಪಾಧ್ಯಕ್ಷರು, ರಾಜ್ಯ ಅಪೆಕ್ಸ್ ಬ್ಯಾಂಕ್
ಮತ್ತು ಜೆಡಿಎಸ್ ಯುವ ನಾಯಕ
ಜಿ.ಟಿ.ದೇವೇಗೌಡ
ಮಾಜಿ ಸಚಿವರು ಹಾಗೂ ಹಾಲಿ ಶಾಸಕರು
ಚಾಮುಂಡೇಶ್ವರಿ ಕ್ಷೇತ್ರ
ಅಧ್ಯಕ್ಷರು, ಸಹಕಾರ ಮಹಾಮಂಡಲ
ಅಧ್ಯಕ್ಷರು, ಜೆಡಿಎಸ್ ಕೋರ್ ಕಮಿಟಿ

ಮೈಸೂರು ಮಿತ್ರ
ಸ್ಥಾಪನೆ: 1980
45
ಅತ್ಯುತ್ತಮ ಪತ್ರಿಕೋದ್ಯಮ

ಮೈಸೂರು ಮಿತ್ರ
ವಾರ್ಷಿಕ ವಿಶೇಷಾಂಕ 2024

16-4-2024
ಮಂಗಳವಾರ





ಮತದಾರ
ಪ್ರಜಾಪ್ರಭುತ್ವದ ಸೂತ್ರಧಾರ...!



“ಅತ್ಯಂತ ಜನಪ್ರಿಯ ಆಧುನಿಕ ಸರ್ಕಾರ ಪದ್ಧತಿಗಳಲ್ಲಿ ಪ್ರಜಾಪ್ರಭುತ್ವಕ್ಕೆ ಮೇರು ಸ್ಥಾನವಿದೆ. ಅದರಲ್ಲೂ ಭಾರತ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ. ನ್ಯೂನತೆಗಳ ಹೊರತಾಗಿಯೂ ಸ್ವಾತಂತ್ರ್ಯ ನಂತರ ಯಶಸ್ವಿಯಾಗಿ ನಿರ್ವಹಣೆಯಾಗುತ್ತಾ ಬಂದಿದೆ. ಅದಕ್ಕೆ ದೇಶದ ಜನತೆಗೆ ಅದರ ಮೇಲಿರುವ ನಂಬಿಕೆಯೇ ಮೂಲ ಕಾರಣ. ಇಂತಹ ಸರ್ಕಾರ ಪದ್ಧತಿಯ ಸೂತ್ರಧಾರ ಮತದಾರ. ಕಾಲಕಾಲಕ್ಕೆ ಎಚ್ಚೆತ್ತು, ಸುಧಾರಣೆಗೆ ಮುಂದಾದರೆ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಿರ್ವಹಣೆ ಆಗುವುದರಲ್ಲಿ ಅನುಮಾನವೇ ಇಲ್ಲ. ಈ ನಿಟ್ಟಿನಲ್ಲಿ ಸಮಾಜದ ಗಣ್ಯರು, ಜ್ಞಾನಿಗಳು, ವಿಚಾರವಂತರು, ಧಾರ್ಮಿಕ ಮುಖಂಡರು ಲೋಕಸಭಾ ಚುನಾವಣೆ-2024ರ ಸಂದರ್ಭದಲ್ಲಿ ಮತದಾನದ ಮಹತ್ವ ಹಾಗೂ ಯಶಸ್ವಿ ಪ್ರಜಾಪ್ರಭುತ್ವ ಆಚರಣೆ ಸಂಬಂಧ ಸಂದೇಶಗಳನ್ನು ನೀಡಿದ್ದಾರೆ.

ಆಮಿಷಕ್ಕೆ ಮತದಾರ ಬಲಿಯಾಗಬಾರದು



ಮತದಾನ ಪ್ರತಿಯೊಬ್ಬರ ಪವಿತ್ರವಾದ ಹಕ್ಕು. ಅದನ್ನು ಕಲುಷಿತಗೊಳಿಸಬಾರದು. ಜಾತಿ ವ್ಯಾಮೋಹ, ಹಣ ಮುಂತಾದ ಯಾವುದೇ ಆಮಿಷಕ್ಕೂ ಬಲಿಯಾಗಬಾರದು. ನಮ್ಮ ದೇಶ ಜಗತ್ತಿನಲ್ಲೇ ಎರಡನೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. 1947ರಲ್ಲಿ ಸ್ವಾತಂತ್ರ್ಯ ಬಂದಿದೆ. 1950 ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರು ರೂಪಿಸಿದ ಸಂವಿಧಾನ ಜಾರಿಯಾಗಿದೆ. ಅಲ್ಲಿ ಪೌರರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ವಿವರವಾಗಿ ಉಲ್ಲೇಖಿಸಲಾಗಿದೆ. ಮತದಾನ ಎಂಬುದು ಪ್ರತಿಯೊಬ್ಬ ನಾಗರಿಕನ ಹಕ್ಕು ಮತ್ತು ಕರ್ತವ್ಯ. 18 ವರ್ಷ ತುಂಬಿದ ಎಲ್ಲರಿಗೂ ಮತದಾನ ಮಾಡುವ ಅವಕಾಶವಿರುತ್ತದೆ. ಮತದಾನ ಎಂದರೆ ಅಭಿಪ್ರಾಯ ದಾಖಲಿಸುವುದು. ಆ ಮೂಲಕ ಯಾವ ವ್ಯಕ್ತಿ ಮತ್ತು ಯಾವ ಪಕ್ಷ ಮುಂದಿನ ಐದು ವರ್ಷಗಳ ಕಾಲ ದೇಶವನ್ನು ಮುನ್ನಡೆಸಬೇಕೆಂಬುದನ್ನು ನಿರ್ಧರಿಸುವುದು. ಯೋಗ್ಯ ಅಭ್ಯರ್ಥಿಗಳನ್ನು ಆರಿಸಿದರೆ ಪ್ರಜಾಪ್ರಭುತ್ವಕ್ಕೆ ಹೆಚ್ಚು ಅರ್ಥ ಬರುತ್ತದೆ. ಮತದಾನದ ದಿನದಂದು ಪ್ರತಿಯೊಬ್ಬರು ಸಂವಿಧಾನದತ್ತವಾಗಿ ಲಭಿಸಿರುವ ಈ ಆಯ್ಕೆಯ ಸ್ವಾತಂತ್ರ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇದೊಂದು ಪವಿತ್ರ ದೇಶ ಸೇವೆ ಎಂದು ತಿಳಿದು ತಪ್ಪದೆ ಪ್ರತಿಯೊಬ್ಬರು ಮತದಾನ ಮಾಡಬೇಕು.

–ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠ, ಮೈಸೂರು.

ನಮ್ಮ ಹಕ್ಕು ಚಲಾಯಿಸುವ ಸಮಯ ಮತ್ತೆ ಬಂದಿದೆ...



ಚುನಾವಣೆಯಲ್ಲಿ ಮತದಾನ ಮಾಡುವ ಮೂಲಕ ನಮ್ಮ ಪೌರ ಹಕ್ಕು ಚಲಾಯಿಸುವ ಸಮಯ ಈಗ ಬಂದಿದ್ದು, ಈ ಸಮಯ ಬಳಸಿಕೊಳ್ಳಿ. ಕಡ್ಡಾಯವಾಗಿ ಮತದಾನ ಮಾಡಿ. ನಮ್ಮ ಜವಾಬ್ದಾರಿ ನಿರ್ವಹಿಸಿದಾಗ ಮಾತ್ರ ನಮ್ಮ ಪೌರ ಹಕ್ಕಿಗೆ ಮಹತ್ವ ಬರುತ್ತದೆ. ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ನಮ್ಮ ಭರತ ಭೂಮಿಯನ್ನು ಒಳ್ಳೆಯ ದಾರಿಗೆ ಕೊಂಡೊಯ್ಯಲು ನಾವು ಕಾರಣಕರ್ತರಾಗಬೇಕು. ವಯಸ್ಸಾದವರು ಮನೆಯಲ್ಲೇ ಮತದಾನ ಮಾಡಲು ಚುನಾವಣಾ ಆಯೋಗ ಅವಕಾಶ ಕಲ್ಪಿಸಿದೆ. ಜೊತೆಗೆ ಮತದಾನ ಮಾಡಲು ಯಾರೂ ದೂರ ಹೋಗಬೇಕಿಲ್ಲ. ನಿಮ್ಮ ಸನಿಹದಲ್ಲೆ ಮತಗಟ್ಟೆಗಳಿರುತ್ತವೆ. ಅಲ್ಲಿ ಹೋಗಿ ಕಡ್ಡಾಯವಾಗಿ ಮತದಾನ ಮಾಡಿ. ನಾನು ಎಲ್ಲೆ ಇದ್ದರೂ ಮತದಾನದ ಸಮಯಕ್ಕೆ ಬಂದು ಕಡ್ಡಾಯವಾಗಿ ಮತ ಚಲಾಯಿಸುತ್ತೇನೆ. ನನ್ನಂತೆ ನೀವು ಕೂಡ ಕಡ್ಡಾಯವಾಗಿ ಮತದಾನ ಮಾಡಿ.

–ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ

ಮತ ಮಾರಿಕೊಂಡರೆ ಮಕ್ಕಳ ಮಾರಿಕೊಂಡಂತೆ...!



ಚುನಾವಣೆಯಲ್ಲಿ ಯಾರೂ ಕೂಡ ಆಸೆ-ಆಮಿಷಗಳಿಗೆ ಒಳಗಾಗಬಾರದು. ಮತಗಳನ್ನು ಮಾರಿಕೊಂಡರೆ ಮಕ್ಕಳನ್ನು ಮಾರಿಕೊಂಡಂತೆ. ಮತದಾರರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಮತದಾನ ದೇಶದ ಸಾಮಾಜಿಕತೆ, ಅಖಂಡತೆಯ ಹಿತಾಸಕ್ತಿ ಕಾಪಾಡುವ ಪ್ರಮುಖ ಅಸ್ತ್ರವಾಗಿದೆ. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಪ್ರಜಾಸತಾತ್ಮಕ ಸರ್ಕಾರ ರಚನೆ ಆಗುವುದು ಮತದಾನದಿಂದ. ಆದ ಕಾರಣ ಮತದಾರರು ತಮ್ಮ ಮತದ ಮೌಲ್ಯ ಕಾಪಾಡಿಕೊಳ್ಳಬೇಕು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಅತ್ಯಂತ ಶ್ರೇಷ್ಠ ಘನತೆಯ ವ್ಯವಸ್ಥೆ ರೂಪುಗೊಳ್ಳುವುದು ಮತದಾರ ಮಾಡುವ ಮತದಾನದಿಂದ. ದೇಶ ಬದಲಾಗುವುದು, ದೇಶದ ವ್ಯವಸ್ಥೆ ಬದಲಾಗುವುದು ಮತದಾನದಿಂದ. ಈ ಮೂಲಕ ಮತದಾನ ಪ್ರಜಾಪ್ರಭುತ್ವದ ಶಕ್ತಿಯುತ ಅಸ್ತ್ರ. ಆದ ಕಾರಣ ಯಾರೂ ಕೂಡ ಆಸೆ ಆಮಿಷಗಳಿಗೆ ಒಳಗಾಗಿ ಮತ ಮಾರಿಕೊಳ್ಳಬಾರದು. ಮತ ಮಾರಿಕೊಂಡರೆ ಮಕ್ಕಳನ್ನು ಮಾರಿಕೊಂಡಂತೆ. ದೇಶದ ಭದ್ರ ಬುನಾದಿ ರೂಪಿಸುವ ಶಕ್ತಿಶಾಲಿ ಅಸ್ತ್ರ ಈ ಮತದಾನ. ಭಾರತೀಯರಾದ ನಾವು ಪ್ರಜಾಸತ್ತಾತ್ಮಕ ಗಣತಂತ್ರ ವ್ಯವಸ್ಥೆ ಒಪ್ಪಿಕೊಂಡು ಮತದಾನ ಮಾಡಬೇಕು. ಮತದಾರ ಭ್ರಷ್ಟನಾದರೆ ದೇಶದ ಇಡೀ ವ್ಯವಸ್ಥೆ ಭ್ರಷ್ಟವಾಗುತ್ತದೆ. ಆದ ಕಾರಣ ಮತ ಮಾರಿಕೊಳ್ಳದೆ ಕಡ್ಡಾಯವಾಗಿ ಮತದಾನ ಮಾಡಬೇಕು. ಭಾರತೀಯರಾದ ನಾವು ಸ್ವಾಭಿಮಾನ, ಘನತೆಯ ಬದುಕು ರೂಪಿಸಿಕೊಳ್ಳಲು ಮತದಾನ ಮಾಡಬೇಕು. ಮತದ ಮೌಲ್ಯ ಭಾರತ ದೇಶದ ಸರ್ವ ಸಮಸ್ಯೆಗೂ ಉತ್ತರವಾಗಿದೆ. ಈ ಹಿನ್ನೆಲೆ ತಪ್ಪದೆ ಮತದಾನ ಮಾಡಬೇಕು ಎಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಕೂಡ ಹೇಳಿದ್ದಾರೆ. ಮತದಾನ ಸಂವಿಧಾನ ಕೊಟ್ಟಿರುವ ಶ್ರೇಷ್ಠ ಹಕ್ಕು. ಯಾವುದೇ ಕಾರಣಕ್ಕೂ ಜಾತಿ, ಧರ್ಮ, ವರ್ಣ, ವರ್ಗ ಮತದಾನದಲ್ಲಿ ನುಸುಳಬಾರದು. ಧರ್ಮ ನಿರಪೇಕ್ಷತೆಯಿಂದ ಜಾತ್ಯಾತೀತ, ತತ್ವ ಗೌರವಿಸುವ ಪ್ರತಿಯೊಬ್ಬ ಪ್ರಜೆ ದೇಶದ ಉಜ್ವಲ ಭವಿಷ್ಯಕ್ಕಾಗಿ ಕಡ್ಡಾಯವಾಗಿ ಮತದಾನ ಮಾಡಬೇಕು.

–ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗ ಪೆದ್ದಿ ಮಠ, ಮೈಸೂರು

■10ನೇ ಪುಟಕ್ಕೆ

ಗ್ರಸ್ತೆ



ಪ್ರಥಮ ಬಹುಮಾನ



ಬಿ.ಕೆ.ಮೀನಾಕ್ಷಿ
#1580, 'ಶ್ರೀ ನರಸಿಂಹ'
8ನೇ ಕ್ರಾಸ್, ಶಾರದಾದೇವಿನಗರ,
ಮೈಸೂರು–570022
ಮೊ. 9844227225

ಕಣ್ಣಿಗೆ ಕಾಡಿಗೆ ತೀಡಿಕೊಂಡ ಪವಿಗೆ, ಇನ್ನು ಮುಂದೆ ಹಚ್ಚ ಬಾರದೆನಿಸಿತು. ಕಾಡಿಗೆ ತೀಡಿಕೊಂಡು, ಪೌಡರ್ ಮೆತ್ತಿಕೊಂಡು, ಮೈತುಂಬ ಒಡವೆಗಳನ್ನು ಹೇರಿಕೊಂಡು ಏನಾಗ ಬೇಕಿದೆ? ತಲೆಗೆ ಇನ್ನುಮುಂದೆ ಬಣ್ಣವನ್ನೂ ಹಚ್ಚಬಾರದು. ತಾನು ಹೇಗಿದ್ದೇನೋ ಹಾಗೇ ಕಾಣಿಸಬೇಕು. ಇವರೂ ಈಗೀಗ ತನ್ನನ್ನು ಹೆಚ್ಚಾಗೇನೂ ಗಮನಿಸುವುದಿಲ್ಲ. ಸುಮ್ಮನೆ ಕುಳಿತಲ್ಲೇ ಕುಳಿತಿರುತ್ತಾರೆ. ಕೇಳಿದ್ದಕ್ಕೆ ಉಡಾಫೆಯಿಂದ ಉತ್ತರ ಕೊಡುತ್ತಾರೆ. ಮನೆಯಲ್ಲಿ ಹೆಂಡತಿಯೆಂಬುವವಳೊಬ್ಬಳಿದ್ದಾಳೆಂಬ ಪರಿಜ್ಞಾನವೇ ಅವರಿಗಿದ್ದಂತಿಲ್ಲ. ಒಂದೊಂದು ಸಲ ಸಿಟ್ಟು ಬರುತ್ತದೆ. ಇನ್ನೂ ಕೆಲವೊಮ್ಮೆ ಅವರು ಹಾಗೇ ಇರಲಿ, ಸದ್ಯ ತನ್ನ ತಂಟೆಗೆ ಬರುವುದೇ ಬೇಡ ಅನಿಸಿ ತಾನೂ ದೂರ ಉಳಿಯುತ್ತೇನೆ. ಏನೇನು ಮಾಡಬಾರದೆಂದುಕೊಂಡಿದ್ದಳೋ, ಆ ಅಲಂಕಾರಗಳನ್ನೆಲ್ಲ ತನಗರಿವಿಲ್ಲದೆ ಮಾಡಿಕೊಂಡು, ಕನ್ನಡಿಯಲ್ಲಿ ನೋಡಿಕೊಂಡು ತಾನೇ ಮೆಚ್ಚುತ್ತಾ ಕೆಲಸಕ್ಕೆ ನಡೆದಳು.

'ರೀ, ನಾನು ಬರುತ್ತೇನೆ. ಹುಷಾರು. ನೀವೂ ತಿಂಡಿ ತಿಂದು ಹೊರಡಿ. ಗ್ಯಾಸ್, ಲೈಟುಗಳನ್ನೆಲ್ಲ ಸರಿಯಾಗಿ ನೋಡಿಕೊಂಡು ಹೋಗಿ. ಕಿಟಕಿಗಳನ್ನು ಮುಚ್ಚಿಬಿಡಿ, ಹಾಳು ಬೆಕ್ಕುಗಳ ಸಹವಾಸ. ಹೇಗಾದರಾಗಲಿ, ಹಾಲನ್ನು ಫ್ರಿಡ್ಜ್‌ನಲ್ಲಿ ಇಟ್ಟುಬಿಡಿ.' ರಘು ಸೋಫಾ ಮೇಲೆ ಸುಮ್ಮನೆ ಚಕ್ಕಲಬಕ್ಕಲಾಗಿ ಕುಳಿತಿದ್ದ. ಎರಡು ನಿಮಿಷ ನಿಂತ ಪವಿ, ಯಾವೊಂದೂ ಉತ್ತರ ದೊರೆಯದೆ ಮುಂಬಾಗಿಲು ಎಳೆದುಕೊಂಡು ಹೊರಟುಹೋದಳು.

ಸಂಜೆ ಬಸ್ಸಿಳಿದು ಬಸವಳಿದು ಮನೆಗೆ ಬಂದ ಪವಿಗೆ, ಬಾಗಿಲು ತಳ್ಳಿಕೊಂಡು ಒಳಗೆ ಹೆಜ್ಜೆಯಿಡುತ್ತಿದ್ದಂತೆ ದಿಗ್ಭ್ರಾಂತಿ ಆವರಿಸಿತು. ಮನೆಯ ಸಾಮಾನು ಗಳು, ದಿನಪತ್ರಿಕೆ ಚೆಲ್ಲಾಪಿಲ್ಲಿಯಾಗಿವೆ. ಟಿ.ವಿ. ಆನ್ ಆಗಿದೆ. ಎಂಜಲುತಟ್ಟೆ ದೇವರ ಕೋಣೆಯ ಮುಂದಿದೆ. ಹಣ್ಣುಗಳನ್ನು ಬೇಕಾಬಿಟ್ಟಿ ತಿಂದು ಸುಲಿದ ಸಿಪ್ಪೆ ಎಲ್ಲೆಂದರಲ್ಲಿ ಬಿಸಾಡಿದ್ದಾನೆ. ಪವಿತ್ರಳಿಗೆ ಮೈ ಉರಿದು ಸ್ವಲ್ಪವಾದರು ಪ್ರಜ್ಞೆ ಬೇಡವೇ? ಎಂಥ ಮನುಷ್ಯ! ಎಂದುಕೊಳ್ಳುತ್ತಿದ್ದಂತೆ ತನ್ನ ಅಸಹಾಯಕತೆಗಾಗಿ ಕಣ್ಣಿಂದ ಹನಿಗಳು ಹಾಗೇ ಉದುರಿದವು. ಹೆಂಡತಿ ಬಂದದ್ದು ಗಮನವೇ ಇಲ್ಲದಂತೆ ಮೂಲೆಯಲ್ಲಿದ್ದ ಸ್ಟೂಲಿನ ಮೇಲೆ ರಘು ಕುಳಿತಿದ್ದನು. ಯಾಕೋ ಪವಿತ್ರಳಿಗೆ ಇದ್ದಕ್ಕಿದ್ದಂತೆ ಅನುಮಾನ ಶುರುವಾಯಿತು. ಆ ಅನುಮಾನದ ಎಳೆಯನ್ನು ಹೊತ್ತುಕೊಂಡೇ ಕೈಕಾಲು ಮುಖ ತೊಳೆದುಕೊಂಡು ಬಂದಳು. ನಿಧಾನವಾಗಿ ಎಲ್ಲವನ್ನೂ ಓರಣ ಮಾಡತೊಡಗಿದಳು. ಎಂಜಲು ತಟ್ಟೆಗೆ ಇರುವೆಗಳು ಸಾಲುಗಟ್ಟಿದ್ದವು. ಸಿಂಕ್‌ಗೆ ತಟ್ಟೆ ಹಾಕಿ ಕೈ ತೊಳೆದು ಸ್ಟೋವ್ ಹತ್ತಿರ ಹೋದರೆ, ಅನ್ನ, ಸಾರಿನ ಪಾತ್ರೆಗಳ ಮುಚ್ಚಳಗಳು ತೆರೆದಂತೆಯೇ ಇವೆ. ಪಲ್ಯ ಚೂರೂ ಇಲ್ಲದಂತೆ ಖಾಲಿಯಾಗಿದೆ. ಅಡುಗೆಮನೆಯನ್ನೂ ಸ್ವಚ್ಛಗೊಳಿಸಿ ಕಾಫಿ ಮಾಡಿಕೊಂಡು ಗಂಡನಿಗೊಂದು ಕಪ್ಪು ಕೊಟ್ಟು ತಾನೂ ಸೋಫಾ ಮೇಲೆ ಕುಳಿತಳು.

ಇವರು ಮೊದಲು ಹೀಗಿರಲಿಲ್ಲ ಅಲ್ಲವೇ? ಪವಿತ್ರ ಗತಕ್ಕೆ ಜಾರಿದಳು. 'ಪವಿ, ನೀನೇನೂ ಮಾಡಬೇಡ, ನಿಂದು ಅಡುಗೆಮನೆ ಕೆಲಸವಾಯ್ತು ತಾನೇ? ಇನ್ನು ರೆಡಿಯಾಗು.' ಎನ್ನುತ್ತಾ ಮನೆಯನ್ನು ಕನ್ನಡಿಯಂತಿಡುತ್ತಿದ್ದನು. ಪವಿ ಒಳಗೇ ಉಬ್ಬಿ ಹೋಗುತ್ತಿದ್ದಳು. ಇಂಥ ಗಂಡ ಇನ್ಯಾರಿಗೂ ಇಲ್ಲವೇ ಇಲ್ಲ ಎಂದು ಬೀಗುತ್ತಿದ್ದಳು. ಪವಿ ಬಂದಾಗ ನಗುನಗುತ್ತಾ, ಬಿಡುವಿಲ್ಲದಂತೆ ಮಾತಾಡುತ್ತಾ ಕಾಫಿಯನ್ನು ತಂದು ಕೈಗಿಡುತ್ತಿದ್ದ ರಘು ಎಲ್ಲಿ? ಈ ರಘು ಎಲ್ಲಿ? ಅವಳ ಅನುಮಾನಕ್ಕೆ ಅವಳೇ ಒಮ್ಮೆ ನಡುಗಿದಳು.

ರಾತ್ರಿ, ಅಡುಗೆಮನೆ ಕೆಲಸ ಮುಗಿಸಿ ರಘುವಿಗೂ ಊಟಕ್ಕೆ ಬಡಿಸಿ, ಅವನು ಮಲಗಿದ ಮೇಲೆ ಇವಳೂ ಹೋಗಿ ಪಕ್ಕದಲ್ಲೇ ಉರುಳಿಕೊಂಡಳು. ಅವನು ತುದಿಗೆ ಮುದುರಿಕೊಂಡ. 'ರೀ, ನಿಮ್ಮತ್ರ ನಾನು ಏನೋ ಮಾತಾಡ್ಬೇಕಿತ್ತು..' ನಿರುತ್ತರ. ಇವಳೇ ಮುಂದುವರಿದು, 'ಮಕ್ಕಳಾಗಲಿಲ್ಲ ಅಂತ ಬೇಜಾರೇನ್ರೀ ನಿಮಗೆ? ಒಂದು ಮಗುವನ್ನು ದತ್ತು ತಗೋಳೋಣ ಅಂತ ನಾನೆಷ್ಟು ಹೇಳಲಿಲ್ವಾ? ಈಗಲೂ ಕಾಲ ಮಿಂಚಿಲ್ಲ. ಮಕ್ಕಳನ್ನು ನೋಡಿಕೊಂಡು ಬರೋಣವಾ?' ಅವನ ಉಸಿರಾಟವೂ ಅವಳಿಗೆ ಕೇಳಿಸುತ್ತಿಲ್ಲ.

> ❝ ಒಂದು ರಾತ್ರಿ ಪವಿತ್ರ ಇದ್ದಕ್ಕಿದ್ದಂತೆ ಎದ್ದು ಕುಳಿತಳು. ಈ ಪುರುಷಿ ಯಾರೋ, ಎಲ್ಲಿಂದಲೋ ಬಂದವನು! ತನಗೆ ಇಷ್ಟು ಸಹಾಯ ಮಾಡಲೇಬೇಕಾದ್ದೇನಿತ್ತು? ಪವಿತ್ರ ತನ್ನ ಕಷ್ಟಕಾಲದಲ್ಲೊದಗಿದ ಪುರುಷೋತ್ತಮನನ್ನು ಪರಮಪುರುಷನೆಂದೇ ತಿಳಿದಳು. ಮಕ್ಕಳಿಲ್ಲ, ಮರಿಯಿಲ್ಲ ಬಂದುಹೋಗುವ ಬಂಧು–ಬಳಗವಿಲ್ಲ! ತನ್ನ ಜೊತೆಗೇ ತನ್ನ ಸಹಾಯಕ್ಕೇ ಬಂದಿರುವ ಪುರುಷಿಯ ಬಗ್ಗೆ ಒಂದು ಗಟ್ಟಿ ನಿರ್ಧಾರಕ್ಕೆ ಬಂದಳು. ತನ್ನ ಗೆಳತಿ ಶಾಂತಿಯೊಡನೆ ಕೂಡ ಈ ಮಾತನ್ನು ಚರ್ಚಿಸಿ ಅವಳು ಎಷ್ಟು ತಡೆದರೂ ತನ್ನ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸಿಯೇ ಬಿಟ್ಟಳು.

ಇದೇನು ಒಳ್ಳೆ ಕೊರಡಾಗಿದ್ದಾರಲ್ಲಾ ತನ್ನ ಪ್ರಶ್ನೆಗಳಿಗೆ? ಎಂದುಕೊಂಡವಳೇ ಅವನನ್ನು ತನ್ನೆಡೆಗೆ ತಿರುಗಿಸಿಕೊಂಡಳು. ಬೆಡ್‌ಲೈಟಿನ ಬೆಳಕಿನಲ್ಲಿ ಅವನ ಕಣ್ಣುಗಳು ಹೊಳೆಯುತ್ತಿದ್ದವು ಸೂಕ್ಷ್ಮವಾಗಿ ಗಮನಿಸಿದ ಅವಳಿಗೆ ಅವನ ಕಣ್ಣಿಂದ ನೀರು ಸುರಿಯುವುದನ್ನು ಕಂಡು ಕಂಗಾಲಾದಳು. ತಕ್ಷಣ ಎದ್ದು ಲೈಟು ಹಾಕಿ, 'ಇದೇನ್ರೀ? ಅಳುತ್ತಿದ್ದೀರಾ? ಯಾಕ್ರೀ? ಯಾರಾದ್ರೂ ಬೇಜಾರ್ ಮಾಡಿದ್ರಾ?' ರಘು ನಿರ್ಜೀವವಾಗಿ ಬಿದ್ದಿದ್ದನು. ಪವಿ ಮನಸ್ಸಿಗೆ ಪಿಚ್ಚೆನಿಸಿತು. ತನಗೆ ತಾನೇ ಸಮಾಧಾನ ಮಾಡಿಕೊಂಡು 'ಮನೆಗೆ ಯಾರಾದ್ರೂ ಬಂದಿದ್ರಾ? ಏನು ಕೇಳಿದ್ರು?' ಪವಿ, ಸಮಾಧಾನಿಸುವಂತೆ ಅವನು ಉತ್ತರ ಹೇಳಿಯೇ ತೀರಬೇಕೆಂಬಂತೆ ಕೇಳಿದಳು. ರಘು ಈಗ ಮಾತಾಡಲು ತಯಾರಿ ಮಾಡಿಕೊಂಡ. ಎದ್ದು ಕುಳಿತು, ಗಂಟಲು ಸರಿಪಡಿಸಿಕೊಂಡು ಟೀಪಾಯಿ ಮೇಲಿದ್ದ ನೀರನ್ನು ಕುಡಿದನು. ಪವಿಗೆ ಇವರೇಕೋ ವಿಚಿತ್ರವಾಗಿ ಆಡುತ್ತಿದ್ದಾರಲ್ವಾ ಅನಿಸಿದರೂ ಆತನ ಉತ್ತರಕ್ಕೆ ಕಾದಳು.

'ಇವತ್ತು ಸರಳಾ ಬಂದಿದ್ದರು. ಏನಾದ್ರೂ ಬೇಕಾ ಅಂದ್ರು. ನಾನು ಬೇಡ ಅಂದೆ.' ಮಾತಿನ ವರಸೆ ಬದಲಾಗಿದೆ. ಮೊದಲಿನ ರಘು ಹೀಗೆ ಚಿಕ್ಕಮಕ್ಕಳಂತೆ ಮಾತಾಡುತ್ತಿರಲಿಲ್ಲ. ಆರ್ಹನಾಗಿ ಉದ್ಯೋಗ ಮಾಡುತ್ತಿದ್ದ ರಘು ಬಹಳ ಖಡಕ್ ಮಾತುಗಾರ, ಅಷ್ಟೇ ಮೃದು ಸ್ವಭಾವದವನು. ತನ್ನದಲ್ಲದ ತಪ್ಪಿಗೆ ಕೆಲಸದಿಂದಲೇ ವಜಾ ಆಗಿದ್ದ ರಘು, ಅದಕ್ಕಾಗಿ ಚಿಂತಿಸಿರಲಿಲ್ಲ, ಮರುಗಿ ಮೂಲೆ ಸೇರಿರಲಿಲ್ಲ. ಬೇರೆ ಖಾಸಗಿ ಉದ್ಯೋಗ ಹುಡುಕುತ್ತಿದ್ದುದರ ಜೊತೆಗೆ ಹೆಂಡತಿಗೆ ಸಹಾಯಕನಾಗಿಯೂ ಇದ್ದ. ಇಲಾಖೆಯಿಂದಲೇ ವಜಾ ಆಗಿರುವ ರಘುವಿಗೆ ಯಾರು ತಾನೇ ಕರೆದು ಕೆಲಸ ಕೊಟ್ಟಾರು?

'ಇನ್ನೇನಂದ್ರು?' ಏನಾದರೂ ಅಂದಿರಲೇ ಬೇಕೆಂಬ ಅನುಮಾನದಲ್ಲಿ ಕೇಳಿದಳು. 'ಹ್ಞೂಂ. ಅಂದರು. ಇನ್ನೂ ಎಷ್ಟು ವರ್ಷ ಮನೇಲಿರ್ತೀಯಾ? ಎಲ್ಲಾದ್ರೂ ಕೆಲಸಕ್ಕೆ ಹೋಗು ಅಂದರು. ನೀನೊಬ್ಬಳೇ ದುಡಿದು ಮನೆ ನಿಭಾಯಿಸುತ್ತೀಯಂತೆ. ನಾನು ಸುಮ್ಮನೆ ದಂಡಪಿಂಡವಾಗಿ ತಿಂದುಕೊಂಡಿದ್ದೇನಂತೆ.' ಅವನ ಮಾತಿನಿಂದ ಪವಿಗೆ ಕರುಳಿನಲ್ಲಿ ಚೂರಿ ಅಲ್ಲಾಡಿಸಿದಂತಾಯಿತು. ಗಡಿಯಾರದ ಕಡೆಗೆ ನೋಡಿದಳು. ಆಗಲೇ ಹತ್ತು ಗಂಟೆಯ ಹತ್ತಿರ ಹತ್ತಿರವಾಗುತ್ತಿತ್ತು. ಬಾಗಿಲು ಎಳೆದುಕೊಂಡು ಎದುರುಗಡೆಯ ಸರಳಾ ಮನೆ ಮುಂದೆ ನಿಂತು, ಬಾಗಿಲನ್ನು ಜೋರಾಗಿ ಬಡಿದಳು. ಒಳಗಿನಿಂದ, 'ಯಾರೂ? ಯಾರದು? ಕಾಲಿಂಗ್ ಬೆಲ್ ಒತ್ತೋ ಸೆನ್ಸ್ ಇಲ್ವಾ?' ಎನ್ನುತ್ತಲೇ ಸರಳಾಳೆ ಬಂದು ಬಾಗಿಲು ತೆರೆದಳು. 'ಓ......ಪವೀ ಬಾಮ್ಮಾ. ಇದೇನು ಇಷ್ಟೊತ್ತಿನಲ್ಲಿ?' ಪವಿ ಸರಳಾಳ ಕೈ ಹಿಡಿದು, 'ಆಂಟಿ ನಮ್ಮನೆಯವರಿಗೆ ಒಂದು ಕೆಲಸ ಬೇಕಿತ್ತು. ಅಂಕಲ್‌ಗೆ ಹೇಳಿ ಕೊಡಿಸ್ತೀರಾ?' ಎಂದು ಸರಳಾಳ ಕೈಗಳನ್ನು ದೈನ್ಯತೆಯಿಂದ ಹಿಡಿದುಕೊಂಡಳು. ಸರಳಾಗೆ ಕಕ್ಕಾಬಿಕ್ಕಿಯಾಯಿತು. 'ಇದೇನು ತಮಾಷೆ ಮಾಡ್ತಿದ್ದೀಯಾ ಸರಳಾ? ಇದ್ದಕ್ಕಿದ್ದಂತೆ ಬಂದು ಹೀಗೆ ಕೇಳ್ತಿದ್ದೀಯಲ್ಲಾ, ನಿನಗೇನು ತಲೆ ಕೆಟ್ಟಿದೆಯೇ?' ಕೈ ಬಿಡಿಸಿಕೊಳ್ಳುತ್ತ ಬಿರುಸಾಗಿ ನುಡಿದಳು. ಪವಿತ್ರಳ ಕಣ್ಣಲ್ಲಿ ರೋಷವುಕ್ಕಿತು. 'ಮತ್ತೆ ನಮ್ಮನೆಯವರನ್ನು ದಂಡಪಿಂಡ ಅಂದಿದ್ದೀರಿ. ಕೆಲಸ ಹುಡುಕ್ಕೋ ಅಂದಿದ್ದೀರಿ. ಅಕ್ಕಪಕ್ಕ ಇದ್ದೀರಿ. ಇಷ್ಟೂ ಸಹಾಯ ಮಾಡಕ್ಕಾಗಲ್ವಾ ನಿಮಗೆ?' ಸರಳಾಳಿಗೆ ತಲೆಬುಡ ಅರ್ಥವಾಗಲಿಲ್ಲ. ಅಚ್ಚರಿಯಿಂದ ಅವಳ ಮುಖ ನೋಡಿದಳು.

'ಇನ್ನೊಮ್ಮೆ ನಮ್ಮನೆಗೆ ನಾನಿಲ್ಲದ ವೇಳೆಯಲ್ಲಿ ಬಂದು ನಮ್ಮನೆಯವರಿಗೆ ಯಾವ ಬೋಧನೆಯನ್ನೂ ಕೊಡಬೇಡಿ. ನಿಮ್ಮದೆಷ್ಟೋ ಅಷ್ಟು ನೋಡಿಕೊಳ್ಳಿ.. ನೀವು ಪಕ್ಕದ ಮನೆಯವರಷ್ಟೆ, ಮನೆಯವರಲ್ಲ. ತಿಳೀತಾ?' ಎಂದವಳೇ ಬಾಗಿಲನ್ನು ಜೋರಾಗಿ ಎಳೆದುಕೊಂಡು ಮನೆ ಸೇರಿದಳು.

ಬಾಗಿಲಲ್ಲೇ ನೋಡುತ್ತಾ ನಿಂತಿದ್ದ ರಘು, ಇವಳು ಒಳಬಂದ ಕೂಡಲೇ, 'ಅವ್ರಿಗೆ ಹಂಗೇ ಆಗ್ಬೇಕು. ಅವ್ರು ಮತ್ತೇನಾದ್ರೂ ಅಂದ್ರೆ ನಿಂಗೇಳ್ತಿನಿ.' ಅಂತ ಚಪ್ಪಾಳೆ ತಟ್ಟಿ ಸ್ವಯಂ ಪ್ರದಕ್ಷಿಣೆ ಹಾಕಿಕೊಂಡು ಕುಣಿದ. ಪವಿ, ಇವನ ವರ್ತನೆಯ ರೀತಿಗೆ ಕ್ಷಣ ಅಂಜಿದಳು. ಆ ಅಂಜಿಕೆ ನಿಜವಾಗದಿರಲಿ ಎಂಬುದೂ ಅವಳ ಆಸೆಯಾಗಿತ್ತು.

***

ಪವಿ ಯಾವುದು ಆಗಬಾರದೆಂದು ಅಂಜಿದ್ದಳೋ ಅದೇ ಆಗಿತ್ತು. ರಘು ಮಾನಸಿಕವಾಗಿ ಬಳಲಿಹೋಗಿದ್ದನಲ್ಲದೆ, ಖಿನ್ನತೆಗೆ ಒಳಗಾಗಿದ್ದ. ಕೆಲಸವಿಲ್ಲದೆ ಬರಿಗೈಯ್ಯಾಗಿದ್ದವನಿಗೆ, ಮೇಲಿಂದ ಮೇಲೆ ಬಿರುನುಡಿಗಳು ಚುಚ್ಚುತ್ತಲೇ ಇದ್ದವು. ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದರೂ, ಕೆಲಸ ಬಿಟ್ಟು ಹೆಂಡತಿಯ ಗುಲಾಮನಾಗಿದ್ದಾನೆಂಬ ಮಾತುಗಳು! ಏನು ಮಾಡಿದ್ದನೋ ಏನೋ......ಕೆಲಸ ಕಿತ್ತುಕೊಂಡು ಕಳಿಸಿದ್ದಾರೆ! ಈ ತೆರನಾದ ಕವಣೆಕಲ್ಲುಗಳು ಅವನ ಹೃದಯಕ್ಕೆ ಗಾಯ ಮಾಡುತ್ತಲೇ ಇದ್ದವು. ಸ್ವಭಾವತಃ ಮೃದುಜೀವಿಯಾದ ರಘು, ಇಲಾಖೆಗೆ ಹೊಂದಿಕೊಳ್ಳಲೂ ಕಷ್ಟ ಪಡುತ್ತಿದ್ದನು. ಯಾವ ಜನ್ಮಾಂತರದ ಕರ್ಮವೋ ಕಡೆಗೂ ಅವನು ಇಲಾಖೆಗೆ ವಿದಾಯ ಹೇಳುವಂತಾಯಿತು. ಇಷ್ಟಲ್ಲದೆ ಮಕ್ಕಳಾಗದಿದ್ದುದೊಂದು ಇವನನ್ನು ಅಪಹಾಸ್ಯ ಮಾಡಲು ಮುಖ್ಯ ಕಾರಣವಾಗಿತ್ತು. ಹಾಗಾದರೆ ತಾನು ನಿರ್ವೀರ್ಯನೇ? ಶಕ್ತಿ ಕಳೆದುಕೊಂಡವನೇ? ಎಂಬ ಪ್ರಶ್ನೆಗಳ ಮಸೆಯುವಿಕೆಯಲ್ಲಿ ಮನಸ್ಸು ಕದಡಿಹೋಗಿತ್ತು. ಬಹುಶಃ ಹೊರಗೆ ಹೇಳಲೂ ಆಗದೆ, ಮನಸ್ಸಿನ ದುಗುಡಗಳನ್ನು ಶಮನ ಮಾಡಿಕೊಳ್ಳುವ ದಾರಿಯೂ ತಿಳಿಯದೆ ಈ ಪರಿಸ್ಥಿತಿಗೆ ಬಂದಿದ್ದನು.

ಪವಿತ್ರಳಿಗೆ ಕೊರಗುಗಳು ಇದ್ದವು. ಆದರೆ ಅವಳು ತನ್ನ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡು ಸಂಪೂರ್ಣವಾಗಿ ತನ್ನ ಸ್ವಂತ ಬದುಕನ್ನು ಮರೆತು ಬಿಡುತ್ತಿದ್ದಳು. ಮನೆಗೆ ಹಿಂದಿರುಗಿದಾಗಲೇ ಅವಳ ಸುತ್ತ ಸಮಸ್ಯೆಗಳು ನೃತ್ಯ ಮಾಡತೊಡಗುತ್ತಿದ್ದವು. ಗಂಡನ ಚಿಕ್ಕ ಚಿಕ್ಕ ಬದಲಾವಣೆಗಳನ್ನು ಗಮನಿಸಿಯೂ, ಛೇ! ಹಾಗಿರಲಾರದು, ತಾನೇ ಅವರನ್ನು ಹೀಗಂದುಕೊಳ್ಳಬಹುದೇ? ಎಂದೆಲ್ಲ ತನಗೆ ತಾನೇ ಸಮಾಧಾನ ಮಾಡಿಕೊಂಡಾಗ್ಯೂ, ಚಿಂತೆಗಳು ಕಸದಂತೆ ಮತ್ತೆ ಮನಸ್ಸಿನೊಳಗೆ ತೂರಿಕೊಳ್ಳುತ್ತಿದ್ದವು.

ರಘುವಿನ ಸ್ಥಿತಿಗೆ ಪವಿತ್ರ ದುಃಖಿಸಿದಳು, ಚಿಂತಿಸಿ ಪರಿಹಾರ ಹುಡುಕತೊಡಗಿದಳು. ಇದು ಮನೆಯಲ್ಲಿ ನಿವಾರಣೆಯಾಗುವುದಲ್ಲ, ಆಸ್ಪತ್ರೆ ಬಾಗಿಲನ್ನು ತಟ್ಟಲೇ ಬೇಕು ಎಂಬುದು ಖಾತ್ರಿಯಾದೊಡನೆ, ಕೆಲವು ಮಾನಸಿಕ ವೈದ್ಯರ ಅಭಿಪ್ರಾಯಗಳನ್ನಾಧರಿಸಿ ಬೆಂಗಳೂರಿನ ನಿಮ್ಹಾನ್ಸ್‌ಗೆ ಗಂಡನನ್ನು ಸೇರಿಸಿದಳು. ಹಣ, ಒಡವೆ, ಆಸ್ತಿಗಳೆಲ್ಲ ಇದ್ದರೂ ಮನದೊಳಗಣ ಕತ್ತಲೆ ಗಾಢವಾಗುತ್ತಲೇ ಹೋಯಿತು. ಹಣಕಾಸಿನಿಂದ ನೆಮ್ಮದಿ ಸಿಗುತ್ತದೆಂದಾಗಿದ್ದರೆ ಇವತ್ತು ಜನರಾರೂ ಇಷ್ಟು ಅತೃಪ್ತಿ ಅನುಭವಿಸುತ್ತಿರಲಿಲ್ಲವೇನೋ!

ನಿಮ್ಹಾನ್ಸ್‌ನಲ್ಲಿ, 'ಕಡ್ಡಾಯವಾಗಿ ಮೂರು ತಿಂಗಳು ಚಿಕಿತ್ಸೆ ಪಡೆಯಲೇ ಬೇಕು, ಹಾಗಾದಲ್ಲಿ ಮಾತ್ರ ನಿನ್ನ ಗಂಡ ಮೊದಲಿನಂತಾಗಿ ಮನೆಗೆ ಬರುತ್ತಾನಮ್ಮ. ಇನ್ನು ನಿನ್ನಿಷ್ಟ.' ಎಂದವರ ಮಾತನ್ನು ಅದು ಹೇಗೆ ತಾನೇ ತಳ್ಳಿ ಹಾಕಿಯಾಳು? ಆದರೆ ಜೊತೆಗೊಬ್ಬ ಸಹಾಯಕರಿದ್ದಿದ್ದರಾಗುತ್ತಿತ್ತು ಅನಿಸದಿರಲಿಲ್ಲ.. ಆದರೆ ಯಾರೂ ಇರಲಿಲ್ಲ!

ಯಾವ ಪುಣ್ಯವೋ ಅಲ್ಲಿ ಪುರುಷಿ ಸಿಕ್ಕಿದ ಇವಳಿಗೆ. ದೂರದ ಸಂಬಂಧಿ. ಇವರ ನೆರವಿಗೆ ಪುರುಷಿ ಟೊಂಕಕಟ್ಟಿ ನಿಂತನು. ಖುದ್ದು ತನ್ನ ಸಹಾಯಕ್ಕಾಗಿ ಇವನನ್ನು ಕಳಿಸಿದ್ದಾನೆ ಎಂದು ನಂಬಿದ ಪವಿತ್ರ ದೇವರಿಗೆ ಕುಳಿತಲ್ಲಿಂದಲೇ ನಮಸ್ಕಾರ ಹಾಕಿದಳು.

> ❝ ಇದು ಮನೆಯಲ್ಲಿ ನಿವಾರಣೆಯಾಗುವುದಲ್ಲ, ಆಸ್ಪತ್ರೆ ಬಾಗಿಲನ್ನು ತಟ್ಟಲೇಬೇಕು ಎಂಬುದು ಖಾತ್ರಿಯಾದೊಡನೆ, ಕೆಲವು ಮಾನಸಿಕ ವೈದ್ಯರ ಅಭಿಪ್ರಾಯಗಳನ್ನಾಧರಿಸಿ ಬೆಂಗಳೂರಿನ ನಿಮ್ಹಾನ್ಸ್‌ಗೆ ಗಂಡನನ್ನು ಸೇರಿಸಿದಳು. ಹಣ, ಒಡವೆ, ಆಸ್ತಿಗಳೆಲ್ಲ ಇದ್ದರೂ ಮನದೊಳಗಣ ಕತ್ತಲೆ ಗಾಢವಾಗುತ್ತಲೇ ಹೋಯಿತು. ಹಣಕಾಸಿನಿಂದ ನೆಮ್ಮದಿ ಸಿಗುತ್ತದೆಂದಾಗಿದ್ದರೆ ಇವತ್ತು ಜನರಾರೂ ಇಷ್ಟು ಅತೃಪ್ತಿ ಅನುಭವಿಸುತ್ತಿರಲಿಲ್ಲವೇನೋ! ನಿಮ್ಹಾನ್ಸ್‌ನಲ್ಲಿ, 'ಕಡ್ಡಾಯವಾಗಿ ಮೂರು ತಿಂಗಳು ಚಿಕಿತ್ಸೆ ಪಡೆಯಲೇ ಬೇಕು, ಹಾಗಾದಲ್ಲಿ ಮಾತ್ರ ನಿನ್ನ ಗಂಡ ಮೊದಲಿನಂತಾಗಿ ಮನೆಗೆ ಬರುತ್ತಾನಮ್ಮ. ಇನ್ನು ನಿನ್ನಿಷ್ಟ.' ಎಂದವರ ಮಾತನ್ನು ಅದು ಹೇಗೆ ತಾನೇ ತಳ್ಳಿ ಹಾಕಿಯಾಳು? ಆದರೆ ಜೊತೆಗೊಬ್ಬ ಸಹಾಯಕರಿದ್ದಿದ್ದರಾಗುತ್ತಿತ್ತು ಅನಿಸದಿರಲಿಲ್ಲ.. ಆದರೆ ಯಾರೂ ಇರಲಿಲ್ಲ!

> ❝ ರಾತ್ರಿ, ಅಡುಗೆಮನೆ ಕೆಲಸ ಮುಗಿಸಿ ರಘುವಿಗೂ ಊಟಕ್ಕೆ ಬಡಿಸಿ, ಅವನು ಮಲಗಿದ ಮೇಲೆ ಇವಳೂ ಹೋಗಿ ಪಕ್ಕದಲ್ಲೇ ಉರುಳಿಕೊಂಡಳು. ಅವನು ತುದಿಗೆ ಮುದುರಿಕೊಂಡ. 'ರೀ, ನಿಮ್ಮತ್ರ ನಾನು ಏನೋ ಮಾತಾಡ್ಬೇಕಿತ್ತು..' ನಿರುತ್ತರ. ಇವಳೇ ಮುಂದುವರಿದು, 'ಮಕ್ಕಳಾಗಲಿಲ್ಲ ಅಂತ ಬೇಜಾರೇನ್ರೀ ನಿಮಗೆ? ಒಂದು ಮಗುವನ್ನು ದತ್ತು ತಗೋಳೋಣ ಅಂತ ನಾನೆಷ್ಟು ಹೇಳಲಿಲ್ವಾ? ಈಗಲೂ ಕಾಲ ಮಿಂಚಿಲ್ಲ. ಮಕ್ಕಳನ್ನು ನೋಡಿಕೊಂಡು ಬರೋಣವಾ?' ಅವನ ಉಸಿರಾಟವೂ ಅವಳಿಗೆ ಕೇಳಿಸುತ್ತಿಲ್ಲ.

***

ಮೂರು ತಿಂಗಳು ಸುಗಮವಾಗಿ ಕಳೆದು ರಘು ಆರೋಗ್ಯವಾಗಿ ಆಚೆ ಬಂದನು. ಆದರೆ ದುರದೃಷ್ಟ ಗವಾಕ್ಷಿಯಲ್ಲಿ ಹೊಕ್ಕಿತ್ತು. ಮನೆಗೆ ಬಂದ ಒಂದು ತಿಂಗಳಿಗೇ ರಘು ಹೃದಯಾಘಾತವಾಗಿ ತೀರಿಕೊಂಡನು. ಈಗ ಪವಿತ್ರ ಒಂಟಿ ಹಕ್ಕಿ! ಪುರುಷಿ ಸದಾ ಜೊತೆಗಿದ್ದನು ಮಗನಂತೆ ಊರುಗೋಲಿನಂತೆ!

ವರ್ಷಗಳು ಕಳೆದವು. ಪವಿತ್ರಮ್ಮ ಒಂದು ದಿನ ನಿವೃತ್ತಿ ಹೊಂದಿ ಮನೆಗೆ ಬಂದಳು. ಒಂದು ರಾತ್ರಿ ಪವಿತ್ರ ಇದ್ದಕ್ಕಿದ್ದಂತೆ ಎದ್ದು ಕುಳಿತಳು. ಈ ಪುರುಷಿ ಯಾರೋ, ಎಲ್ಲಿಂದಲೋ ಬಂದವನು! ತನಗೆ ಇಷ್ಟು ಸಹಾಯ ಮಾಡಲೇಬೇಕಾದ್ದೇನಿತ್ತು? ಪವಿತ್ರ ತನ್ನ ಕಷ್ಟಕಾಲದಲ್ಲೊದಗಿದ ಪುರುಷೋತ್ತಮನನ್ನು ಪರಮಪುರುಷನೆಂದೇ ತಿಳಿದಳು. ಮಕ್ಕಳಿಲ್ಲ, ಮರಿಯಿಲ್ಲ ಬಂದುಹೋಗುವ ಬಂಧುಬಳಗವಿಲ್ಲ! ತನ್ನ ಜೊತೆಗೇ ತನ್ನ ಸಹಾಯಕ್ಕೇ ಬಂದಿರುವ ಪುರುಷಿಯ ಬಗ್ಗೆ ಒಂದು ಗಟ್ಟಿ ನಿರ್ಧಾರಕ್ಕೆ ಬಂದಳು. ತನ್ನ ಗೆಳತಿ ಶಾಂತಿಯೊಡನೆ ಕೂಡ ಈ ಮಾತನ್ನು ಚರ್ಚಿಸಿ ಅವಳು ಎಷ್ಟು ತಡೆದರೂ ತನ್ನ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸಿಯೇ ಬಿಟ್ಟಳು. ಕುವೆಂಪುನಗರದಲ್ಲಿ ತಾನು ಬಹು ಆಸೆಯಿಂದ ಕಟ್ಟಿಸಿದ್ದ ಡ್ಯೂಪ್ಲೆಕ್ಸ್ ಮನೆಯನ್ನು ಪುರುಷಿ ಹೆಸರಿಗೆ ಬರೆದುಬಿಟ್ಟಳು. ಒಡವೆಗಳನ್ನೆಲ್ಲ ಅವನಿಗೇ ಕೊಟ್ಟು ಒಂದು ಚಿನ್ನದ ದಾರದಂತಹ ಎಳೆಯನ್ನು ಕೊರಳಿಗೆ ಹಾಕಿಕೊಂಡಳು. ರಘು ಹೋದಮೇಲೆ ಅವಳಿಗೆ ಎಲ್ಲ ವ್ಯಾಮೋಹಗಳೂ ಕಳಚಿಬಿದ್ದಿದ್ದವು. ಸುರಕ್ಷತೆಗೆ ಇಟ್ಟುಕೋ ಎಂದರೂ ಕೇಳದೆ ಎಲ್ಲವನ್ನೂ ಪುರುಷಿಗೆ ಬರೆದುಕೊಟ್ಟಳು. ತನ್ನ ಎ.ಟಿ.ಎಮ್. ಕಾರ್ಡ್ ಸಮೇತ!

***

ಒಂದು ವರ್ಷದ ನಂತರ.......

ಶಾಂತಿ ತನ್ನ ಚಿಕ್ಕಪ್ಪನನ್ನು ಸೇರಿಸಿದ್ದ ವೃದ್ಧಾಶ್ರಮಕ್ಕೆ ಅವರನ್ನು ನೋಡಲು ಹೋಗಿದ್ದಳು. ಇನ್ನೂ ಒಳಹೋಗುತ್ತಿದ್ದಂತೆ 'ಶಾಂ.......ತೀ.........' ಎಂದು ಜೋರಾಗಿ ಕೂಗುತ್ತಾ ಹಿಂದಿನಿಂದ ಹೆಂಗಸೊಬ್ಬಳು ಗಟ್ಟಿಯಾಗಿ ಶಾಂತಿಯನ್ನು ತಬ್ಬಿ ಹಿಡಿದಳು. ಹೆದರಿದ ಶಾಂತಿಗೆ ಆಕೆ ಯಾರೆಂದು ಗುರುತು ಹಿಡಿಯಲಾಗಲೇ ಇಲ್ಲ. ಕಡೆಗೆ ಆಶ್ರಮದವರು, 'ಹೆದರಬೇಡಿ. ಆಕೆ ಹೆಸರು ಪವಿತ್ರಮ್ಮ. ಗಂಡ ಹೋದಮೇಲೆ ಈಕೆಗೆ ಕಾಲು ಬಿದ್ದು ಹೋದವು. ಮಗ ಮಹಡಿ ಮೇಲಿನ ರೂಮಿನಲ್ಲಿ ಆಕೆಯನ್ನು ಹಾಕಿ ಕೈಬಿಟ್ಟುಬಿಟ್ಟಿದ್ದ. ಮಲಮೂತ್ರದೊಳಗೆ ಬಿದ್ದು ಒದ್ದಾಡುತ್ತಿದ್ದ ಈಕೆಯನ್ನು ಸ್ವಚ್ಛ ಪಡಿಸಲು, ಎಷ್ಟೇ ಹಣ ಕೊಡುತ್ತೇವೆಂದರೂ ಯಾರೂ ಒಪ್ಪಲಿಲ್ಲ. ಅವರ ಮಗ ನಮ್ಮ ಆಶ್ರಮದ ಫೋನ್ ನಂಬರನ್ನು ಎಲ್ಲಿಂದಲೋ ಪಡೆದುಕೊಂಡು ನಮಗೆ ಫೋನ್ ಮಾಡಿದರು. ನಾವು ಕರೆದುಕೊಂಡು ಬಂದು ಈಗ ಈ ಮಟ್ಟದಲ್ಲಿದ್ದಾರೆ.'

ಶಾಂತಿ ಮೂಕವಿಸ್ಮಿತಳಾದಳು. ಅವಳಿಗೆ ಏನು ಮಾತಾಡಲೂ ತೋಚಲಿಲ್ಲ. ಆಶ್ರಮದವರೇ ಪವಿತ್ರಳಿಂದ ಶಾಂತಿಯನ್ನು ಬಿಡಿಸಿ, ಅವಳ ಹಾಸಿಗೆಯಲ್ಲಿ ತಂದು ಮಲಗಿಸಿದರು.

'ಏನಾಶ್ಚರ್ಯ! ಅವರ ಮಗ ಪುರುಷೋತ್ತಮ ಬಂದರೂ ಗುರುತು ಹಿಡಿಯಲಾರದ ಈಕೆ ಅದು ಹೇಗೆ ನಿಮ್ಮನ್ನು ಗುರುತು ಹಚ್ಚಿದರೋ ಆ ದೇವರೇ ಬಲ್ಲ.'

ಕಣ್ಣಿಗೆ ಕಾಡಿಗೆಯಿಲ್ಲದೆ ಹೊರ ಹೋಗಲೊಪ್ಪದ, ನೀಟಾಗಿ ಅಂದವಾಗಿ ಶುಚಿಯಾಗಿ ಅಲಂಕರಿಸಿಕೊಳ್ಳುತ್ತಿದ್ದ ಪವಿ ಎಲ್ಲಿ? ಮಲಮೂತ್ರಗಳನ್ನು ತಿಳಿದೂ ತಿಳಿದೂ ಬಟ್ಟೆಯಲ್ಲೇ ಮಾಡಿಕೊಳ್ಳುವ, ಬರಡು ಮುಖದ ಈ ಪವಿತ್ರಳೆಲ್ಲಿ? ಶಾಂತಿಯ ಕಣ್ಣುಗಳು, ನೀರಿನ ಪರದೆಯನ್ನೆಳೆದುಕೊಂಡು ಪವಿತ್ರಳ ಚಿತ್ರವನ್ನು ಮಸುಕುಗೊಳಿಸಿದವು. ಪವಿತ್ರಮ್ಮ ಮಾತ್ರ, 'ಶಾಂತೀ.... ಶಾಂತೀ..... ನನ್ನ ಕರೆದುಕೊಂಡು ಹೋಗೇ....' ಎಂದು ಹಲುಬುತ್ತಿದ್ದಳು. ಶಾಂತಿ ಕಿವಿಮುಚ್ಚಿಕೊಂಡು ಆಚೆಗೆ ಓಡಿಬಂದಳು.

ದ್ವಿತೀಯ ಬಹುಮಾನ

ಚಂದ್ರೀ



ಜಿ.ಸಿ.ಮಧುಸೂದನ ಎಂ.ಎ ಬಿ.ಇಡಿ
ವಿಳಾಸ: ನಂ.179, 6ನೇ ಕ್ರಾಸ್,
ನವಿಲುರಸ್ತೆ, 'ಎ' ಮತ್ತು 'ಬಿ' ಬ್ಲಾಕ್,
ಕುವೆಂಪುನಗರ, ಮೈಸೂರು–570023
ಮೊ: 9900718762

ತೃತೀಯ ಬಹುಮಾನ

ಪರಮೂ



ಆರ್.ಪವನ್‌ಕುಮಾರ್
ವಿಳಾಸ: ನಂ. 1/163, ಪಾರ್ಕ್ ಹತ್ತಿರ,
2ನೇ ಕ್ರಾಸ್, ಜೈನ್ ಟೆಂಪಲ್ ಹಿಂಭಾಗ,
ರಂಗನಾಥ್‌ನಗರ, ಶ್ರೀರಂಗಪಟ್ಟಣ–571438
ಮೊ: 9945842882

ಸಮಾಧಾನಕರ ಬಹುಮಾನ

ಫುಲ್ ಪ್ಯಾಕೆಟ್ ಬಿಸ್ಕೇಟ್ ಮತ್ತು ಉಂಡೆ ಸೇಬು



ಗಾಯತ್ರಿ ಸುಂದರೇಶ್
ಸಂಸ್ಥಾಪನಾ ಕಾರ್ಯದರ್ಶಿ
ಸಖಿ ಫೌಂಡೇಶನ್ ಮತ್ತು ಸೂರ್ಯ
ಚಾರಿಟಬಲ್ ಟ್ರಸ್ಟ್, ಮೈಸೂರು.
ಮೊ. 9964790442

ಸಮಾಧಾನಕರ ಬಹುಮಾನ

ಹಂಗು



ಬಿ.ಆರ್.ನಾಗರತ್ನ
ನಂ.1125, 9ನೇ ಮುಖ್ಯ ರಸ್ತೆ
ಗೋಕುಲಂ 3ನೇ ಹಂತ,
ಮೈಸೂರು–570002
ಮೊ.9731999313

ತೀರ್ಪುಗಾರರ ಅಭಿಪ್ರಾಯ



'ಮೈಸೂರು ಮಿತ್ರ' ಎಂದರೆ ಕನ್ನಡಿಗರ ಹೆಮ್ಮೆ. ಅದರಲ್ಲೂ ವಿಶೇಷವಾಗಿ ಮೈಸೂರಿಗರ ಹಿರಿಮೆ. ನಾಲ್ಕೂವರೆ ದಶಕಗಳ ಸುದೀರ್ಘ ಚರಿತ್ರೆಯನ್ನು ತನ್ನೊಡಲಲ್ಲಿ ಇರಿಸಿಕೊಂಡಿರುವ 'ಮಿತ್ರ' ಪತ್ರಿಕೋದ್ಯಮದಲ್ಲಿ ಬೆಳೆದು ಬಂದಿರುವ ಪರಿಯೇ ಒಂದು ವಿಸ್ಮಯ! ಮಿತ್ರನ ಇಂತಹ ಸಾಧನೆಯ ಹಿಂದೆ ಸಂಪಾದಕರಿಂದ ಹಿಡಿದು ಪ್ರಕಾಶಕರು, ಮುದ್ರಕರು, ಉಪ ಸಂಪಾದಕರು, ಜಿಲ್ಲೆ ಮತ್ತು ತಾಲೂಕು ವರದಿಗಾರರು, ಪ್ರಸರಣ ವಿಭಾಗದ ಮುಖ್ಯಸ್ಥರು, ಏಜೆಂಟರು, ಪತ್ರಿಕಾ ಛಾಯಾಗ್ರಾಹಕರು ಒಳಗೊಂಡಂತೆ ಇವರೆಲ್ಲರ ಶ್ರಮವಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ 'ಮೈಸೂರು ಮಿತ್ರ' ಪತ್ರಿಕೆಯನ್ನು ಕೊಂಡು ಓದುವ ಓದುಗರ ಪ್ರೀತಿ ಇದೆ. ಜಾಹೀರಾತುದಾರರ ಪ್ರೋತ್ಸಾಹವೂ ಇದೆ. ಹಾಗಾಗಿ ಅಕ್ಷರ ಲೋಕದ ಅಧಿಪತಿಯಾಗಿ ಪ್ರತಿಯೊಬ್ಬರ ಭಾವ ಕೋಶದಲ್ಲಿ 'ಮಿತ್ರ' ಬೇರು ಬಿಟ್ಟಿದ್ದು ಪ್ರತಿದಿನವೂ ಓದುಗ ದೈವಗಳೊಡನೆ ಮುಖಾಮುಖಿಯಾಗಿ ಪ್ರತಿ ಸ್ಪಂದಿಸುವ ಆರೋಗ್ಯಕರ ನಡೆಯುಂಟು. ವಿಶೇಷವೆಂದರೆ 'ಮೈಸೂರು ಮಿತ್ರ' ಪತ್ರಿಕೋದ್ಯಮದಲ್ಲಿ ತಾನು ಬೆಳೆದು ಸಮರ್ಥ ಪತ್ರಕರ್ತರನ್ನೂ ಬೆಳೆಸುವುದರೊಂದಿಗೆ ಸಾಹಿತ್ಯ ಕ್ಷೇತ್ರಕ್ಕೂ ಪ್ರೋತ್ಸಾಹ ನೀಡುತ್ತಾ ಸಾಹಿತಿಗಳನ್ನು ಪ್ರೋತ್ಸಾಹಿಸುವ ಅಕ್ಷರ ದಾಸೋಹವನ್ನೂ ಮಾಡುತ್ತಾ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಉತ್ತಮೋತ್ತಮ ಶ್ರೇಷ್ಠ ಕಥೆಗಾರರನ್ನು ಬೆಳಕಿಗೆ ತರುವ ಸದುದ್ದೇಶದಿಂದ ಪ್ರತಿ ವರ್ಷ ತನ್ನ ವಾರ್ಷಿಕೋತ್ಸವದ ಸುಸಂದರ್ಭದಲ್ಲಿ ಕಥಾ ಸ್ಪರ್ಧೆಯನ್ನು ನಡೆಸುತ್ತಾ ಬರುತ್ತಿದೆ. ಅದರಂತೆ ಪ್ರಸ್ತುತ 45ನೇ ವಾರ್ಷಿಕೋತ್ಸವದ ಅಂಗವಾಗಿ ಕಥಾಸ್ಪರ್ಧೆ ಏರ್ಪಡಿಸಿದ್ದು ಸಾಕಷ್ಟು ಉತ್ತಮ ಕಥೆಗಳು ಸ್ಪರ್ಧೆಗೆ ಬಂದಿದ್ದು ತೀರ್ಪುಗಾರರ ಮಂಡಳಿಯು ಸ್ಪರ್ಧೆಗೆ ಬಂದ ಎಲ್ಲಾ ಕಥೆಗಳನ್ನು ಸೂಕ್ಷ್ಮವಾಗಿ ಓದಿ ಅವಲೋಕಿಸಿ, ಕೂಲಂಕಷವಾಗಿ ಪರಿಶೀಲಿಸಿ ಬಹುಮಾನಕ್ಕೆ ಆಯ್ಕೆಯಾದ ಕಥೆಗಳ ಬಗ್ಗೆ ಮೂರ್ನಾಲ್ಕು ಸಾಲುಗಳ ಸಂಕ್ಷಿಪ್ತ ಟಿಪ್ಪಣಿಗಳೊಡನೆ ಕಥಾ ಸ್ಪರ್ಧೆಯ ಫಲಿತಾಂಶವನ್ನು ಕೆಳಕಂಡಂತೆ ಘೋಷಿಸಲಾಗಿದೆ.

ಒಡಲೊಳಗೆ ಕಾರ್ಕೋಟಕ ವಿಷವನ್ನು ಮುಚ್ಚಿಟ್ಟುಕೊಂಡು ಹೊರಗೆ ಅಮೃತ ತುಳುಕಿಸುತ್ತಿದ್ದ ಮುಖವಾಡದ ಮೋಸಗಾರನೊಬ್ಬನ ಜಾಲಕ್ಕೆ ಸಿಲುಕಿ ತನ್ನ ಸ್ವಯಂಕೃತಾಪರಾಧದಿಂದ ಎಲ್ಲವನ್ನು ಕಳೆದುಕೊಂಡು ದುರಂತದ ತುತ್ತತುದಿಯನ್ನು ಕಾಣುವ ಹೃದಯವಂತ ಹೆಣ್ಣೊಬ್ಬಳ ಬದುಕನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಾ ಎಂಥಾ ಗಟ್ಟಿ ಮನಸ್ಸುಗಳನ್ನೂ ವಿಕ್ಷಿಪ್ತಗೊಳಿಸುವ 'ಗ್ರಸ್ತೆ' ಕಥೆಯು ಪ್ರಥಮ ಬಹುಮಾನವನ್ನು, ಬದುಕಿನಲ್ಲಿ ಪರಿಹಾರ ವಿದೆಯೇ ಹೊರತು ಸಾವಿನಲ್ಲಲ್ಲವೆಂಬ ಸತ್ಯಾರ್ಥ ತೆಯೊಡನೆ ಈಸಬೇಕು ಇದ್ದು ಜಯಿಸಬೇಕು ಜಯಿಸಿ ಮಾನವ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬ ಸಂದೇಶ ಸಾರುತ್ತಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಮಹಿಳೆಯರು ಹೇಗೆಲ್ಲಾ ಸದುಪಯೋಗ ಪಡಿಸಿಕೊಂಡು ತಮ್ಮ ಬದುಕನ್ನು, ಭವಿಷ್ಯ ವನ್ನು ಕಟ್ಟಿಕೊಳ್ಳಬಹುದೆಂಬ ತೋರು ಮಾರ್ಗದ **'ಚಂದ್ರೀ....!'** ಕಥೆಯು ದ್ವಿತೀಯ ಬಹುಮಾನವನ್ನು, ತಾನು ಸೇವೆಯಲ್ಲಿದ್ದಾಗಲೇ ಸತ್ತರೆ ತನ್ನ ಮಗನ ಸೊಟ್ಟ ಬದುಕು ನೆಟ್ಟಗಾಗುವುದೆಂಬ ಕನವರಿಕೆಯಲ್ಲಿರುವ ಆರಕ್ಕೇರದ ಮೂರಕ್ಕಿಳಿಯದ ನಿವೃತ್ತಿಯ ಅಂಚಿನಲ್ಲಿರುವ ಫಾರೆಸ್ಟ್ ಗಾರ್ಡೊಬ್ಬನ ಒಡಬಾಳನ್ನು ಹಾಗೂ ಪ್ರಾಣಿ ಮತ್ತು ಮಾನವ ಸಂಘರ್ಷದ ಅನಾಹುತಗಳನ್ನು ನೈಜವಾಗಿ ಹೇಳುವ **'ಪರಮೂ'** ಕಥೆಯು ತೃತೀಯ ಬಹುಮಾನವನ್ನು, ಸ್ವತಃ ತಾವೇ ಜನ್ಮ ನೀಡಿದ ಮಕ್ಕಳು ಅದರಲ್ಲೂ ವಿದೇಶಿ ನೆಲಕಂಡವರು ತಮ್ಮ ತಂದೆ ತಾಯಿಗಳನ್ನು ಎಷ್ಟೊಂದು ನಿಕೃಷ್ಟವಾಗಿ ಕಾಣುತ್ತಾರೆ ಎಂಬುದರ ಜೊತೆಗೆ ಇದರಿಂದ ಹೆತ್ತವರು ಅನುಭವಿಸುವ ಮಾನಸಿಕ ಯಾತನೆಯನ್ನು ಬಿಡಿಸಿಡುತ್ತಾ ಪ್ರಸ್ತುತ ಸಮಾಜದಲ್ಲಿ ಮಕ್ಕಳನ್ನು ಹೆತ್ತ ತಂದೆ ತಾಯಿಗಳಿಗೆ ಎಚ್ಚರಿಕೆಯ ಗಂಟೆ ಬಾರಿಸುವ **'ಫುಲ್ ಪ್ಯಾಕೆಟ್ ಬಿಸ್ಕೆಟ್ ಮತ್ತು ಉಂಡೆ ಸೇಬು'** ಕಥೆ ಹಾಗೂ ಇನ್ನೊಬ್ಬರ ಹಂಗಿನಲ್ಲಿ ತುಪ್ಪಾನ್ನ ತಿಂದು ಬದುಕಿದರೂ ಅದೊಂದು ಬದುಕಲ್ಲ. ನಿಜವಾದ ಬದುಕೆಂದರೆ ಅಂಬಲಿ ಕುಡಿದರೂ ಸ್ವಾವಲಂಬಿಯಾಗಿ, ಸ್ವತಂತ್ರವಾಗಿ, ಸ್ವಾಭಿಮಾನದಿಂದ ಬದುಕುವುದೇ ಆಗಿದೆಯೆಂಬ ಸಾರ್ಥಕ ಬದುಕನ್ನು ದರ್ಶಿಸುವ **'ಹಂಗು'** ಎಂಬ ಕಥೆಗಳೆರಡೂ ಪ್ರೋತ್ಸಾಹಕ ಬಹುಮಾನ ಪಡೆದಿವೆ.

ಬಹುಮಾನ ವಿಜೇತರೆಲ್ಲರಿಗೂ 'ಮೈಸೂರು ಮಿತ್ರ' ಪತ್ರಿಕಾ ಬಳಗದ ಪರವಾಗಿ ಅಭಿನಂದನೆಗಳು. ಹಾಗೆಯೆ ಬಹುಮಾನ ಬಾರದವರು ಬೇಸರಿಸುವಂತಾದ್ದೇನೂ ಇಲ್ಲ. ಅನೇಕ ಮಂದಿ ಕಥೆಗಾರರು ಬಹುಮಾನದ ಹತ್ತಿರ ಹತ್ತಿರ ಬಂದು ಹೋಗಿದ್ದೀರ. ಇದರರ್ಥ ಬಹಳಷ್ಟು ಮಂದಿ ಒಳ್ಳೆಯ ಕಥೆಗಳನ್ನು ಬರೆದು ತುರುಸಿನ ಸ್ಪರ್ಧೆಯೊಡ್ಡಿದ್ದೀರ. ಭವಿಷ್ಯದಲ್ಲಿ ಉತ್ತಮ ಕಥೆಗಾರರಾಗುವಂಥ ಲಕ್ಷಣಗಳನ್ನು ತೋರಿದ್ದೀರಾ. ನಿಮ್ಮ ಬರವಣಿಗೆ ಹೀಗೆಯೇ ಮುಂದುವರಿಯಲಿ. ಎಲ್ಲರಿಗೂ ಶುಭವಾಗಲಿ.

Promotional Feature

ಕೈಗಾರಿಕೆಗಳ ಅಭಿವೃದ್ಧಿಗೆ ಕೆಬಿಎಲ್ ಪಣ

ಕೈಗಾರಿಕಾ ಕ್ಷೇತ್ರಗಳು ದೊಡ್ಡ ಶಕ್ತಿಯಾಗಿ ಬೆಳೆದಾಗ ನಿರುದ್ಯೋಗ ಸಮಸ್ಯೆ ನಿವಾರಿಸಬಹುದು. ಅದೇ ರೀತಿ ಉದ್ದಿಮೆದಾರರಿಗೂ ಸರಕಾರ ಸಮರ್ಪಕ ಸೌಲಭ್ಯ ಕಲ್ಪಿಸಬೇಕು ಎಂದು ಪ್ರತಿಪಾದಿಸಿಕೊಂಡು ಬಂದಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರು, ಈ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ದೇಶದ ಆಧಾರ ಸ್ಥಂಭಗಳು. ದೊಡ್ಡ ಸಂಸ್ಥೆಗಳೊಂದಿಗೆ ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆಯಬೇಕು. ಕೈಗಾರಿಕೆಗೆ ಸಂಬಂಧ ಪಟ್ಟಂತೆ ಮೈಸೂರು ಅತ್ಯಂತ ಪ್ರಮುಖ ಜಿಲ್ಲೆ.ಈ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಎಂಬುದನ್ನು ಸರಕಾರಕ್ಕೆ ಹಾಗೂ ಸಂಬಂಧಪಟ್ಟವರ ಗಮನಕ್ಕೆ ತಂದು ಕ್ಷೇತ್ರದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಇದಲ್ಲದೆ ಮೈಸೂರಿನಲ್ಲಿ ಕೈಗಾರಿಕೆಗಳ ಬವಣೆ, ಮೂಲ ಸೌಲಭ್ಯ ಕೊರತೆ, ಬೆಳವಣಿಗೆ, ಅವಕಾಶ, ಹೊಸ ಉದ್ದಿಮೆದಾರರಿಗೆ ಸಹಕಾರ, ಮಾರ್ಗದರ್ಶನ ಸೇರಿದಂತೆ ಸಾಕಷ್ಟು ಕಾಳಜಿ ವಹಿಸಿ ಸೇವೆ ಸಲ್ಲಿಸುತ್ತಿರುವ ಕೆ.ಬಿ.ಲಿಂಗರಾಜು ಅವರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷರಾದ ಮೇಲೆ ತಮ್ಮ ಸೇವೆಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ.

ಕೈಗಾರಿಕೆಗಳಿಗೆ ಮೂಲ ಸೌಲಭ್ಯ, ಕೆಬಿಎಲ್ ಹೋರಾಟ ಇಂಡಸ್ಟ್ರೀಯಲ್ ಸಬರ್ಬ್, ಬನ್ನಿಮಂಟಪ, ಹೂಟಗಳ್ಳಿ, ಹೆಬ್ಬಾಳು, ಮೇಟಗಳ್ಳಿ, ಕೂರ್ಗಳ್ಳಿ, ಬೆಳಗೊಳ, ಬೆಳವಾಡಿ ಮತ್ತಿತರ ಕೈಗಾರಿಕಾ ಪ್ರದೇಶದಿಂದ ಕೋಟ್ಯಾಂತರ ರೂ. ತೆರಿಗೆ ಸಂಗ್ರಹಿಸಲಾಗುತ್ತದೆ ಆದರೆ, ಇಲ್ಲಿ ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ. ಕನಿಷ್ಠ ಬೀದಿದೀಪ, ನೀರು, ರಸ್ತೆ, ಶೌಚಾಲಯ ಕೂಡ ಸಮರ್ಪಕವಾಗಿಲ್ಲ. ಇದು ಈಗಿನ ಸಮಸ್ಯೆಯಲ್ಲ ಹತ್ತಾರು ವರ್ಷದಿಂದ ಮುಂದುವರಿದುಕೊಂಡು ಬಂದಿದೆ. ಈಗಲಾದರೂ ಸಮಸ್ಯೆ ಬಗೆಹರಿಸಿ ಎಂದು ಸಂಬಂಧಪಟ್ಟ ಸಚಿವರು, ಶಾಸಕರು ಹಾಗೂ ಅಧಿಕಾರಿಗಳಿಗೆ ನಿರಂತರವಾಗಿ ಮನವಿ ನೀಡುತ್ತಿದ್ದಾರೆ.

ಜಿಲ್ಲೆಯಲ್ಲಿ ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರದ ಕನಸು ಎರಡು ದಶಕ ಕಳೆದರೂ ಇನ್ನೂ ಈಡೇರಿಲ್ಲ.

- 2003ರ ಗೆಜೆಟ್ ಅಧಿಸೂಚನೆಯಲ್ಲಿ ಮೈಸೂರಿಗೆ ಕೈಗಾರಿಕಾ ಪಟ್ಟಣ ಪ್ರಾಧಿಕಾರ ಘೋಷಿಸಿದ್ದರೂ ಇದುವರೆಗೂ ಕಾರ್ಯಗತವಾಗಿಲ್ಲ.
- ಎರಡು ಬಾರಿ ತೆರಿಗೆ ಪಾವತಿಸುವುದು ತಪ್ಪಿಸಿ ನಗರ ಸಭೆಗೆ ಹಾಗೂ ಕೆಐಎಡಿಬಿಗೂ ಟ್ಯಾಕ್ಸ್ ಕಟ್ಟಬೇಕಾಗಿದೆ. ಇದನ್ನುತಪ್ಪಿಸಿ ಒಬ್ಬರಿಗೆ ಮಾತ್ರ ತೆರಿಗೆ ಕಟ್ಟುವಂತಾಗಲಿ. ಈ ಸಮಸ್ಯೆಗಳ ಪರಿಹಾರಕ್ಕೆ ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರವಾದರೆ ಉದ್ದಿಮೆಗಳೇ ಇದರ ನಿರ್ವಹಣೆ ಮಾಡಿಕೊಳ್ಳುತ್ತಾರೆ.
- ವಿಶ್ವೇಶ್ವರನಗರ, ಬನ್ನಿಮಂಟಪ ಎ ಮತ್ತು ಬಿ ಬಡಾವಣೆ ಸೇರಿದಂತೆ ದಕ್ಷಿಣ ಕೈಗಾರಿಕಾ ಪ್ರದೇಶದ ಮೂಲ ಅಗತ್ಯತೆ ಪೂರೈಕೆಗಾಗಿ ಕನಿಷ್ಠ 50 ಕೋಟಿ ರೂ. ಮೀಸಲಿಡಬೇಕು. ಈ ಹಣದಲ್ಲಿ ರಸ್ತೆ ಚರಂಡಿ ಹಾಗೂ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಬೇಕು. ಮೈಸೂರಿನಲ್ಲಿ ಮೂರು ಕೈಗಾರಿಕಾ ಕ್ಲಸ್ಟರ್‌ಗಳು ಸ್ಥಾಪನೆಯಾಗಬೇಕು. ಇದಕ್ಕೆ ಕೇಂದ್ರ ಸರಕಾರ ಹಣ ನೀಡಲು ಸಿದ್ಧವಿದ್ದು ರಾಜ್ಯ ಸರಕಾರ ನಿವೇಶನ ನೀಡಲು ಮೀನಾಮೇಷ ಎಣಿಸುತ್ತಿದೆ.

ಕೈಗಾರಿಕಾ ಕಾರ್ಮಿಕರಿಗೆ ಕೇಂದ್ರ ಸರಕಾರದ ಯೋಜನೆಗಳನ್ನು ಬಳಸಿ ಕೊಂಡು

- ಕೈಗಾರಿಕಾ ಪ್ರದೇಶದಲ್ಲೇ ವಸತಿ ಸೌಲಭ್ಯ ಕಲ್ಪಿಸಬೇಕು.

ಇದಕ್ಕೂ ಕೇಂದ್ರ ಸರಕಾರ ಹಣ ನೀಡುತ್ತದೆ. ರಾಜ್ಯ ಸರಕಾರ ಇದಕ್ಕೆ ಸೂಕ್ತ ಕ್ರಮ ಕೈಗೊಂಡು ಕಾರ್ಮಿಕ ಇಲಾಖೆ ಮೂಲಕ ಕಾರ್ಯಗತಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.



ಮೈಸೂರು ಕೈಗಾರಿಕಾ ಕ್ಷೇತ್ರದ ಉನ್ನತೀಕರಣಕ್ಕೆ ಕೆ.ಬಿ.ಲಿಂಗರಾಜು ಕೊಡುಗೆ ಅಪಾರ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾಗಿ ಯಶಸ್ವಿ ಕಾರ್ಯನಿರ್ವಹಣೆ

ಸರಕಾರ ಪ್ರೋತ್ಸಾಹಿಸಿದರೆ ಇನ್ನಷ್ಟು ಅಭಿವೃದ್ಧಿ:

ಮೈಸೂರಿನಲ್ಲಿ ಪ್ಯಾಕೇಜಿಂಗ್ ಇಂಡಸ್ಟ್ರೀ ಅದ್ಭುತವಾಗಿ ನಡೆಯುತ್ತಿದ್ದು, ಬಾಕ್ಸ್, ವೈರ್, ಟೈರ್ ಫ್ಯಾಕ್ಟರಿ, ಅಲ್ಲದೆ ಎಂಜಿನಿಯರಿಂಗ್ ಕ್ಷೇತ್ರವೂ ಅದ್ಭುತವಾಗಿದೆ. ಹೆಬ್ಬಾಳು, ಮೇಟಗಳ್ಳಿ, ಯಾದವಗಿರಿ, ಕೂರ್ಗಳ್ಳಿ, ಹೂಟಗಳ್ಳಿಗಳಲ್ಲಿ ಇದಕ್ಕೆ ಸಂಬಂಧಪಟ್ಟ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ದೊಡ್ಡದೊಡ್ಡ ಸಂಸ್ಥೆಗಳಿಗೆ ಸಣ್ಣ ಹಾಗೂ ಮಧ್ಯಮ ಕಾರ್ಖಾನೆಗಳು ಸಾಕಷ್ಟು ಉತ್ಪನ್ನಗಳು ಪೂರೈ ಸುತ್ತಿದೆ. ಅದೇ ರೀತಿ ಹುಣಸೂರು, ಎಚ್.ಡಿ.ಕೋಟೆ, ನಂಜನಗೂಡು, ಕೊಳ್ಳೇಗಾಲ, ತಿ.ನರಸೀಪುರ ಸೇರಿದಂತೆ ಸಾಕಷ್ಟು ಕಡೆಯಿಂದ ಮಹಿಳೆಯರು ಮೈಸೂರು ಕೈಗಾರಿಕಾ ಪ್ರದೇಶಕ್ಕೆ ಉದ್ಯೋಗ ಅರಸಿ ನಿತ್ಯ ಬರುತ್ತಾರೆ. ಆದರೆ, ತಾಲೂಕು ಮಟ್ಟದಲ್ಲೇ ಕೈಗಾರಿಕೆಗಳು ಉದ್ಭವಿಸಿದರೆ ಅವರು ಇಲ್ಲಿವರೆಗೂ ಬರುವುದು ತಪ್ಪುತ್ತದೆ, ಜತೆಗೆ ಸ್ಥಳೀಯವಾಗಿ ಕೆಲಸ ದೊರೆಯುತ್ತದೆ ಎಂಬುದನ್ನು ಲಿಂಗರಾಜು ಅವರು ಪ್ರತಿಪಾದಿಸಿದ್ದಾರೆ.

ಬ್ಯಾಂಕ್‌ಗಳಿಂದ ತೊಂದರೆ ತಪ್ಪಿಸಿ

ಕೈಗಾರಿಕೆಗಳಿಗೆ ಬ್ಯಾಂಕ್‌ಗಳು ಸಾಕಷ್ಟು ತೊಂದರೆ ಕೊಡುತ್ತಿವೆ. ಕೊರೊನಾ ಸಂದರ್ಭದಲ್ಲಿ ಬಹುತೇಕ ಕೈಗಾರಿಕೆಗಳು ಸಮಸ್ಯೆಗೆ ಸಿಲುಕಿದ್ದರೂ ಕಷ್ಟಪಟ್ಟು ಮುಂದುವರಿಸಿ ಕೊಂಡು ಹೋಗಲಾಗುತ್ತಿದ್ದು, ಕಾರ್ಮಿಕರಿಗೂ ವೇತನ ನೀಡಲಾಗಿದೆ. ಆದರೆ, ಸಾಲ ನೀಡಿದ ಬ್ಯಾಂಕ್‌ಗಳು ಮಾತ್ರ ಸಮಯಾವಕಾಶ ನೀಡದೆ ರಿನಿವಲ್ ಕೂಡ ಮಾಡುತ್ತಿಲ್ಲ, ಹಾಗಾಗಿ 'ಓಡಿ' ಕೂಡ ನೀಡುತ್ತಿಲ್ಲ ಕಾರ್ಖಾನೆಗೆ ಸಂಬಂಧಪಟ್ಟ ದಾಖಲೆಗಳು ಕೂಡ ದೊರೆಯುತ್ತಿಲ್ಲ. ಲೀಡ್ ಬ್ಯಾಂಕ್ ನವರಿಗೆ ಸಮಸ್ಯೆ ಬಗ್ಗೆ ತಿಳಿಸಲಾಗಿದೆ.

ಉದ್ದಿಮೆದಾರರಿಗೆ ಜಾಗ ನೀಡಿ

2013ರಿಂದ ಉದ್ದಿಮೆದಾರರಿಗೆ ಜಾಗ ದೊರೆಯುತ್ತಿಲ್ಲ ಎಂದು ಕೆಐಎಡಿಬಿಗೆ ಪತ್ರ ಬರೆಯಲಾಗಿದೆ. ಈ ಕುರಿತು ಈಗಿನ ಜಿಲ್ಲಾಧಿಕಾರಿ ರಾಜೇಂದ್ರ ಅವರಿಗೆ ಮನವಿ ಮಾಡಿದ್ದರು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅದರಲ್ಲೂ ಈಗ ಬೆಂಗಳೂರು-ಮೈಸೂರು ದಶಪಥ ಕಾಮಗಾರಿಯಾದ ಬಳಿಕ ಒಂದೂವರೆ ಗಂಟೆಯಲ್ಲಿ ಮೈಸೂರು ತಲುಪಬಹುದಾಗಿದೆ. ಹೀಗಾಗಿ ಬೆಂಗಳೂರಿನಿಂದ ಮೆಟಿರಿಯಲ್ ತರುವುದು ಇಂದು ದೊಡ್ಡ ಸಮಸ್ಯೆಯಾಗಿಲ್ಲ. ಜತೆಗೆ ವಿಮಾನ ಸೇವೆ, ಡಬಲ್ ಟ್ರ್ಯಾಕ್‌ನೊಂದಿಗೆ ಉತ್ತಮ ರೈಲು ಸಂಪರ್ಕ ಚೆನ್ನಾಗಿರುವುದರಿಂದ ಕೈಗಾರಿಕೆ ಅಭಿವೃದ್ಧಿಗೆ ಸಹಕಾರಿಯಾಗಿದೆ. ಆದರೆ, ಅಧಿಕಾರಿಗಳು ಇಚ್ಛಾಶಕ್ತಿಯಿಂದ ಕಾರ್ಯನಿರ್ವಹಿಸಬೇಕು. ಬರೀ ಲ್ಯಾಂಡ್ ಕೊಟ್ಟರೆ ಆಯ್ತು ಎಂಬ ಮನೋಭಾವ ಬಿಟ್ಟು ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೆ.ಬಿ.ಲಿಂಗರಾಜು ಪರಿಚಯ


ಕೆ.ಬಿ.ಲಿಂಗರಾಜು ಅವರು. ಎಂ.ಎ.ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ್ದು, ಜಿ.ಡಿ.ಸಿಯನ್ನು ಮೈಸೂರು ಸಹಕಾರ ಯೂನಿಯನ್‌ನಲ್ಲಿ ಪಡೆದಿದ್ದಾರೆ.

ಲಿಂಗರಾಜು ಅವರು ಪ್ರಸ್ತುತ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ರಾಜಕೀಯ ಹಾಗೂ ಕೃಷಿ ಹಿನ್ನೆಲೆಯಲ್ಲಿ ಹುಟ್ಟಿದ್ದು, ತಂದೆ ಬೈರಪ್ಪ ಹಾಗೂ ತಾಯಿ ಲಕ್ಷ್ಮಮ್ಮ ಕಿರಣ್ ಇಂಡಸ್ಟ್ರೀಸ್ ಹೆಸರಿನಲ್ಲಿ ಮುಳ್ಳು ತಂತಿ ಹಾಗೂ ಚೈನ್ ಲಿಂಕ್ ತಯಾರಿಕಾ ಘಟಕವನ್ನು ಮುನ್ನಡೆಸುತ್ತಿದ್ದಾರೆ. ಸುಮಾರು 15 ವರ್ಷ ಗಳಿಂದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು ಬೆಂಗಳೂರಿನ ಕಾಸಿಯಾ ಹಾಗೂ ಎಫ್.ಕೆ.ಸಿ.ಸಿ.ಐ.ನ ಸದಸ್ಯರು. ಇವರು ಕೆಐಎಡಿಬಿ ಏರಿಯಾ ತಯಾರಕರ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಕೆ.ಬಿ.ಲಿಂಗರಾಜು ಅವರು 2022-23ರ ಎಫ್ ಕೆಸಿಸಿಐ ಬೆಂಗಳೂರು ಹಾಗೂ ಕಾಸಿಯಾ ಬೆಂಗಳೂರಿನ ಕಾರ್ಯ ಕಾರಿ ಸಮಿತಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಭಾರತ ಸೇವಾ ದಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಈಗ ಜಿಲ್ಲಾ ಸಮಿತಿ ಸದಸ್ಯರಾಗಿದ್ದಾರೆ. ಕುಂಬಾರಕೊಪ್ಪಲು ಯುವಕರ ಸಂಘದ ಅಧ್ಯಕ್ಷರು, ಕೃಷಿಕ ಸಮಾಜ ಮೈಸೂರು ತಾಲೂಕು, ಅಖಿಲ ಕರ್ನಾಟಕ ಮತದಾರರ ವೇದಿಕೆ ಗೌರವ ರಾಜ್ಯಾಧ್ಯಕ್ಷರು, ಕೆ.ಪುಟ್ಟಸ್ವಾಮಿ ಪ್ರತಿಷ್ಠಾನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕುಂಬಾರಕೊಪ್ಪಲು ಹೈಯರ್ ಪ್ರೈಮರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಗೌರವ ಅಧ್ಯಕ್ಷರು ಹಾಗೂ ಹೆಬ್ಬಾಳು ಫೌಂಡೇಶನ್ ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ನನ್ನ ಗೆಲುವಲ್ಲಿ ಮಂಡ್ಯ ಗೆಲುವಿದೆ...

–ವೆಂಕಟರಮಣೇಗೌಡ (ಸ್ಟಾರ್ ಚಂದ್ರು)

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

"ದೇಶ, ರಾಜ್ಯದಲ್ಲೇ ಮಂಡ್ಯ ರಾಜಕಾರಣ ತುಸು ಭಿನ್ನವೇ ಸರಿ. ಕ್ಷಿಪ್ರ ರಾಜಕೀಯಕ್ಕೆ, ಸದಾ ಜಿದ್ದಾಜಿದ್ದಿ ಹೋರಾಟಗಳಿಗೆ ಹೆಸರಾದ ಈ ನಾಡಿನಲ್ಲಿ ಚುನಾವಣೆ ಎಂಬುದು ಪ್ರತಿಷ್ಠೆಯ ವಿಷಯ. ಇಲ್ಲಿನ ಮತದಾರ ಪ್ರಭು ಅಚ್ಚರಿ ಫಲಿತಾಂಶ ನೀಡುವುದರಲ್ಲಿ ನಿಸ್ಸೀಮ. ಇದನ್ನು ಅನೇಕ ಬಾರಿ ಸಾಬೀತು ಮಾಡಿದ್ದಾನೆ. ಅಂಥ ಅಪರೂಪದ ರಾಜಕೀಯ ಅಖಾಡದಲ್ಲಿ ಈ ಬಾರಿಯ ಲೋಕಸಭಾ ಚುನಾವಣೆ ತೀವ್ರ ಕುತೂಹಲವನ್ನು ಹುಟ್ಟು ಹಾಕಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರಾನೇರ ಫೈಟ್ ಇರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಕಣದಲ್ಲಿದ್ದಾರೆ. ಹೊರಗಿನ ಜನರ ಪಾಲಿಗೆ ಇವರು ಅಚ್ಚರಿ ಅಭ್ಯರ್ಥಿ. ಹೊಸಮುಖ ಎಂದು ಹೇಳಲಾಗುತ್ತಿದೆಯಾದರೂ ಮಂಡ್ಯದ ಮಟ್ಟಿಗೆ ಇವರದ್ದು ಹಳೇ ಮುಖವೇ ಸರಿ. ಹಾಗಾದರೆ ಅವರು ದಿಢೀರ್ ಎಂದು ರಾಜಕಾರಣಕ್ಕೆ ಬರಲು ಕಾರಣವೇನು..? ಮಂಡ್ಯದ ಅಭಿವೃದ್ಧಿಗೆ ಯಾವ ಕನಸು ಹೊತ್ತಿದ್ದಾರೆ..? ಎಂಬಿತ್ಯಾದಿ ಪ್ರಶ್ನೆಗಳನ್ನು ತೂರಿಬಿಟ್ಟಾಗ, ಅವರ ಕಡೆಯಿಂದ ಅಷ್ಟೇ ನಿಖರ ಹಾಗೂ ಸ್ಪಷ್ಟ ಉತ್ತರಗಳು ಬಂದಿವೆ. ಕ್ಷೇತ್ರದ ಅಭಿವೃದ್ಧಿ, ಚುನಾವಣೆಯ ಸಿದ್ಧತೆ, ಪ್ರಚಾರ, ಗೆಲುವಿನ ವಿಶ್ವಾಸವನ್ನು ಸ್ಟಾರ್ ಚಂದ್ರು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ. ಅವರ ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

ಸಂದರ್ಶನ: ಎಂ.ಕೆ.ಮೋಹನ್‌ರಾಜ್

ಮೈಸೂರು ಮಿತ್ರ: *ನೀವು ಹೇಳಿ ಕೇಳಿ ವ್ಯವಹಾರಸ್ಥರು. ದಿಢೀರ್ ರಾಜಕಾರಣಕ್ಕೆ ಬರಲು ಕಾರಣವೇನು?*

ವೆಂಕಟರಮಣೇಗೌಡ: ನಮ್ಮ ಕುಟುಂಬಕ್ಕೆ ರಾಜಕಾರಣ ಹೊಸದಲ್ಲ. ನಮ್ಮ ತಂದೆಯವರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಅಧ್ಯಕ್ಷರಾಗಿದ್ದರು. ನಾನು ಸಕ್ರಿಯ ರಾಜಕಾರಣಕ್ಕೆ ಬರದೇ ಇದ್ದರೂ, ತೆರೆಯ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದೆ. ಬದಲಾದ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮತ್ತು ಜಿಲ್ಲೆಯ ಎಲ್ಲಾ ಶಾಸಕರು, ಮುಖಂಡರು, ಜಿಲ್ಲಾ ಕಾಂಗ್ರೆಸ್ ಸಮಿತಿ, ಬ್ಲಾಕ್ ಕಾಂಗ್ರೆಸ್ ಸಮಿತಿಯವರು ಸಕ್ರಿಯ ರಾಜಕಾರಣಕ್ಕೆ ಬರುವಂತೆ ಆಹ್ವಾನ ನೀಡಿದರು. ಹಾಗಾಗಿ ಚುನಾವಣಾ ಕಣಕ್ಕೆ ಧುಮುಕಿದ್ದೇನೆ. ಮಂಡ್ಯ ಜಿಲ್ಲೆ ನನ್ನ ಹುಟ್ಟೂರು, ತವರು ಕ್ಷೇತ್ರ ಹಾಗೂ ತಾಯಿ ನೆಲ ಕೂಡ. ನನ್ನ ಹುಟ್ಟಿದ ಜಿಲ್ಲೆಯ, ತಾಯ್ನೆಲದ ಸೇವೆ ಮಾಡಲು ಸಕ್ರಿಯ ರಾಜಕಾರಣಕ್ಕೆ ಬಂದಿದ್ದೇನೆ. ಪಕ್ಷ ನನ್ನನ್ನು ಗುರುತಿಸಿ ಲೋಕಸಭಾ ಟಿಕೆಟ್ ನೀಡಿದೆ. ಮಂಡ್ಯ ಜನರು ಕರುಳುಬಳ್ಳಿಯ ಸಂಬಂಧವನ್ನು ಕೈ ಹಿಡಿಯುವ ಹೃದಯವಂತಿಕೆ ಇರುವವರು. ನಮ್ಮ ಜನ ಏನೆಂಬುದು ನನಗೆ ಗೊತ್ತು. ಕೆ.ವಿ.ಶಂಕರೇಗೌಡ, ಎಚ್.ಕೆ.ವೀರಣ್ಣಗೌಡ, ಎಸ್.ಎಂ.ಕೃಷ್ಣ, ಜಿ.ಮಾದೇಗೌಡ, ಎಸ್.ಡಿ. ಜಯರಾಮ್, ಚೌಡಯ್ಯ, ಅಂಬರೀಶ್, ಚಲುವರಾಯಸ್ವಾಮಿ, ನರೇಂದ್ರಸ್ವಾಮಿ... ಹೀಗೆ ಜಿಲ್ಲೆಯ ನಾಯಕರನ್ನು ಜನ ಬೆಳೆಸಿದ್ದಾರೆ. ಹಾಗಾಗಿ ನಾನು ಮಂಡ್ಯದವನು. ಮಂಡ್ಯದ ಜನ ನನ್ನ ಕೈ ಹಿಡಿದು, ಆಶೀರ್ವಾದ ಮಾಡುತ್ತಾರೆ ಎಂಬ ವಿಶ್ವಾಸವಿದೆ.

ಮಿತ್ರ: *ನಿಮ್ಮ ಎದುರಾಳಿ ಎರಡು ಬಾರಿ ಮುಖ್ಯ ಮಂತ್ರಿಯಾಗಿದ್ದವರು. ಇಂತಹವರ ಮುಂದೆ ನಿಮ್ಮ ಚುನಾವಣೆ ಕಾರ್ಯತಂತ್ರ ಹೇಗಿರುತ್ತೆ?*

ವೆಂಕಟರಮಣೇಗೌಡ: ನಮ್ಮದು ರಾಷ್ಟ್ರೀಯ ಪಕ್ಷ. ಹಾಗಾಗಿ, ನಮಗೆ ಎದುರಾಳಿ ಯಾರು ಎಂಬುದು ಮಹತ್ವದ ಅಂಶವಲ್ಲ. ನಾನು ಎಲ್ಲಾ ವಿಷಯಗಳನ್ನು ಸವಾಲಾಗಿ ತೆಗೆದುಕೊಂಡಿದ್ದೇನೆ. ನಮ್ಮ ಪಕ್ಷದಲ್ಲಿ ಹಿರಿಯ ನಾಯಕರಿದ್ದಾರೆ. ಪಕ್ಷದ ಗ್ಯಾರಂಟಿ ಯೋಜನೆಗಳು ಪ್ರತಿ ಮನೆಯನ್ನೂ ತಲುಪಿವೆ. ಮಂಡ್ಯ ಜಿಲ್ಲೆಯಲ್ಲಿ ಕಳೆದ 10 ತಿಂಗಳಲ್ಲಿ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳು ನನಗೆ ಶ್ರೀರಕ್ಷೆಯಾಗಿವೆ. ಲೋಕಸಭಾ ಕ್ಷೇತ್ರದಲ್ಲಿ 8ರಲ್ಲಿ 7 ಜನ ಕಾಂಗ್ರೆಸ್ ಶಾಸಕರಿದ್ದಾರೆ. 3 ಜನ ಎಂಎಲ್‌ಸಿಗಳಿದ್ದಾರೆ. ಇತ್ತೀಚೆಗೆ ಹಲವು ಮುಖಂಡರು ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿದ್ದಾರೆ, ಇನ್ನೂ ಸೇರಲಿದ್ದಾರೆ. ಅಪ್ಪಾಜಿಗೌಡರು, ಮರಿತಿಬ್ಬೇಗೌಡರು, ಮಾಜಿ ಶಾಸಕ ಎಂ. ಶ್ರೀನಿವಾಸ್ ಮತ್ತಿತರರು ನಮ್ಮನ್ನು ಬೆಂಬಲಿಸಿ ಕಾಂಗ್ರೆಸ್ ಸೇರಿದ್ದಾರೆ. ದಲಿತ ಸಂಘಟನೆಗಳು, ರೈತ ಸಂಘಟನೆಗಳು ನಮಗೆ ಬೆಂಬಲ ನೀಡಿವೆ. ಅಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರ ಪಡೆ ನಮ್ಮ ಪರವಾಗಿ ಕೆಲಸ ಮಾಡುತ್ತಿದೆ. ಮುಖ್ಯವಾಗಿ ಮಂಡ್ಯ ಕಾಂಗ್ರೆಸ್‌ನ ಭದ್ರಕೋಟೆಯಾಗಿರುವುದು ನಮಗೆ ಆನೆ ಬಲವಿದ್ದಂತೆ.

ಮಿತ್ರ: *ಮಂಡ್ಯ ಅಭಿವೃದ್ಧಿಗೆ ನಿಮ್ಮ ಚಿಂತನೆಗಳೇನು..?*

ವೆಂಕಟರಮಣೇಗೌಡ: ಮಂಡ್ಯ ಜಿಲ್ಲೆಯನ್ನು ಇಂಡಿಯಾವೇ ತಿರುಗಿ ನೋಡುವಂತೆ ಅಭಿವೃದ್ಧಿ ಮಾಡಬೇಕು ಎಂಬ ಆಸೆ ಇಟ್ಟುಕೊಂಡಿದ್ದೇನೆ. ನೀರಾವರಿಗೆ ನನ್ನ ಮೊದಲ ಆದ್ಯತೆ. ನಮ್ಮ ರೈತರ ಗದ್ದೆಗಳಿಗೆ ನೀರು ಕೊಡಿಸುವುದು, ಅವರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ದೊರಕಿಸಿ ಕೊಡಬೇಕಿದೆ. ಹಾಗಾಗಿ ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲೆಯ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರ ಜತೆ ಚರ್ಚೆ ಮಾಡಿ, ಕಾರ್ಯಗತಗೊಳಿಸುತ್ತೇನೆ. ಮಂಡ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಮಾಡುವುದಾಗಿ ಈಗಾಗಲೇ ಸರ್ಕಾರ ಘೋಷಣೆ ಮಾಡಿದೆ. ಕಾವೇರಿ ನೀರಾವರಿ ನಿಗಮದಿಂದ 2 ಸಾವಿರ ಕೋಟಿ ರೂಪಾಯಿ ಹಣವನ್ನು ನಾಲೆಗಳ ಸುಧಾರಣೆಗೆ ಈಗಾಗಲೇ ಘೋಷಣೆ ಮಾಡಲಾಗಿದೆ. ಮಂಡ್ಯಕ್ಕೆ ಕೃಷಿ ವಿಶ್ವ ವಿದ್ಯಾಲಯವನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಮಂಡ್ಯದ ಮಣ್ಣಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಇಲ್ಲಿಗೆ ಕೈಗಾರಿಕೆಗಳು ಬರಬೇಕು. ಅದರಿಂದ ಇಲ್ಲಿನ ಯುವ ಜನತೆಗೆ ಉದ್ಯೋಗ ಸಿಗಬೇಕು. ರಸ್ತೆಗಳಾಗಬೇಕು. ರೈತರ ಕೃಷಿಗೆ ವಿದ್ಯುತ್ ಸಿಗಬೇಕು. ಮಹಿಳೆಯರ ಸ್ವಾವಲಂಬನೆಗೆ ಗಾರ್ಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಗೃಹ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಕೃಷಿಯನ್ನು ಆಧುನೀಕರಣಗೊಳಿಸಬೇಕು. ರೈತರಿಗೆ ತರಬೇತಿ, ಅನುದಾನ ಕೊಟ್ಟು ಬಹುಬೆಳೆ ಪದ್ಧತಿಗೆ ಒತ್ತು ನೀಡಬೇಕು ಎಂಬುದು ನನ್ನ ಯೋಜನೆಗಳಾಗಿವೆ.

ಮಿತ್ರ: *ಜೆಡಿಎಸ್–ಬಿಜೆಪಿ ಮೈತ್ರಿ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು?*

ವೆಂಕಟರಮಣೇಗೌಡ: ಕಳೆದ ಬಾರಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದವು. ಆಗ ಖುದ್ದು ಮುಖ್ಯಮಂತ್ರಿಯಾಗಿದ್ದವರ ಪುತ್ರನೇ ಅಭ್ಯರ್ಥಿಯಾಗಿದ್ದರು. ಆದರೆ, ಮಂಡ್ಯ ಜನರ ಆಯ್ಕೆಯೇ ಬೇರೆಯಾಗಿತ್ತು. ಈ ಬಾರಿಯೂ ಮಂಡ್ಯದ ಜನರ ಯೋಚನೆ ಬೇರೆ ರೀತಿಯೇ ಇದೆ. ಸ್ಥಳೀಯರಿಗೆ, ಸ್ವಾಭಿಮಾನಕ್ಕೆ ಅವರು ಒತ್ತು ನೀಡುತ್ತಾರೆ. ಜೆಡಿಎಸ್–ಬಿಜೆಪಿ ಮೈತ್ರಿಯನ್ನು ತಿರಸ್ಕರಿಸುತ್ತಾರೆ. ಜನಪರವಾದ ಕಾಂಗ್ರೆಸ್‌ಗೆ ಮನ್ನಣೆ ನೀಡುತ್ತಾರೆ ಎಂಬ ವಿಶ್ವಾಸವಿದೆ.

ಮಿತ್ರ: *ಪ್ರಚಾರ ಕಾರ್ಯ ಹೇಗೆ ನಡೆದಿದೆ. ಗೆಲುವಿನ ವಿಶ್ವಾಸ ಎಷ್ಟರ ಮಟ್ಟಿಗಿದೆ?*

ವೆಂಕಟರಮಣೇಗೌಡ: ನಾನು ನೀತಿ ಸಂಹಿತೆ ಜಾರಿಯಾಗುವುದಕ್ಕೂ ಮುಂಚೆಯೇ ಎಲ್ಲಾ 8 ವಿಧಾನಸಭಾ ಕ್ಷೇತ್ರಕ್ಕೂ ಪ್ರವಾಸ ಮಾಡಿದ್ದೇನೆ. ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಗೆಲುವಿನ ಆತ್ಮವಿಶ್ವಾಸ ಇಮ್ಮಡಿಗೊಂಡಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಎಲ್ಲಾ ಕಾಂಗ್ರೆಸ್ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರು ಒಗ್ಗಟ್ಟಿನಿಂದ ನನ್ನ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ. ಮಹಿಳೆಯರು, ದಲಿತರು, ರೈತರು, ಹಿಂದುಳಿದವರು, ಸಂಘ ಸಂಸ್ಥೆಯವರು, ಸ್ವಯಂ ಸೇವಾ ಸಂಘಟನೆಯವರು ಎಲ್ಲಾ ವರ್ಗ, ಜಾತಿಯವರು ಮಂಡ್ಯದ ಜನರೇ ಗೆಲ್ಲಬೇಕು ಎಂಬ ಸ್ವಾಭಿಮಾನದ ಧ್ವನಿಯನ್ನು ಎತ್ತಿ ಹಿಡಿಯುತ್ತಿರುವುದು ನನಗೆ ಆನೆ ಬಲ ಬಂದಂತಾಗಿದೆ. ನನಗೆ ಈಗಲೇ ಗೆಲುವಿನ ಖುಷಿ ಇದೆ.

ಮಿತ್ರ: *ಸಾಮಾನ್ಯವಾಗಿ ಅಭ್ಯರ್ಥಿಯ ಹೆಸರು ಘೋಷಣೆಯಾದಾಗ ಅಸಮಾಧಾನಗಳು ಇದ್ದೇ ಇರುತ್ತವೆ. ಆದರೆ, ನಿಮ್ಮ ಹೆಸರು ಘೋಷಣೆಯಾದಾಗ ಯಾರೂ ಸಹ ಆಕ್ಷೇಪಣೆ ಎತ್ತಲಿಲ್ಲ. ಅದರರ್ಥ ಸರ್ವಸಮ್ಮತ ಅಭ್ಯರ್ಥಿಯಾಗಿದ್ದೀರಿ?*

ವೆಂಕಟರಮಣೇಗೌಡ: ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಎಲ್ಲಾ ಕಾಂಗ್ರೆಸ್ ಶಾಸಕರು, ಎಂಎಲ್‌ಸಿಗಳು, ಮಾಜಿ ಶಾಸಕರು, ಜಿಲ್ಲಾ, ಬ್ಲಾಕ್ ಕಾಂಗ್ರೆಸ್ ಮುಖಂಡರದ್ದು ಕಾಂಗ್ರೆಸ್ ಗೆಲ್ಲಿಸಬೇಕು ಎಂಬ ಒಂದೇ ಗುರಿ. ಇದರಿಂದ ನನ್ನನ್ನು ಅಭ್ಯರ್ಥಿಯಾಗಿ ಮಾಡಿದರು. ನಮ್ಮಲ್ಲಿ ಒಗ್ಗಟ್ಟಿದೆ. ಅದೇ ಒಗ್ಗಟ್ಟಿನ ಮಂತ್ರದಡಿ ಇಂದು ನನ್ನ ಪರವಾಗಿ ಎಲ್ಲರೂ ಕೆಲಸ ಮಾಡುತ್ತಿದ್ದಾರೆ.

ಮಿತ್ರ: *ನಿಮ್ಮ ಗೆಲುವಿಗೆ ಪೂರಕವಾದ ಅಂಶಗಳೇನು?*

ವೆಂಕಟರಮಣೇಗೌಡ: ನಮ್ಮ ಕ್ಷೇತ್ರದಲ್ಲಿ ಮಹಿಳೆಯರೇ ನಿರ್ಣಾಯಕ. ನನ್ನ ಗೆಲುವಿಗೆ ಗ್ಯಾರಂಟಿಗಳೇ ಆಧಾರ. ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು, ಕ್ಷೇತ್ರದ ಮನೆ, ಮನೆ ತಲುಪಿವೆ. ಪ್ರತಿ ಕುಟುಂಬ ಪ್ರತಿ ತಿಂಗಳು ಸುಮಾರು 5 ಸಾವಿರ ರೂ. ಪ್ರಯೋಜನವನ್ನು ಯಾವುದೇ ಮಧ್ಯವರ್ತಿಯಿಲ್ಲದೆ ಗೃಹಲಕ್ಷ್ಮೀ, ಗೃಹ ಜ್ಯೋತಿ, ಶಕ್ತಿ, ಅನ್ನ ಭಾಗ್ಯ ಹಾಗೂ ಯುವ ನಿಧಿ ಯೋಜನೆಗಳಿಂದ ನೇರವಾಗಿ ಪಡೆಯುತ್ತಿವೆ. ಅಧಿಕಾರಕ್ಕೆ ಬಂದು ಒಂಭತ್ತು ತಿಂಗಳಲ್ಲಿ ಕೊಟ್ಟ ಎಲ್ಲಾ ಆಶ್ವಾಸನೆಗಳನ್ನು ಈಡೇರಿಸಿದ ಸರ್ಕಾರವೇನಾದರೂ ಇದ್ದರೆ ಅದು ಸನ್ಮಾನ್ಯ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾತ್ರ. ಇನ್ನೊಂದೆಡೆ ಎದುರಾಳಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿದು 10 ವರ್ಷಗಳಲ್ಲಿ ಕೊಟ್ಟ ಮಾತನ್ನು ಈಡೇರಿಸಿಲ್ಲ. ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುತ್ತೇವೆ ಎಂದಿದ್ದರು. ಉದ್ಯೋಗಗಳನ್ನು ಸೃಷ್ಟಿ ಮಾಡಿದರೇ? ಬದಲಾಗಿ ಕೋಟ್ಯಾಂತರ ಉದ್ಯೋಗಗಳು ನಷ್ಟವಾಗಿವೆ. ಶೇ. 80ರಷ್ಟು ಯುವಕರು ನಿರುದ್ಯೋಗಿಗಳಿದ್ದಾರೆ ಎಂದು ಸಮೀಕ್ಷೆಯೊಂದು ಹೇಳುತ್ತದೆ. ಕೇಂದ್ರ ಸರ್ಕಾರ ಜನ ವಿರೋಧಿಯಾಗಿದೆ. ರಾಜ್ಯದಲ್ಲಿ ಭೀಕರ ಬರ ಇದ್ದರೂ ನಯಾ ಪೈಸೆ ನೆರವು ನೀಡಿಲ್ಲ. ಕರ್ನಾಟಕಕ್ಕೆ ನ್ಯಾಯಯುತವಾಗಿ ಬರಬೇಕಾದ ತೆರಿಗೆ ಪಾಲು ನೀಡಿಲ್ಲ. ರೈತರ ಆದಾಯವನ್ನು ದ್ವಿಗುಣ ಮಾಡುತ್ತೇವೆ ಎಂದಿದ್ದರು. ಅದನ್ನೂ ಮಾಡಿಲ್ಲ. ಬದಲಾಗಿ ಗ್ಯಾಸ್, ಪೆಟ್ರೋಲ್, ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಈಗ ಜನರ ಬದುಕು ದುಸ್ತರವಾಗಿದೆ.

ಮಿತ್ರ: *ಮಂಡ್ಯ ಜಿಲ್ಲೆಗೆ ಪಂಚ ಗ್ಯಾರಂಟಿ ಪ್ರಯೋಜನ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದಲ್ಲಿ ತಲುಪಿದೆಯೇ?*

ವೆಂಕಟರಮಣೇಗೌಡ: ಕಾಂಗ್ರೆಸ್ ಪಕ್ಷದ ಐದು ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನರಿಗೆ ಭಾರಿ ಪ್ರಯೋಜನ ಆಗಿದೆ. ಅಲ್ಲದೆ, ಮಂಡ್ಯ ಜಿಲ್ಲೆಯಲ್ಲಿಯೇ ಲಕ್ಷಾಂತರ ಮಂದಿ ಇದರ ಪ್ರಯೋಜನವನ್ನು ಪ್ರತಿ ತಿಂಗಳು ಪಡೆದುಕೊಳ್ಳುತ್ತಿದ್ದಾರೆ. ಶಕ್ತಿ ಯೋಜನೆಯಡಿ ಇದುವರೆಗೆ ಮಹಿಳೆಯರು 5 ಕೋಟಿ 24 ಲಕ್ಷದ 50 ಸಾವಿರ ಬಾರಿ ಪ್ರಯಾಣ ಮಾಡಿದ್ದಾರೆ. ಇದರ ಒಟ್ಟಾರೆ ಖರ್ಚು 130 ಕೋಟಿ ರೂಪಾಯಿ. ಗೃಹಜ್ಯೋತಿಯಡಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 5.5 ಲಕ್ಷ ಮನೆಗಳಲ್ಲಿ 4.70 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ.

ಅನ್ನಭಾಗ್ಯದಡಿ ಮಂಡ್ಯ ಜಿಲ್ಲೆಯಲ್ಲಿ 4.38 ಲಕ್ಷ ಪಡಿತರ ಕಾರ್ಡ್‌ದಾರರಿಗೆ ಪ್ರತಿ ತಿಂಗಳು ಪ್ರತಿಯೊಬ್ಬ ಕಾರ್ಡ್‌ದಾರರ ಖಾತೆಗಳಿಗೆ 170 ರೂಪಾಯಿಯಂತೆ ಈವರೆಗೆ 137 ಕೋಟಿ ರೂ. ಜಮೆಯಾಗಿದೆ. ಯುವ ನಿಧಿಯಡಿ ವಿದ್ಯಾವಂತ ನಿರುದ್ಯೋಗಿ 1,561 ಪದವೀಧರರಿಗೆ ತಲಾ 3,000/1,500 ರೂ. ನೀಡಲಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು 4.49 ಲಕ್ಷ ಮನೆಯ ಯಜಮಾನಿಯರಿಗೆ ಮಾಸಿಕವಾಗಿ ತಲಾ 2,000 ರೂಪಾಯಿಯಂತೆ ಈವರೆಗೆ 512 ಕೋಟಿ ರೂಪಾಯಿ ಯನ್ನು ಜಮೆ ಮಾಡಲಾಗಿದೆ.

ಮಿತ್ರ: *ಕೊನೆಯದಾಗಿ ಮತದಾರರಿಗೆ ನೀವು ಹೇಳುವ ಕಿವಿಮಾತೇನು?*

ವೆಂಕಟರಮಣೇಗೌಡ: ನಾನು ಉದ್ಯಮಿ. ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದೇನೆ. ನನ್ನ ಸಂಸ್ಥೆಯಲ್ಲಿ ಸುಮಾರು 5 ಸಾವಿರದಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಎಲ್ಲರ ಸಂಪರ್ಕ ಇದೆ. ಸಮಾಜಕ್ಕೆ ಉಪಯೋಗವಾಗುವ ಕೆಲಸಗಳನ್ನು ಮಾಡಿದ್ದೇನೆ. ಇನ್ನಷ್ಟು ಜನಪರ ಕೆಲಸ ಮಾಡಬೇಕು. ಜಿಲ್ಲೆಯ ಅಭಿವೃದ್ಧಿಯಾಗಬೇಕೆಂದರೆ ಅದಕ್ಕೊಂದು ಶಕ್ತಿ ಬೇಕು ಎಂದು ರಾಜಕೀಯಕ್ಕೆ ಬಂದಿದ್ದೇನೆ. ನನ್ನನ್ನು ಬೆಂಬಲಿಸಿ ಎಂದು ಮಂಡ್ಯದ ಜನರಲ್ಲಿ ಕೈ ಮುಗಿದು ಪ್ರಾರ್ಥಿಸುತ್ತೇನೆ. ಎದುರಾಳಿಯ ಪ್ರಭಾವ, ವರ್ಚಸ್ಸು ನನಗೆ ಮುಖ್ಯವಲ್ಲ. ನನ್ನ ಗೆಲುವು ಮಂಡ್ಯ ರೈತರ ಗೆಲುವು. ಮಂಡ್ಯ ಜನರ ಸ್ವಾಭಿಮಾನದ ಗೆಲುವು. ಜನಪರ ಕಾಳಜಿಯನ್ನು ಇಟ್ಟುಕೊಂಡು ಬಂದಿದ್ದೇನೆ. ಮಂಡ್ಯ ಜನ ಯಾವಾಗಲೂ ಸ್ವಾಭಿಮಾನವನ್ನು ಎತ್ತಿ ಹಿಡಿದಿದ್ದಾರೆ. ಈ ಬಾರಿಯೂ ಎತ್ತಿ ಹಿಡಿಯುತ್ತಾರೆ ಎಂಬ ವಿಶ್ವಾಸ ನನಗಿದೆ. ಜನಸೇವೆ ಮಾಡಬೇಕು, ತಾಯ್ನಾಡಿನ ಋಣ ತೀರಿಸಬೇಕು ಎಂದು ಆಸೆ ಇಟ್ಟುಕೊಂಡು ಬಂದಿದ್ದೇನೆ. ವಿದ್ಯಾರ್ಥಿಗಳಿಗೆ ಉತ್ತಮವಾದ ಗ್ರಂಥಾಲಯ ಬೇಕು, ಸ್ಪರ್ಧಾತ್ಮಕ ಪರೀಕ್ಷೆಗೆ ಓದುವವರಿಗೆ ಅಗತ್ಯ ಪುಸ್ತಕಗಳನ್ನು ಒದಗಿಸಬೇಕಿದೆ. ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬ ಕನಸನ್ನು ಕಟ್ಟಿಕೊಂಡಿದ್ದೇನೆ. ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಸ್ವಾಭಿಮಾನಿ ಜಿಲ್ಲೆಯ ಜನರಲ್ಲಿ ಕೇಳಿಕೊಳ್ಳುತ್ತೇನೆ.



ತೃತೀಯ ಲಿಂಗಿಗಳಿಗೆ ಮತದಾನ ರಹದಾರಿ

● ಗಣೇಶ್.ಎ



"ನ್ಯಾಯಾಲಯದ ಆದೇಶದ ಪ್ರಕಾರ ತೃತೀಯಲಿಂಗಿಗಳು ತಮ್ಮ ದೇಹದಲ್ಲಾಗುವ ಬದಲಾವಣೆಯನ್ನು ತಿಳಿಸಿ, ತೃತೀಯಲಿಂಗಿಗಳ ದೃಢೀಕರಣ ಪತ್ರ ಪಡೆಯಲು ಅವಕಾಶವಿದೆ. ಈವರೆಗೂ ದೃಢೀಕರಣ ಪತ್ರ ನೀಡುವುದರಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿರುವ ನ್ಯಾಯಾಧೀಶರಾದ ಜಿ.ದಿನೇಶ್ ಅವರು ತೃತೀಯಲಿಂಗಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸಿ, ನಂತರ ಅದನ್ನು ಅನುಮೋದನೆಗೆ ನನ್ನ ಬಳಿ ಕಳುಹಿಸುತ್ತಾರೆ. ಈವರೆಗೂ ನನಗೆ ಶಿಫಾರಸ್ಸಾದ ದಾಖಲೆ ಅನ್ವಯ ತೃತೀಯಲಿಂಗಿಗಳಿಗೆ ದೃಢೀಕರಣ ಪತ್ರ ಮಂಜೂರು ಮಾಡಲಾಗಿದೆ. –ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ



ಸಮಾಜದಲ್ಲಿ ತೃತೀಯಲಿಂಗಿಗಳು ನ್ಯಾಯಾಧೀಶರಾಗಿದ್ದಾರೆ, ವಕೀಲರಾಗಿದ್ದಾರೆ, ಐಎಎಸ್ ಅಧಿಕಾರಿ, ಜನಪ್ರತಿನಿಧಿ, ಶಿಕ್ಷಕಿ ಸೇರಿದಂತೆ ಎಲ್ಲಾ ಸ್ಥಾನಮಾನ, ಹುದ್ದೆಗಳನ್ನು ಅಲಂಕರಿಸಿದ್ದಾರೆ. ಆದರೆ, ಚುನಾವಣೆಯಲ್ಲಿ ಮತದಾನದ ಹಕ್ಕು ಪಡೆಯುವಲ್ಲಿ ಮಾತ್ರ ತಾರತಮ್ಯವಾಗುತ್ತಿದೆ.

ಹೌದು, ಹುಟ್ಟುತ್ತ ಹೆಣ್ಣು ಅಥವಾ ಗಂಡಾಗಿ ಜನಿಸಿ, ನಂತರ ದೇಹದಲ್ಲಾಗುವ ಹಾರ್ಮೋನ್‌ಗಳ ಬದಲಾವಣೆಯಿಂದ ಅವರ ಇಚ್ಛೆಯಂತೆ ಗಂಡು ಹೆಣ್ಣಾಗಿ, ಹೆಣ್ಣು ಗಂಡಾಗಿ ಬದಲಾಗುತ್ತಾರೆ. ಸಮಾಜದಲ್ಲಿ ಇವರನ್ನು ಅವಮಾನ ಮಾಡುವುದರಿಂದ ಅವರು ಸಮಾಜದ ಮುಖ್ಯವಾಹಿನಿಯಲ್ಲಿ ಎಲ್ಲರಂತೆ ಬಾಳುವುದು ಇನ್ನೂ ಸಾಧ್ಯವಾಗಿಲ್ಲ. ಇದರಲ್ಲಿ ಅವರಲ್ಲಿನ ಕೀಳರಿಮೆ ಜೊತೆಗೆ ಸಮಾಜದ ತಾರತಮ್ಯದಿಂದಲೂ ಕಾರಣವಿರಬಹುದು ಹಾಗಾಗಿ ಅವರು ಭಿಕ್ಷಾಟನೆ ಮಾಡಿ ಅಥವಾ ಜೀವನ ಸಾಗಿಸುವ ದಯಾನೀಯ ಪರಿಸ್ಥಿತಿ ಅನಿವಾರ್ಯವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೃತೀಯ ಲಿಂಗಿಗಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಆದರೆ ಅದನ್ನು ಪಡೆದುಕೊಳ್ಳಲು ಹೇಗೆ ಅನೇಕ ಕಾನೂನಾತ್ಮಕ ಮತ್ತು ತಾಂತ್ರಿಕ ಸಮಸ್ಯೆಗಳಿವೆಯೋ ಹಾಗೆಯೇ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಲು ತೃತೀಯ ಲಿಂಗಿಗಳಿಗೆ ಸಾಕಷ್ಟು ಸಮಸ್ಯೆಗಳಿವೆಯಂತೆ.

2024ರ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟು 20,92,222 ಅರ್ಹ ಮತದಾರರಿದ್ದು, ಅವರಲ್ಲಿ ಪುರುಷರು 10,26,324 ಮತ್ತು ಮಹಿಳೆಯರು 10,65,714 ಹಾಗೂ 184 ಮಂದಿ ತೃತೀಯಲಿಂಗಿಗಳು ನೋಂದಣಿ ಮಾಡಿಕೊಂಡಿದ್ದಾರೆ.


ಆದರೆ, 2019ರ ಲೋಕಸಭಾ ಚುನಾವಣೆಯಲ್ಲಿ 20,86,413 ಮತದಾರರಲ್ಲಿ 14,68,695 ಮಂದಿ ಮತ ಚಲಾವಣೆ ಮಾಡಿದ್ದಾರೆ. ಆದರೆ, ಇದರಲ್ಲಿ 153 ಒಟ್ಟು ಮಂದಿ ತೃತೀಯಲಿಂಗಿಗಳು ನೋಂದಣಿ ಮಾಡಿಕೊಂಡಿದ್ದರೂ ಕೇವಲ 19 ಮಂದಿ ಮಾತ್ರ ಮತದಾನ ಮಾಡಿದ್ದಾರೆ.


2023ರ ವಿಧಾನಸಭಾ ಚುನಾವಣೆಯಲ್ಲಿ 26,55,984 ಮತದಾರರು ನೋಂದಣಿ ಮಾಡಿಕೊಂಡಿದ್ದು, 19,95,152 ಮಂದಿ ಮತ ಚಲಾಯಿಸಿದ್ದಾರೆ. ಈ ಚುನಾವಣೆಯಲ್ಲೂ 226 ಮಂದಿ ತೃತೀಯಲಿಂಗಿಗಳು ನೋಂದಣಿ ಮಾಡಿಕೊಂಡು 49 ಮಂದಿ ಮಾತ್ರ ತಮ್ಮ ಹಕ್ಕು ಚಲಾಯಿಸಿದ್ದಾರೆ. ಹೀಗೆ ಪ್ರತಿ ಚುನಾವಣೆಯಲ್ಲಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಮತದಾನ ಮಾಡಲು ಮಾತ್ರ ಹಿಂಜರಿಯುತ್ತಾರೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಮೊದಲ ಬಾರಿ ತಾವು ಮತದಾನ ಮಾಡಿದ್ದು, ನನಗೆ ಈ ಮೊದಲು ಆಧಾರ್ ಕಾರ್ಡ್, ವೋಟರ್ ಐಡಿ ಇದ್ದರೂ ಅದರಲ್ಲಿ ಪುರುಷ ಎಂದು ನಮೂದಿಸಿದ ಕಾರಣ ಮತದಾನ ಮಾಡಲು ಸಮಸ್ಯೆ ಉಂಟಾಗಿತ್ತು. 5 ವರ್ಷಗಳಿಂದೀಚೆಗೆ ನಮ್ಮನ್ನು ತೃತೀಯಲಿಂಗಿಗಳೆಂದು ಗುರುತಿಸಲಾಯಿತು. ತೃತೀಯಲಿಂಗಿಗಳೆಂದು ವೋಟರ್ ಐಡಿ ನೀಡಿದ್ದಾರೆ ಎಂದು ತೃತೀಯ ಲಿಂಗಿಗಳ ಸಂಘದ ಮುಖ್ಯಸ್ಥರಾದ ಪ್ರಣತಿ ಪ್ರಕಾಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ 800ಕ್ಕೂ ಅಧಿಕ ತೃತೀಯಲಿಂಗಿಗಳಿದ್ದು, ಅವರುಗಳ ಶಾಲಾ ಸೇರಿದಂತೆ ವಿವಿಧ ದಾಖಲೆಗಳಲ್ಲೆಲ್ಲಾ ಪುರುಷ, ಮಹಿಳೆ ಎಂದು ನಮೂದಾಗಿರುವುದರಿಂದ ಅವರು ಆಧಾರ್ ಕಾರ್ಡ್ ಪಡೆದುಕೊಳ್ಳಲು ಕಷ್ಟಕರವಾಗಿದೆ. ಆದರೆ, ಜಿಲ್ಲಾಧಿಕಾರಿಗಳು ತೃತೀಯಲಿಂಗಿಗಳು ಎಂದು ದೃಢೀಕರಣ ಪತ್ರ ನೀಡಿದರೆ, ಅದನ್ನು ತೆಗೆದುಕೊಂಡು ಮತದಾರರ ಪಟ್ಟಿಯಲ್ಲಿ ನಾವು ಸೇರ್ಪಡೆಯಾಗಬಹುದು. ಆದರೆ, ಈ ಪ್ರಕ್ರಿಯೆಯಲ್ಲಿ ಅನೇಕ ತೃತೀಯಲಿಂಗಿಗಳು ಮುಂದಾಗಿದ್ದು, ಈ ಬಾರಿ ಚುನಾವಣೆಯಲ್ಲಿ ತೃತೀಯಲಿಂಗಿಗಳ ಮತದಾನ ಪ್ರಮಾಣ ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.

ಮೊದಲ ಬಾರಿ ಮತದಾನ ಮಾಡುವವರೆಗೂ ತುಂಬಾ ಅಂಜಿಕೆ ಇತ್ತು. ಈಗ ಎಲ್ಲರಂತೆ ನಾವೂ ನಮ್ಮ ಹಕ್ಕನ್ನು ಚಲಾಯಿಸಬಹುದು. ನಮ್ಮ ಸಮುದಾಯದ ಎಲ್ಲರೂ ತಪ್ಪದೇ ವೋಟ್ ಮಾಡುವಂತೆ ಪ್ರಣತಿ ಪ್ರಕಾಶ್ ಕರೆ ನೀಡಿದ್ದಾರೆ.


ಮೈಸೂರು ಮಿತ್ರ
ಸ್ಥಾಪನೆ : 1980
45
ಅತ್ಯುತ್ತಮ ಪತ್ರಿಕೋದ್ಯಮ
ಬೆಳಗಿನ ದಿನಪತ್ರಿಕೆ
ಮೈಸೂರು ಮಿತ್ರನಿಗೆ
44ನೇ ವಾರ್ಷಿಕೋತ್ಸವದ
ಶುಭಾಶಯಗಳು
ಶುಭಕೋರುವವರು
ಸಿ.ಪುಟ್ಟರಂಗಶೆಟ್ಟಿ
ಮಾಜಿ ಸಚಿವರು, ಹಾಲಿ ಶಾಸಕರು
ಹಾಗೂ ಅಧ್ಯಕ್ಷರು, ಎಂಎಸ್ಐಎಲ್
ಚಾಮರಾಜನಗರ


ಮೈಸೂರು ಮಿತ್ರ
45
ಮೈಸೂರು, ಮಂಡ್ಯ, ಕೊಡಗು, ಹಾಸನ ಮತ್ತು ಚಾಮರಾಜನಗರ
ಸೇರಿದಂತೆ ಐದು ಜಿಲ್ಲೆಗಳಲ್ಲಿ ಹೆಚ್ಚು ಪ್ರಸರಣ ಹೊಂದಿರುವ
ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
45ನೇ
ವರ್ಷದ
ವಾರ್ಷಿಕೋತ್ಸವದ
ಶುಭಾಶಯಗಳು
ಆರ್.ಲಿಂಗಪ್ಪ
ಬಿ.ಎ., ಎಲ್ಎಲ್ಬಿ
ಮಾಜಿ ಮಹಾಪೌರರು,
ಮೈಸೂರು ಮಹಾನಗರ ಪಾಲಿಕೆ,
ಮೈಸೂರು


ಜೈ ಜವಾನ್
ಜೈ ಕಿಸಾನ್
ಕರ್ನಾಟಕ ಪ್ರಜಾ ಪಾರ್ಟಿ
(ರೈತ ಪರ್ವ)
ಮೈಸೂರು ಮಿತ್ರ
ಸ್ಥಾಪನೆ : 1980
45
ಅತ್ಯುತ್ತಮ ಪತ್ರಿಕೋದ್ಯಮ
ಡಾ|| ಬಿ.ಶಿವಣ್ಣ
ನ್ಯಾಯವಾದಿ &
ಸಂಸ್ಥಾಪಕ ರಾಜ್ಯಾಧ್ಯಕ್ಷರು,
ಕೆ.ವಿ ಮೋಹನ್ ದಾಸ್
ರಾಜ್ಯ ಉಪಾಧ್ಯಕ್ಷರು, ಕೆಪಿಪಿ (ರೈತಪರ್ವ)
ಪತ್ರಿಕಾ ಮಾಧ್ಯಮದಲ್ಲಿ ಪ್ರಕಾಶಿಸುತ್ತಿರುವ
ನಮ್ಮ 'ಮೈಸೂರು ಮಿತ್ರ' ನಿಗೆ ವಾರ್ಷಿಕೋತ್ಸವದ ಶುಭಾಶಯಗಳು
" ನಮ್ಮ ನಡೆ ಸದೃಡರಾಷ್ಟ್ರದೆಡೆಗೆ "



ಗ್ಯಾರಂಟಿಗಳೇ 'ಕೈ' ಹಿಡಿಯೋದು ಗ್ಯಾರಂಟಿ

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ದೇಶದಲ್ಲೇ ವಿಶೇಷ ಮಹತ್ವವಿದೆ. ಒಂದೆಡೆ ಮೈಸೂರು ಸಾಂಸ್ಕೃತಿಕ ರಾಜಧಾನಿ, ಮತ್ತೊಂದೆಡೆ ದೇಶದ ದಕ್ಷಿಣ ಕಾಶ್ಮೀರ, ಕಾಫಿ ಬಟ್ಟಲು ಖ್ಯಾತಿಯ ನೈಸರ್ಗಿಕ ನೆಮ್ಮದಿ ತಾಣ ಕೊಡಗು. ಇವೆರಡು ವಿಶ್ವ ಖ್ಯಾತಿಯ ಪ್ರವಾಸಿ ತಾಣಗಳು. ಇಲ್ಲಿನ ಜನರು ಪ್ರಬುದ್ಧರು, ಇಂತಹ ನಿಸರ್ಗ ಸ್ನೇಹಿ ಪ್ರದೇಶಗಳಲ್ಲಿ ಲೋಕಸಭಾ ಚುನಾವಣಾ ಕಾವು ಜೋರಾಗಿಯೇ ಇದೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಎಂ.ಲಕ್ಷ್ಮಣ್ ಸ್ಪರ್ಧೆಯಲ್ಲಿದ್ದು, ಅವರು ತಮ್ಮ ಸ್ಪರ್ಧೆ, ಪ್ರಚಾರದ ತಂತ್ರಗಳನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.





ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಮೈಸೂರು ನಗರದ ಹಲವೆಡೆ ಪಕ್ಷದ ಮುಖಂಡರೊಂದಿಗೆ ಬಿರುಸಿನ ಮತಯಾಚನೆಯಲ್ಲಿ ಪಾಲ್ಗೊಂಡಿರುವುದು.

● ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: ಅನೇಕ ಆಕಾಂಕ್ಷಿಗಳ ನಡುವೆ ನಿಮಗೆ ಟಿಕೆಟ್ ಸಿಕ್ಕಿದ್ದಾದರೂ ಹೇಗೆ?

ಎಂ.ಲಕ್ಷ್ಮಣ: ನಾನು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ನಮ್ಮ ಪಕ್ಷ ಹಾಗೂ ನಾಯಕರ ಪರವಾಗಿ ನಿಂತಿದ್ದೇನೆ. ಪ್ರತಿಹಂತದಲ್ಲಿ ಅವರನ್ನು ಸಮರ್ಥಿಸಿಕೊಂಡಿದ್ದೇನೆ. ಬಿಜೆಪಿ ಹಾಗೂ ಜೆಡಿಎಸ್ ಆರೋಪ ಹಾಗೂ ಟೀಕೆಗಳಿಗೆ ತಕ್ಕ ಪ್ರತ್ಯುತ್ತರ ನೀಡುತ್ತಾ ಬಂದಿದ್ದೇನೆ. ಚುನಾವಣೆ ಎಂದ ಮೇಲೆ ಹಲವು ಆಕಾಂಕ್ಷಿಗಳಿರುವುದು ಸಹಜ. ಈ ಬಾರಿ ಅವಕಾಶ ಕೋರಿ ಸಲ್ಲಿಕೆಯಾಗಿದ್ದ ಇಪ್ಪತ್ತು ಅರ್ಜಿಗಳಲ್ಲಿ ಅಂತಿಮವಾಗಿ ನಾನು ಮತ್ತು ಬಿ.ಜೆ.ವಿಜಯ್‌ಕುಮಾರ್ ಹೆಸರನ್ನು ಅಂತಿಮಗೊಳಿಸಲಾಗಿತ್ತು. ಬಿ.ಜೆ.ವಿಜಯ್ ಕುಮಾರ್ ಅವರನ್ನು ಮನವೊಲಿಸಿ, ಅವರು ಸಹಮತ ವ್ಯಕ್ತಪಡಿಸಿದ ನಂತರ ನನ್ನನ್ನು ಅಭ್ಯರ್ಥಿ ಮಾಡಿದರು. ವಿಜಯ್‌ಕುಮಾರ್ ಸದಾ ನಮ್ಮೊಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಮುಂದಿನ ದಿನಗಳಲ್ಲಿ ಪಕ್ಷ ಉನ್ನತ ಸ್ಥಾನ ಕಲ್ಪಿಸಲಿದೆ. ನಿಷ್ಠಾವಂತ ಕಾರ್ಯಕರ್ತ ಎಂದು ಪಕ್ಷ ನನಗೆ ಅವಕಾಶ ಮಾಡಿಕೊಟ್ಟಿದೆ. ಜನಸಾಮಾನ್ಯರಲ್ಲಿ ಮನವಿ ಮಾಡೋದು ಇಷ್ಟೇನೆ. ದಯಮಾಡಿ ಸಾಮಾನ್ಯ ಪ್ರಜೆಗೆ, ನಿಮ್ಮ ಪರವಾಗಿ ಧ್ವನಿ ಎತ್ತುವ ವ್ಯಕ್ತಿಗೆ ಅವಕಾಶ ಮಾಡಿಕೊಡಿ.

ಮಿತ್ರ: ಈವರೆಗಿನ ಕ್ಷೇತ್ರ ಪ್ರವಾಸದಲ್ಲಿ ಜನರ ಪ್ರತಿಕ್ರಿಯೆ ಹೇಗಿದೆ?.

ಲಕ್ಷ್ಮಣ: ಸಹಜವಾಗಿ ಕಾರ್ಯಕರ್ತರು, ಜನಸಾಮಾನ್ಯರನ್ನು ಭೇಟಿ ಮಾಡಿದಾಗ ನಿಮಗೆ ಮತ ಹಾಕೋದಿಲ್ಲ ಎಂದು ಯಾರೂ ಹೇಳೋಕಾಗಲ್ಲ. ಜನರ ಪ್ರತಿಕ್ರಿಯೆ ತುಂಬಾ ಚೆನ್ನಾಗಿದೆ. ಪ್ರಮುಖವಾಗಿ ಗ್ಯಾರಂಟಿ ಕಾರ್ಯಕ್ರಮಗಳಿಂದ ತುಂಬಾ ಜನರಿಗೆ ಅನುಕೂಲವಾಗಿದೆ. ಶೇ.99ರಷ್ಟು ಫಲಾನುಭವಿಗಳು ಕಾಂಗ್ರೆಸ್‌ಗೆ ಮತ ನೀಡುತ್ತಾರೆಂಬ ವಿಶ್ವಾಸವಿದೆ. ಒಟ್ಟಾರೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಕಾಂಗ್ರೆಸ್ ಗೆಲುವಿಗೆ ಪೂರಕವಾಗಿದೆ.

ಮಿತ್ರ: ನಿರಂತರವಾಗಿ ಪ್ರತಾಪ್ ಸಿಂಹ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ನಿಮಗೆ, ಅವರೇ ಅಭ್ಯರ್ಥಿಯಾಗಬಹುದು ಎಂಬ ನಿರೀಕ್ಷೆ ಇತ್ತೇ?

ಲಕ್ಷ್ಮಣ: ಪ್ರತಾಪ್ ಸಿಂಹರ ವಿಚಾರದಲ್ಲಿ ವೈಯಕ್ತಿಕವಾಗಿ ವಿರೋಧವಿಲ್ಲ. ನಾನೆಂದೂ ವೈಯಕ್ತಿಕವಾಗಿ ನಿಂದನೆ ಮಾಡುವ ಕೆಲಸ ಮಾಡಿಲ್ಲ. ರಾಜಕೀಯವಾಗಿ, ವೈಚಾರಿಕವಾಗಿ ಮಾತನಾಡಿದ್ದೇನಷ್ಟೇ. ರಾಜ್ಯ ಸರ್ಕಾರದ ಕೆಲವು ಯೋಜನೆಗಳನ್ನು ನಾನೇ ತಂದಿದ್ದು ಎಂದು ಹೇಳಿಕೊಂಡಿದ್ದಕ್ಕೆ ಪ್ರತಿಕ್ರಿಯೆ ನೀಡಿದ್ದೇನೆ. ಅದು ಸುಳ್ಳು ಎಂದು ದಾಖಲೆ ಸಹಿತ ತಿಳಿಸಿದ್ದೇನೆ. ಪ್ರತಾಪ ಸಿಂಹ ಈಗಲೂ ಒಳ್ಳೆಯ ಸ್ನೇಹಿತ. ಹೋಟೆಲ್‌ನಲ್ಲಿ ಸಿಕ್ಕಾಗ ಆತ್ಮೀಯವಾಗಿ ಮಾತನಾಡಿ, ಕಾಫಿ ಕುಡಿದು ಬರುತ್ತೇವೆ. ಹಿಂದಿನ ಎರಡು ಚುನಾವಣೆ ಸಂದರ್ಭದಲ್ಲಿ ಅವರನ್ನು ಬೈಯ್ಯುವುದು ಅಥವಾ ನಿಂದಿಸುವುದನ್ನು ಮಾಡಿಲ್ಲ. ನೀತಿ ಸಂಹಿತೆ ಜಾರಿಯಾದ ಕ್ಷಣದಿಂದ ಅವರ ವಿರುದ್ಧ ಸುದ್ದಿಗೋಷ್ಠಿಯನ್ನೂ ಮಾಡಿಲ್ಲ. ಹಿಂದಿನ ಎರಡು ಚುನಾವಣೆ ಸಂದರ್ಭದಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡಿಲ್ಲ. ಅವರ ವಿರುದ್ಧ ಯಾವುದೇ ಆಲೋಚನೆಗಳಿಲ್ಲ. ವೈಯಕ್ತಿಕ ದ್ವೇಷವೂ ಇಲ್ಲ. ಹಾಲಿ ಸಂಸದ ಎಂಬ ಕಾರಣಕ್ಕೆ ಸಹಜವಾಗಿ ಅವರೇ ಅಭ್ಯರ್ಥಿಯಾಗಬಹುದು ಅಂದುಕೊಂಡಿದ್ದೆವು. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಸೇರಿದಂತೆ ಹಲವು ನಾಯಕರು ಪ್ರತಾಪ್ ಸಿಂಹಗೆ ಫೈಟ್ ಕೊಡೋಕೆ ಲಕ್ಷ್ಮಣನೇ ಸೂಕ್ತ ವ್ಯಕ್ತಿ ಎಂದು ಹಿಂದೆಯೇ ತೀರ್ಮಾನಿಸಿದ್ದರು. ಆದರೆ ಪ್ರತಾಪ್ ಸಿಂಹರಿಗೆ ಏಕೆ ಟಿಕೆಟ್ ತಪ್ಪಿಸಿದ್ದಿರಿ ಎಂಬ ಜನರ ಪ್ರಶ್ನೆಗೆ ಬಿಜೆಪಿಯಾಗಲೀ, ಪ್ರತಾಪ್ ಸಿಂಹ ಆಗಲೀ ಯಾರೂ ಉತ್ತರ ನೀಡುತ್ತಿಲ್ಲ.

ಮಿತ್ರ ಯದುವೀರ್ ಎದುರಿಸುವುದು ಕಠಿಣವಾಗಬಹುದು ಎಂದು ಯಾವಾಗಲಾದರೂ ಅನ್ನಿಸಿದೆಯೇ? ಅಥವಾ ಹೀಗೆ ಯಾರಾದರೂ ನಿಮ್ಮ ಬಳಿ ಹೇಳಿದ್ದಾರಾ?

ಲಕ್ಷ್ಮಣ: ನಾನು ಬಹಳ ಮುಕ್ತವಾಗಿ ಹೇಳ್ತೀನಿ. ಯಾರನ್ನೂ ಬಹಳ ಕಠಿಣ ಅಥವಾ ತುಂಬಾ ಸುಲಭ ಎಂದು ಭಾವಿಸಿಲ್ಲ. ಆ ರೀತಿಯ ಭ್ರಮೆ ನನಗಿಲ್ಲ. ಯಾರೇ ಆದರೂ ಅಗತ್ಯವಿದ್ದಾಗ ಅವರ ಬಲ ಪ್ರದರ್ಶಿಸುತ್ತಾರೆ ಎಂಬ ಮಾತಿದೆ. ಹಾಗಾಗಿ ಯಾರೇ ಎದುರಾಳಿಯಾದರೂ ಎದುರಿಸಲು ನಾನು ಸಿದ್ಧನಿದ್ದೆ. ಮುಖ್ಯಮಂತ್ರಿಗಳೂ ಈ ಕ್ಷೇತ್ರವನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದಾರೆ. ನೂರಕ್ಕೆ ನೂರರಷ್ಟು ನಾವು ಗೆಲ್ಲುವ ಸಾಧ್ಯತೆ ಇದೆ. ಯದುವೀರ್ ಎದುರು ಸ್ಪರ್ಧೆ ಕಠಿಣವಾಗಬಹುದು ಎಂದು ನಮ್ಮ ಪಕ್ಷದ ಯಾರೂ ಕೂಡ ಹೇಳಿಲ್ಲ.

ಮಿತ್ರ ರಾಜ್ಯ ಸರ್ಕಾರದ ಗ್ಯಾರಂಟಿಗಳು ಹಾಗೂ ಎಐಸಿಸಿ ಬಿಡುಗಡೆ ಮಾಡಿದ ಚುನಾವಣಾ ಪ್ರಣಾಳಿಕೆ ನಿಮ್ಮ ಗೆಲುವಿಗೆ ಎಷ್ಟರ ಮಟ್ಟಿಗೆ ನೆರವಾಗಬಹುದು?

ಲಕ್ಷ್ಮಣ: 2023ರ ವಿಧಾನಸಭೆ ಚುನಾವಣೆ ವೇಳೆ ಮುಕ್ತವಾಗಿ ಗ್ಯಾರಂಟಿ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೆವು. ಸಿದ್ದರಾಮಯ್ಯ ಹಾಗೂ ಡಿಕೆಶಿ ಅವರ ಸಹಿಯುಳ್ಳ ಗ್ಯಾರಂಟಿ ಕಾರ್ಡ್ ಅನ್ನು ಜನರಿಗೆ ನೀಡಿದ್ದೆವು. ಅದು ಪರಿಣಾಮ ಬೀರಿದಂತೆ ಈಗಿನ ಲೋಕಸಭಾ ಚುನಾವಣಾ ಪ್ರಣಾಳಿಕೆಯೂ ಪ್ರಭಾವ ಬೀರಲಿದೆ. ಎಐಸಿಸಿ ಐದು ನ್ಯಾಯ ಹಾಗೂ ಇಪ್ಪತ್ತೈದು ಗ್ಯಾರಂಟಿಗಳನ್ನು ಘೋಷಿಸಿದೆ. ಕಾಂಗ್ರೆಸ್ ಯಾವತ್ತೂ ಸುಳ್ಳು ಹೇಳಲ್ಲ. ನಾವು ಏನು ಹೇಳಿದ್ದೆವೋ ಅದನ್ನು ಮಾಡಿದ್ದೇವೆ. ಬಿಜೆಪಿಯವರ ರೀತಿ ಮತಕ್ಕಾಗಿ ಒಂದು ಹೇಳುವುದು ನಂತರ ಮತ್ತೊಂದು ಮಾಡುವುದಿಲ್ಲ.

ಮಿತ್ರ: ಇಷ್ಟು ದಿನ ನೀವು ನಿಮ್ಮ ಜಾತಿ ಬಗ್ಗೆ ಹೇಳಿಕೊಂಡಿರಲಿಲ್ಲ. ಚುನಾವಣೆ ವೇಳೆ ದಾಖಲೆ ಸಹಿತ 'ಜಾತಿ' ಘೋಷಣೆ ಔಚಿತ್ಯವೇನು?

ಲಕ್ಷ್ಮಣ: ನಾನಾಗಿಯೇ ಜಾತಿ ಪ್ರಮಾಣ ಪತ್ರ ತಂದು ತೋರಿಸುವ ಸಂದರ್ಭ ಕಲ್ಪಿಸಿಕೊಂಡಿದ್ದಲ್ಲ. ಟಿಕೆಟ್ ಘೋಷಣೆಯಾದ ಮರುದಿನವೇ ಚಾಮುಂಡಿಬೆಟ್ಟದಲ್ಲಿ ಪೂಜೆ ಮಾಡಿಸಿಕೊಂಡು ಪಕ್ಷದ ಕಚೇರಿಯಲ್ಲಿ ಕೃತಜ್ಞತೆ ತಿಳಿಸಲು ಸುದ್ದಿಗೋಷ್ಠಿ ಕರೆದಿದ್ದೆ. ಅಷ್ಟರಲ್ಲಿ ಪ್ರತಾಪ್ ಸಿಂಹ ಟಿಕೆಟ್ ಮಿಸ್ ಆಗಿದ್ದಕ್ಕೆ ಹತಾಶರಾಗಿದ್ದರು. ಅವರ ಪಕ್ಷದ ಮುಖಂಡರ ಮೇಲೆ ತೋರಿಸಬೇಕಿದ್ದ ಕೋಪವನ್ನು ನಮ್ಮ ಮೇಲೆ ತೋರಿಸುವುದು ಎಷ್ಟು ಸರಿ. ಲಕ್ಷ್ಮಣ್ ಒಕ್ಕಲಿಗರೇ ಅಲ್ಲ, ಒಕ್ಕಲಿಗ ಕಾರ್ಡ್ ಬಳಸಿಕೊಂಡು ಮತ ಪಡೆಯಲು ಮುಂದಾಗಿದ್ದಾರೆ ಎಂದು ಆರೋಪಿಸಿದರು. ನಾನೆಂದೂ ಜಾತಿ ಹೆಸರೇಳಿಕೊಂಡು ರಾಜಕೀಯ ಮಾಡಿಲ್ಲ. ನೆಲಮಂಗಲ ಹತ್ತಿರ ರಾಷ್ಟ್ರೀಯ ಹೆದ್ದಾರಿ ಪಕ್ಕದ ಕುಲುವನಹಳ್ಳಿಯ ಮುದ್ದಲಿಂಗಯ್ಯ ಅವರ ಮಗ ನಾನು. ಬೇಕಿದ್ದರೆ ಅಲ್ಲಿಗೇ ಹೋಗಿ ವಿಚಾರಿಸಲಿ. ಅಷ್ಟಕ್ಕೂ ಟಿಸಿ, ಜಾತಿ ಪ್ರಮಾಣ ಪತ್ರ ಸುಳ್ಳು ಹೇಳುತ್ತಾ. ಹಾಗಾಗಿ ಅವರ ಆರೋಪಕ್ಕೆ ನಾನು ಸ್ಪಷ್ಟನೆ ನೀಡಿದ್ದೇನೆ ಅಷ್ಟೇ. 2014ರಲ್ಲಿ ಮೊದಲ ಬಾರಿ ಸ್ಪರ್ಧೆಗೆ ಪ್ರತಾಪ್ ಸಿಂಹ ಬಂದಾಗ ರೈಲ್ವೆ ನಿಲ್ದಾಣದಿಂದ ಮಾಧವ ಕೃಪಾಗೆ ಹೇಗೆ ಹೋಗಬೇಕೆಂದು ಆಟೋದವರನ್ನು ಕೇಳಿಕೊಂಡು ಹೋಗಿದ್ದ ಸನ್ನಿವೇಶವನ್ನು ಅವರು ಮರೆತುಬಿಟ್ಟರಾ?. ಅವರು ಹತ್ತು ವರ್ಷದಲ್ಲಿ ಯಾವ ಯೋಜನೆಯನ್ನೂ ತಂದಿಲ್ಲ. ಕಣದಲ್ಲಿರದ ಅವರ ಬಗ್ಗೆ ಮಾತನಾಡಿ ನನಗೇನೂ ಆಗಬೇಕಿಲ್ಲ.

ಮಿತ್ರ: ಮೈಸೂರು–ಕೊಡಗು ಕ್ಷೇತ್ರದಲ್ಲಿ ಜಾತಿ ಅಸ್ತ್ರ ಪರಿಣಾಮ ಬೀರಬಹುದು. ಇದರಿಂದ ಜೆಡಿಎಸ್ ಬೆಂಬಲಿತರನ್ನು ಸೆಳೆಯಬಹುದು ಎನ್ನುವುದು ಕಾಂಗ್ರೆಸ್ ಲೆಕ್ಕಾಚಾರವೇ?

ಲಕ್ಷ್ಮಣ: ಜಾತಿ ಆಧಾರದಲ್ಲಿ ಟಿಕೆಟ್ ಕೇಳಿಲ್ಲ. ಹಾಗೆಯೇ ಮತವನ್ನೂ ಕೇಳೋದಿಲ್ಲ. ಜಾತ್ಯಾತೀತವಾಗಿ, ಧರ್ಮಾತೀತವಾಗಿ ಕೆಲಸ ಮಾಡೋ ವ್ಯಕ್ತಿಗೆ ಬೆಂಬಲಿಸಿ ಎಂದು ಮನವಿ ಮಾಡಿಕೊಳ್ಳುತ್ತೇವೆ. ನಮಗೆ ಸಂಪೂರ್ಣ ವಿಶ್ವಾಸವಿದೆ. ಎಲ್ಲರೊಂದಿಗೆ ಮಾತನಾಡಿ, ಬೆಂಬಲ ಕೇಳುತ್ತಿದ್ದೇವೆ. ನಿಮಗೆ ರಸ್ತೆಯಲ್ಲಿ ಸಿಗುವ ವ್ಯಕ್ತಿ ಬೇಕಾ ಅಥವಾ ಗಂಟೆಗಟ್ಟಲೆ ಕಾದು ಅನುಮತಿ ಪಡೆದು ಭೇಟಿಯಾಗೋ ವ್ಯಕ್ತಿ ಬೇಕಾ, ನೀವೇ ಆಯ್ಕೆ ಮಾಡಿ ಎಂದು ಕೇಳುತ್ತಿದ್ದೇವೆ. ಜನ ಬಹಳ ಬುದ್ಧಿವಂತರಿದ್ದಾರೆ. ಅವರೇ ಸೂಕ್ತ ನಿರ್ಧಾರ ಮಾಡುತ್ತಾರೆ.

ಮಿತ್ರ: ಪಕ್ಷದ ಗ್ಯಾರಂಟಿಗಳು, ಭರವಸೆಗಳನ್ನು ಹೊರತುಪಡಿಸಿ ಜನಸಾಮಾನ್ಯರು ನಿಮ್ಮನ್ನು ಏಕೆ ಬೆಂಬಲಿಸಬೇಕು?

ಲಕ್ಷ್ಮಣ: ನಾನು ಒಬ್ಬ ಹೋರಾಟಗಾರ. ನನಗೆ ಕ್ಲೀನ್ ಇಮೇಜ್ ಇದೆ. ನಾನೆಲ್ಲೂ ಭ್ರಷ್ಟಾಚಾರ, ಬ್ಲಾಕ್‌ಮೇಲ್, ರೋಲ್‌ಕಾಲ್ ಮಾಡಿಲ್ಲ. ನಮ್ಮದೇ ಆದ ತತ್ವ ಸಿದ್ಧಾಂತದ ಆಧಾರದಲ್ಲಿ ಜೀವನ ನಡೆಸುತ್ತಿದ್ದೇವೆ. 2012 ಮತ್ತು 2018ರಲ್ಲಿ ಸಿದ್ದರಾಮಯ್ಯನವರು ಶಿಕ್ಷಕರ ಕ್ಷೇತ್ರದಿಂದ ಟಿಕೆಟ್ ಕೊಟ್ಟಿದ್ದರು. ಒಮ್ಮೆ 185 ಓಟ್‌ನಲ್ಲಿ ಸೋತಿದ್ದೆ. ನಾನು ತಾಂತ್ರಿಕ ಹಿನ್ನೆಲೆಯುಳ್ಳ ವ್ಯಕ್ತಿ. ಮೈಸೂರಿಗೆ ಏನಾದರೂ ಮಾಡಬೇಕೆಂಬ ವಿಷನ್ ಇದೆ. ಕೇಂದ್ರದಿಂದ ಅನುದಾನ ತಂದು ರಾಜ್ಯ ಸರ್ಕಾರದ ಸಮನ್ವಯತೆಯೊಂದಿಗೆ ಕೆಲಸ ಮಾಡುತ್ತೇನೆ. ಅದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ.

ಮಿತ್ರ: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಫಲಿತಾಂಶ ಹಾಗೂ ಸಿದ್ದರಾಮಯ್ಯನವರ ಮುಖ್ಯಮಂತ್ರಿ ಸ್ಥಾನದ ಮೇಲೆ ಪರಿಣಾಮ ಬೀರಲಿದೆ ಎಂಬ ಪ್ರತಿಪಕ್ಷದವರ ಅಭಿಪ್ರಾಯಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಲಕ್ಷ್ಮಣ: ಲೋಕಸಭಾ ಕ್ಷೇತ್ರದ ಫಲಿತಾಂಶಕ್ಕೂ ಸಿದ್ದರಾಮಯ್ಯನವರ ಸ್ಥಾನಕ್ಕೂ ಸಂಬಂಧವಿಲ್ಲ. ಬಿಜೆಪಿಯವರಿಗೆ ಈ ರೀತಿಯ ಕಿಡಿ ಹೊತ್ತಿಸುವುದೇ ಕೆಲಸ. ಅದಕ್ಕೂ, ಇದಕ್ಕೂ ಸಂಬಂಧವಿಲ್ಲ. ಅವೆಲ್ಲಾ ಸುಳ್ಳು.

ಮಿತ್ರ: ರಾಜವಂಶಸ್ಥರೆಂಬ ಭಾವನಾತ್ಮಕ ಅಂಶದ ಮೇಲೆ ಕಾಂಗ್ರೆಸ್ ಬೆಂಬಲಿತರ ಮತಗಳೂ ಯದುವೀರ್ ಅವರಿಗೆ ಹೋಗಬಹುದು ಎನ್ನುವ ಯೋಚನೆ ಏನಾದರೂ ಇದೆಯೇ?

ಲಕ್ಷ್ಮಣ: ದೇಶದ ಜನರಿಗೆ ಈಗಾಗಲೇ ಅನುಭವವಾಗಿದೆ. ಜನ ಯಾವುದೇ ಸೆಂಟಿಮೆಂಟ್‌ನಿಂದ ಮತ್ತೆ ಮೂರ್ಖರಾಗುವುದಿಲ್ಲ. ಮೈಸೂರು–ಕೊಡಗು ಕ್ಷೇತ್ರದ ಜನ ಈ ಬಾರಿ ನನಗೆ ಅವಕಾಶ ಕೊಡುತ್ತಾರೆ ಎನ್ನುವ ಸಂಪೂರ್ಣ ವಿಶ್ವಾಸವಿದೆ. ಯೋಚನೆ ಮಾಡಿ ಮತ ಹಾಕುತ್ತಾರೆ.

ಮಿತ್ರ: ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಘಟಾನುಘಟಿಗಳೂ ಸೋತಿದ್ದಾರೆ. ನೀವೇಕೆ ಸೋತರೆ ಸತ್ತಂತೆ ಎಂಬ ಮಾತು ಹೇಳಿದ್ದಿರಿ?

ಲಕ್ಷ್ಮಣ: ನಾನು ನಾಲ್ಕು ಚುನಾವಣೆಯಲ್ಲಿ ಸೋತಿದ್ದೇನೆ. 2008ರಲ್ಲಿ ಎಂಎಲ್‌ಎ ಚುನಾವಣೆ, 2010ರಲ್ಲಿ ಪದವೀಧರರ ಕ್ಷೇತ್ರ, 2012 ಹಾಗೂ 2018ರಲ್ಲಿ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿ, ಅಲ್ಪ ಮತಗಳಿಂದ ಸೋತಿದ್ದೇನೆ. 2018ರಲ್ಲಿ ಕೇವಲ 185 ಮತಗಳಿಂದ ಸೋತೆ. ಆದ್ದರಿಂದ ಬಹಳ ಬೇಸರವಾಗಿ ಮತ್ತೆ ಸೋಲಿಸಿದರೆ ನಾನು ಸತ್ತಂತೆ ಎಂದು ಹೇಳಿದೆ.

ಮಿತ್ರ: ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಪ್ರಕಾರ ರಾಜ್ಯದಲ್ಲಿ ಕಾಂಗ್ರೆಸ್ ಎಷ್ಟು ಸ್ಥಾನ ಗಳಿಸಬಹುದು?

ಲಕ್ಷ್ಮಣ: ರಾಜ್ಯದಲ್ಲಿ ಕಾಂಗ್ರೆಸ್ 22–25 ಸೀಟ್ ಗೆಲ್ಲುತ್ತದೆ. ಉತ್ತಮ ಪ್ರತಿಕ್ರಿಯೆ ಇದೆ. ನೂರಕ್ಕೆ ನೂರು ಗೆಲ್ಲುವ ವಿಶ್ವಾಸವಿದೆ.

ಮಿತ್ರ: ಅಭಿವೃದ್ಧಿ ಪರಿಕಲ್ಪನೆ ಹೊರತಾಗಿ ಕ್ಷೇತ್ರದ ಬಡವರು, ರೈತರು, ಯುವ ಸಮುದಾಯಕ್ಕೆ ನೀವು ಸಂಸದರಾದರೆ ಏನು ಮಾಡಬಹುದು?

ಲಕ್ಷ್ಮಣ: ಸಂಸದರಾಗಿ ಪ್ರತ್ಯೇಕವಾಗಿ ಹಣಕಾಸು ತಂದು ಕೆಲಸ ಮಾಡೋಕೆ ಆಗೋದಿಲ್ಲ. ಆದರೆ ಕ್ಷೇತ್ರದ ಸಮಸ್ಯೆಗಳನ್ನು ಪ್ರತಿನಿಧಿಸುವ ಅವಕಾಶವಿದೆ. ಪಾರಂಪರಿಕ ವಿಚಾರಗಳ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳು ಬಹಳ ಮುಖ್ಯ. ಆ ವಿಷಯದಲ್ಲಿ ನುರಿತವರಿದ್ದರೆ ಮಾತ್ರ ಒಂದಷ್ಟು ಒಳ್ಳೆಯದು ಮಾಡಲು ಅವಕಾಶವಾಗುತ್ತದೆ. ಮೈಸೂರಿನ ಬಗ್ಗೆ ನನ್ನದೇ ಆದ ಪ್ರತ್ಯೇಕ ವಿಷನ್ ಇದೆ. ಅದನ್ನು ಸಾಕಾರಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸಮನ್ವಯತೆಯಿಂದ ಕೆಲಸ ಮಾಡುತ್ತೇನೆ.

ಮಿತ್ರ: ನಿಮ್ಮ ಪೊಲಿಟಿಕಲ್ ಗಾಡ್ ಫಾದರ್, ರೋಲ್ ಮಾಡೆಲ್ ಇದ್ದಾರಾ?

ಲಕ್ಷ್ಮಣ: ನನಗೆ ಪೊಲಿಟಿಕಲ್ ಗಾಡ್ ಫಾದರ್ ಅನ್ನುವುದಕ್ಕಿಂತ ರೋಲ್ ಮಾಡೆಲ್ ಹಲವರಿದ್ದಾರೆ. ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾಗಾಂಧಿ ಇವರೆಲ್ಲಾ ರಾಜಕಾರಣದಲ್ಲಿ ರೋಲ್ ಮಾಡೆಲ್ಸ್. ಪಕ್ಷಾತೀತವಾಗಿ ಹೇಳುವುದಾದರೂ ಸಿದ್ದರಾಮಯ್ಯನವರ ಹೆಸರೇಳುತ್ತೇನೆ.

ಮಿತ್ರ: ಓರ್ವ ರಾಜಕೀಯ ಮುಖಂಡರಾಗಿ ಮತದಾನದ ಮಹತ್ವದ ಬಗ್ಗೆ ಜನರಿಗೆ ಏನು ಹೇಳಲು ಬಯಸುತ್ತೀರಿ?

ಲಕ್ಷ್ಮಣ: ಕಡ್ಡಾಯವಾಗಿ ಎಲ್ಲರೂ ಮತದಾನ ಮಾಡಬೇಕು. ಮತದಾನ ಪ್ರತಿಯೊಬ್ಬರ ಹಕ್ಕು ಈ ಬಾರಿ ನಾವೂ ಕೂಡ ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದೇವೆ. ಈ ಬಾರಿ ಶೇ.80ರಷ್ಟು ಮತದಾನವಾಗಬೇಕೆಂಬ ಗುರಿ ಇದೆ. ಜವಾಬ್ದಾರಿಯುತ ನಾಗರಿಕರಾಗಿ ಮತ ಚಲಾಯಿಸಿ. ಯಾರಿಗಾದರೂ ಮತ ಹಾಕಿ, ಆದರೆ ಆ ಕೆಲಸವನ್ನು ತಪ್ಪದೇ ಮಾಡಿ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

ಕೆಲವರ ಪಕ್ಷಾಂತರ ನನ್ನ ಗೆಲುವಿಗೆ ಅಡ್ಡಿಯಿಲ್ಲ

–ಎಸ್.ಬಾಲರಾಜು, ಎನ್‌ಡಿಎ ಅಭ್ಯರ್ಥಿ, ಚಾಮರಾಜನಗರ ಲೋಕಸಭಾ ಕ್ಷೇತ್ರ



ಸಿದ್ದಲಿಂಗಸ್ವಾಮಿ

ಚಾಮರಾಜನಗರ ಪರಿಶಿಷ್ಟ ಜಾತಿ ಮೀಸಲು ಲೋಕಸಭಾ ಕ್ಷೇತ್ರದಿಂದ ಎನ್‌ಡಿಎ ಮೈತ್ರಿ ಕೂಟದ ಅಭ್ಯರ್ಥಿಯಾಗಿ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಸ್.ಬಾಲರಾಜು ಕಣಕ್ಕಿಳಿದಿದ್ದಾರೆ. ಜಿಲ್ಲೆಯ ಹಿರಿಯ ರಾಜಕಾರಣಿಗಳಲ್ಲಿ ಒಬ್ಬರಾದ ಬಾಲರಾಜು ಅವರು ತಮ್ಮ ಸ್ಪರ್ಧೆ, ಗೆಲುವಿನ ಭರವಸೆ ಇತ್ಯಾದಿ ವಿಚಾರಗಳನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: *ನಿಮಗೆ ಕ್ಷೇತ್ರದ ಮತದಾರರ ಸ್ಪಂದನೆ ಹೇಗಿದೆ?*

ಎಸ್.ಬಾಲರಾಜು: ಹೋದ ಕಡೆಯಲ್ಲೆಲ್ಲಾ ಮತದಾರರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಮತದಾರರು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದಾರೆ. ಮೂರು ದಶಕದಿಂದ ಅಧಿಕಾರ ವಂಚಿತನಾಗಿರುವ ನನಗೆ ಈ ಬಾರಿ ಅಧಿಕಾರ ನೀಡಬೇಕೆಂದು ಮತದಾರರು ತೀರ್ಮಾನಿಸಿದಂತಿದೆ. ಮೂರು ವರ್ಷ ಕಾಲ ಕೊಳ್ಳೇಗಾಲ ಶಾಸಕನಾಗಿ ಮಾಡಿರುವ ಅಭಿವೃದ್ಧಿ ಕಾರ್ಯವನ್ನು ಜನರು ಈಗಲೂ ನೆನೆಸಿಕೊಳ್ಳುತ್ತಿದ್ದಾರೆ. ಎಲ್ಲೆಡೆಯೂ ನನಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಮಿತ್ರ: *ಕ್ಷೇತ್ರದ ಜೆಡಿಎಸ್ ಮುಖಂಡರಿಂದ ನಿಮಗೆ ಸಹಕಾರ ದೊರೆಯುತ್ತಿದೆಯೆ?*

ಎಸ್.ಬಾಲರಾಜು: ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರಿಂದ ನಿರೀಕ್ಷೆಗೂ ಮೀರಿದ ಸಹಕಾರ ದೊರೆಯುತ್ತಿದೆ. ಅವರೆಲ್ಲರೂ ನನ್ನ ಸಂಪರ್ಕದಲ್ಲಿದ್ದಾರೆ. ಪ್ರತಿನಿತ್ಯ ಪ್ರಚಾರದ ವೇಳೆ ಜೆಡಿಎಸ್‌ನವರು ಪಾಲ್ಗೊಳ್ಳುತ್ತಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಜಂಟಿಯಾಗಿ ಪರಸ್ಪರ ಸಹಕಾರದೊಂದಿಗೆ ಪ್ರಚಾರ ನಡೆಸುತ್ತಿರುವುದು ನನಗೆ ಆನೆ ಬಲ ಬಂದಂತಾಗಿದೆ.

ಮಿತ್ರ: *ಹಲವು ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದರು. ನಿಮಗೆ ಟಿಕೆಟ್ ದೊರೆತಿದ್ದರಿಂದ ಅವರಲ್ಲಿ ಅಸಮಾಧಾನ ಇಲ್ಲವೇ?*

ಎಸ್.ಬಾಲರಾಜು: ಏಳೆಂಟು ಮಂದಿ ಆಕಾಂಕ್ಷಿಗಳಿದ್ದೆವು. ನಾವು ಯಾರಿಗೇ ಟಿಕೆಟ್ ದೊರೆತರೂ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಚಾಮರಾಜನಗರದಲ್ಲಿ ಮತ್ತೇ ಬಿಜೆಪಿ ಗೆಲ್ಲಬೇಕು ಎಂಬ ಉದ್ದೇಶವನ್ನು ಹೊಂದಿದ್ದೆವು. ಅಂತಿಮವಾಗಿ ಪಕ್ಷದ ವರಿಷ್ಠರು ನನಗೆ ಟಿಕೆಟ್ ನೀಡಿದ್ದಾರೆ. ನನಗೆ ಟಿಕೆಟ್ ಘೋಷಣೆಯಾದ ನಂತರ ನಾನು ಉಳಿದ ಎಲ್ಲಾ ಆಕಾಂಕ್ಷಿಗಳನ್ನು ಸಂಪರ್ಕಿಸಿ ಸಹಕರಿಸುವಂತೆ ವಿನಂತಿಸಿದ್ದೇನೆ. ನರೇಂದ್ರ ಮೋದಿಯವರು ಮತ್ತೇ ಪ್ರಧಾನಿಯಾಗಬೇಕೆಂಬ ಉದ್ದೇಶದಿಂದ ಎಲ್ಲರೂ ನನ್ನೊಟ್ಟಿಗೆ ಸೇರಿ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತಿದ್ದಾರೆ, ನನ್ನ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ.

ಮಿತ್ರ: *ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ 8 ವಿಧಾನಸಭಾ ಕ್ಷೇತ್ರಗಳ ಪೈಕಿ ಏಳರಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಇದರಿಂದ ನಿಮಗೆ ಸ್ಪರ್ಧೆ ಕಠಿಣ ಎನಿಸುವುದಿಲ್ಲವೇ?*

ಎಸ್.ಬಾಲರಾಜು: ಕಳೆದ ಲೋಕಸಭಾ ಚುನಾವಣಾ ಸಂದರ್ಭದಲ್ಲೂ ಎರಡು ಕ್ಷೇತ್ರದಲ್ಲಿ ಮಾತ್ರ ಬಿಜೆಪಿ ಶಾಸಕರಿದ್ದರು. ಹೀಗಿದ್ದರೂ ಬಿಜೆಪಿ ಅಭ್ಯರ್ಥಿಯಾಗಿದ್ದ ಹಿರಿಯ ಮುಖಂಡರಾದ ವಿ.ಶ್ರೀನಿವಾಸಪ್ರಸಾದ್ ಅವರು ಗೆಲುವು ಸಾಧಿಸಿದ್ದರು. ಚಾಮರಾಜನಗರ ಮಾತ್ರವಲ್ಲದೇ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಮತದಾರರು ಬಿಜೆಪಿ ಬೆಂಬಲಿಸಿದ್ದರು. ವಿಧಾನಸಭಾ ಚುನಾವಣೆಗೂ ಲೋಕಸಭಾ ಚುನಾವಣೆಗೂ ಅಜಗಜಾಂತರ ವ್ಯತ್ಯಾಸ ಇದೆ. ದೇಶದ ಹಿತದೃಷ್ಟಿಯಿಂದ ಮತದಾರರು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುತ್ತಾರೆ ಎಂಬ ವಿಶ್ವಾಸವಿದೆ.

ಮಿತ್ರ *ಬಿಜೆಪಿಯ ಅನೇಕ ಮುಖಂಡರು ಅದರಲ್ಲೂ ಹಿರಿಯರಾದ ಶ್ರೀನಿವಾಸ ಪ್ರಸಾದ್ ಅವರ ಬೆಂಬಲಿಗರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಇದು ನಿಮಗೆ ಹಿನ್ನಡೆ ಆಗುವುದಿಲ್ಲವೇ?*

ಎಸ್. ಬಾಲರಾಜು: ಚುನಾವಣೆ ಸಂದರ್ಭದಲ್ಲಿ ಪಕ್ಷಾಂತರ ಸರ್ವೇಸಾಮಾನ್ಯ. ಶ್ರೀನಿವಾಸಪ್ರಸಾದ್ ಅವರು ಈಗ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಅವರು ಕಾಂಗ್ರೆಸ್‌ನಿಂದ ಅಸಮಾಧಾನಗೊಂಡು ಬಿಜೆಪಿಗೆ ಬಂದಿದ್ದರು. ಹಾಲಿ ಅವರು ಚಾಮರಾಜನಗರ ಕ್ಷೇತ್ರದ ಬಿಜೆಪಿ ಸಂಸದರಾಗಿದ್ದಾರೆ. ಅವರ ಅಳಿಯ, ನಂಜನಗೂಡು ಮಾಜಿ ಶಾಸಕರಾದ ಹರ್ಷವರ್ಧನ್ ಅವರು ನಮ್ಮ ಜೊತೆಗಿದ್ದು ನನ್ನ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ. ಕೆಲವರು ನಮ್ಮ ಪಕ್ಷ ತೊರೆದಿದ್ದಾರೆ. ಇದರಿಂದ ಬಿಜೆಪಿಗೆ ಏನೂ ನಷ್ಟ ಇಲ್ಲ. ಹಾಗೆಯೇ ಬೇರೆ ಪಕ್ಷದಿಂದಲೂ ನಮ್ಮ ಪಕ್ಷಕ್ಕೆ ಅನೇಕರು ಸೇರ್ಪಡೆಯಾಗಿದ್ದಾರೆ.

ಮಿತ್ರ *ಕ್ಷೇತ್ರದಲ್ಲಿ ಮೋದಿ ಅಲೆ ಇದೆಯಾ?*

ಎಸ್. ಬಾಲರಾಜು: ಮೋದಿ ಅವರ ಅಲೆ ಕೇವಲ ಚಾಮರಾಜನಗರ ಕ್ಷೇತ್ರದಲ್ಲಿ ಮಾತ್ರ ಅಲ್ಲ. ಇಡೀ ದೇಶಾದ್ಯಂತ ಇದೆ. ದೇಶದ ರಕ್ಷಣೆಗಾಗಿ ಮೂರನೇ ಬಾರಿಗೆ ನರೇಂದ್ರ ಮೋದಿ ಅವರನ್ನು ಪ್ರಧಾನಿಯನ್ನಾಗಿ ಮಾಡಬೇಕೆಂದು ಮತದಾರರು ಈಗಾಗಲೇ ನಿರ್ಧರಿಸಿದ್ದಾರೆ. ಇದೂ ಸಹ ನನಗೆ ವರದಾನವಾಗಲಿದೆ.



ಮಿತ್ರ: *ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಏನಾದರೂ ನಿಮಗೆ ಹಿನ್ನಡೆ ಆಗಬಹುದೇ?*

ಎಸ್. ಬಾಲರಾಜು: ಇಲ್ಲವೇ ಇಲ್ಲ. ವಿಧಾನಸಭಾ ಚುನಾವಣೆ ಕ್ಷೇತ್ರದ ಸ್ಥಳೀಯ ಸಮಸ್ಯೆಗಳ ಆಧಾರದಲ್ಲಿ ನಡೆಯುತ್ತದೆ. ಲೋಕಸಭೆ ಚುನಾವಣೆ ದೇಶಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ನಡೆಯುತ್ತದೆ. ಇದಲ್ಲದೇ ಕಾಂಗ್ರೆಸ್ ಗ್ಯಾರಂಟಿಗಳು ಇನ್ನೂ ಹಲವು ಜನರಿಗೆ ತಲುಪಿಲ್ಲ. ರಾಜ್ಯ ಸರ್ಕಾರ ಜನರಿಗೆ ಕುಡಿಯಲು ನೀರನ್ನೂ ಸಮರ್ಪಕವಾಗಿ ಪೂರೈಸುತ್ತಿಲ್ಲ. ಕಾಂಗ್ರೆಸ್ ಆಡಳಿತದ ಬಗ್ಗೆ ಜನರಿಗೆ ಬೇಸರವಿದೆ. ಹಾಗಾಗಿ ಕಾಂಗ್ರೆಸ್ ಗ್ಯಾರಂಟಿಗಳು ನನ್ನ ಗೆಲುವಿಗೆ ಅಡ್ಡಿಯಾಗದು.

ಮಿತ್ರ: *ಗೆದ್ದರೇ ಯಾವ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೀರಿ?*

ಎಸ್. ಬಾಲರಾಜು: ನಾನು ಕಳೆದ 32 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿದ್ದು, ಜನರ ನಿರಂತರ ಸಂಪರ್ಕದಲ್ಲಿದ್ದೇನೆ. 3 ವರ್ಷಗಳ ಕಾಲ ಶಾಸಕನಾಗಿದ್ದೆ. ಇನ್ನುಳಿದ 29 ವರ್ಷಗಳ ಕಾಲ ಜನರಿಗೋಸ್ಕರ ಜನಸೇವೆಯಲ್ಲಿ ತೊಡಗಿದ್ದೇನೆ. ಈ ಬಾರಿ ಮತದಾರರು ನನ್ನನ್ನು ಬೆಂಬಲಿಸಲಿದ್ದಾರೆ ಎಂಬ ಸಂಪೂರ್ಣ ವಿಶ್ವಾಸ ನನ್ನಲಿದೆ. ಅವರ ವಿಶ್ವಾಸಕ್ಕೆ ಎಂದೂ ಧಕ್ಕೆ ಆಗದಂತೆ ಕೆಲಸ ನಿರ್ವಹಿಸುತ್ತೇನೆ. ಕ್ಷೇತ್ರದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಲಿದ್ದೇನೆ. ಆರೋಗ್ಯ ಕ್ಷೇತ್ರದ ಬಗ್ಗೆಯೂ ಗಮನ ಹರಿಸಬೇಕು ಎಂದು ಬಯಸಿದ್ದೇನೆ. ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತೇನೆ.

ಸ್ತ್ರೀ ಶಕ್ತಿ 'ಮಹಾ ಶಕ್ತಿ'

ಒಲಿಸಿಕೊಳ್ಳಲು ಪಕ್ಷಗಳ ಹರಸಾಹಸ

ಎಂ.ಟಿ.ಯೋಗೇಶ್ ಕುಮಾರ್

ರಾಷ್ಟ್ರ ರಾಜಕಾರಣದಲ್ಲಿ ಈ ಬಾರಿಯ ಲೋಕಸಭಾ ಚುನಾವಣೆ ಪ್ರಮುಖ ರಾಜಕೀಯ ಪಕ್ಷಗಳಿಗೆ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದ್ದು, ಹೆಚ್ಚು ಸ್ಥಾನ ಗೆಲ್ಲಲೇಬೇಕೆಂದು ಎನ್‌ಡಿಎ ಮೈತ್ರಿಕೂಟ, ಕಾಂಗ್ರೆಸ್ ತಂತ್ರಗಾರಿಕೆಯಲ್ಲಿ ತೊಡಗಿವೆ. ಇವುಗಳ ಪ್ರಮುಖ ಟಾರ್ಗೆಟ್ 'ಸ್ತ್ರೀ ಶಕ್ತಿ' ಒಲಿಸಿಕೊಳ್ಳುವುದೇ ಆಗಿದೆ.

ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮತದಾರರೇ ನಿರ್ಣಾಯಕವಾಗಿದ್ದು, ರಾಜಕೀಯ ಪಕ್ಷಗಳ ಚಿತ್ತ ಇತ್ತ ನಾಟಿದೆ. ಪ್ರಮುಖ ಪಕ್ಷಗಳ ಮುಖಂಡರು ಮಹಿಳಾ ಶಕ್ತಿಯ ಒಲಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಪಡುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಮಹಿಳಾ ಮತದಾರರ ಮನ ಒಲಿಸುತ್ತಿದ್ದರೆ, ಉಜ್ವಲ್ ಮುಂತಾದ ಯೋಜನೆಗಳನ್ನು ಮುಂದಿಟ್ಟುಕೊಂಡು ಎನ್‌ಡಿಎ ಮಹಿಳಾ ಮತದಾರರನ್ನು ತನ್ನತ್ತ ಸೆಳೆಯಲು ಪ್ರಯತ್ನಿಸುತ್ತಿದೆ.

ಮಹಿಳಾ ಮತದಾರರೇ ಪ್ರಾಬಲ್ಯ: ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಕ್ಷೇತ್ರ, ಮೈಸೂರು ಜಿಲ್ಲೆಯ ಕೃಷ್ಣರಾಜ, ನರಸಿಂಹರಾಜ, ಚಾಮರಾಜ, ಚಾಮುಂಡೇಶ್ವರಿ, ಹುಣಸೂರು ಹಾಗೂ ಪಿರಿಯಾಪಟ್ಟಣ ಕ್ಷೇತ್ರ ಒಳಗೊಂಡ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ 20,92,222 ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ. ಇವರಲ್ಲಿ 10,26,324 ಪುರುಷರು, 10,65,714 ಮಹಿಳಾ ಹಾಗೂ 184 ಮಂದಿ ತೃತೀಯಲಿಂಗಿ ಮತದಾರರಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳಾ ಮತದಾರರೇ ನಿರ್ಣಾಯಕ ಪಾತ್ರ ವಹಿಸುವುದರಿಂದ ನಾರಿಶಕ್ತಿಯ ಜಪದಲ್ಲಿ ರಾಜಕೀಯ ಪಕ್ಷಗಳ ಮುಖಂಡರು ತೊಡಗಿದ್ದಾರೆ.

ಕಿಂಗ್ ಮೇಕರ್: ಈ ಹಿಂದಿನ ಚುನಾವಣೆಗಳಲ್ಲೂ ನಾರಿಶಕ್ತಿಯೇ ಕಿಂಗ್ ಮೇಕರ್ ಪಾತ್ರ ವಹಿಸಿರುವುದರಿಂದ ಸಹಜವಾಗಿ ಈ ಚುನಾವಣೆಯಲ್ಲೂ 'ಸ್ತ್ರೀಶಕ್ತಿ'ಗಳತ್ತ ರಾಜಕೀಯ ಪಕ್ಷಗಳು ಗಮನ ಹರಿಸುತ್ತಿವೆ. ಕಳೆದ ಹಲವು ವರ್ಷಗಳಿಂದ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗಟ್ಟಿಯಾಗಿ ನೆಲೆಯೂರಿರುವ ಸ್ತ್ರೀಶಕ್ತಿ ಸಂಘಟನೆಗಳು, ಮಹಿಳಾ ಸ್ವಸಹಾಯ ಗುಂಪುಗಳು ಚುನಾವಣೆಗಳ ಮೇಲೆ ಪರೋಕ್ಷವಾಗಿ ಪ್ರಾಬಲ್ಯ ಸಾಧಿಸಿವೆ. ಆ ಕಾರಣದಿಂದಲೇ ರಾಜಕೀಯ ಪಕ್ಷಗಳು ಮಹಿಳಾ ಸಂಘಗಳ ಬೆಂಬಲ ಪಡೆಯಲು ನಾನಾ ಕಸರತ್ತು ನಡೆಸುತ್ತಿವೆ. ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 9000ಕ್ಕೂ ಹೆಚ್ಚು ಸ್ತ್ರೀಶಕ್ತಿ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಇದರೊಂದಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿರುವ 1500ಕ್ಕೂ ಅಧಿಕ ಮಹಿಳಾ ಸಂಘಟನೆಗಳು ನೋಂದಣಿಯಾಗಿವೆ. ಈ ಎಲ್ಲಾ ವರ್ಗಗಳಿಗೆ ಸೇರಿದ 10500 ಮಹಿಳಾ ಸಂಘಗಳು ಸಕ್ರಿಯವಾಗಿವೆ. ಕೊಡಗು ಜಿಲ್ಲೆಯಲ್ಲಿ ಮೂರೂವರೆಯಿಂದ ನಾಲ್ಕು ಸಾವಿರ ಸ್ತ್ರೀಶಕ್ತಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, ಕೆಲ ಸಂಸ್ಥೆಗಳು ನಡೆಸುವ ಸ್ವಸಹಾಯ ಗುಂಪುಗಳ ಸಂಖ್ಯೆಯೂ ಹೆಚ್ಚಾಗಿಯೇ ಇವೆ. ಓಡಿಪಿ, ಧರ್ಮಸ್ಥಳ ಸ್ವಸಹಾಯ ಗುಂಪು ಸೇರಿದಂತೆ ಇನ್ನಿತರ ಸಂಸ್ಥೆಗಳಡಿಯಲ್ಲಿ ನೂರಾರು ಗುಂಪುಗಳು ರಚನೆಯಾಗಿವೆ. ಖಾಸಗಿ ಸಂಸ್ಥೆಗಳು ರಚಿಸಿರುವ ಒಕ್ಕೂಟಗಳಲ್ಲಿಯೂ ನೂರಾರು ಮಹಿಳೆಯರ ಸ್ವಸಹಾಯ ಗುಂಪುಗಳು ನೋಂದಣಿಯಾಗಿವೆ. ಎರಡೂ ಜಿಲ್ಲೆಗಳಿಂದ ಸುಮಾರು 18 ಸಾವಿರ ಮಹಿಳಾ ಸ್ವಸಹಾಯ ಗುಂಪುಗಳು ವಿವಿಧ ಸಂಸ್ಥೆಗಳಡಿ ಕಾರ್ಯನಿರ್ವಹಿಸುತ್ತಿದ್ದು, ಅಪಾರ ಸಂಖ್ಯೆ ಮಹಿಳಾ ಮತದಾರರನ್ನು ಈ ಸ್ತ್ರೀಶಕ್ತಿ ಹಾಗೂ ಮಹಿಳಾ ಸ್ವಸಹಾಯ ಗುಂಪುಗಳು ಒಳಗೊಂಡಿವೆ. ಈ ಕಾರಣದಿಂದಾಗಿಯೇ ರಾಜಕೀಯ ಪಕ್ಷಗಳ ಗಮನ ಸ್ತ್ರೀಶಕ್ತಿ ಸಂಘಟನೆಗಳತ್ತ ತಿರುಗಿದೆ.

ಕಡ್ಡಾಯ ಮತದಾನ: ಮುಕ್ತ ಮತ್ತು ನ್ಯಾಯಸಮ್ಮತ ಮತದಾನಕ್ಕೆ ಚುನಾವಣಾ ಆಯೋಗ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದು, ಅವುಗಳಲ್ಲಿ ಸ್ವೀಪ್ ಸಮಿತಿ ಮಾಡುತ್ತಿರುವ ಕಡ್ಡಾಯ ಮತದಾನದ ಜಾಗೃತಿ ಕಾರ್ಯಕ್ರಮವೂ ಒಂದಾಗಿದೆ. 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಶೇ.70ರಷ್ಟು ಮತದಾನವಾಗಿತ್ತು. ಅದರಲ್ಲಿ ಮತದಾನ ಮಾಡಿದ ಪುರುಷರ ಪ್ರಮಾಣ ಶೇ.71.78ರಷ್ಟಿದ್ದರೆ, ಮತ ಚಲಾಯಿಸಿದ ಮಹಿಳಾ ಮತದಾರರ ಪ್ರಮಾಣ ಶೇ. 69ರಷ್ಟಿತ್ತು. ಈ ಹಿನ್ನೆಲೆಯಲ್ಲಿ ಈ ಬಾರಿ ಮಹಿಳಾ ಕಾಲೇಜು, ಮಹಿಳಾ ಉದ್ಯಮಿಗಳೇ ಹೆಚ್ಚಾಗಿರುವ ಕಂಪನಿ, ಕಾರ್ಖಾನೆ ಸೇರಿದಂತೆ ವಿವಿಧೆಡೆ ಕಡ್ಡಾಯ ಮತದಾನದ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಮತದಾನದ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ.



ಶತಾಯುಷಿಗಳಲ್ಲಿ ಮತದಾನ ಉತ್ಸಾಹ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿದ್ದಾರೆ 1,078 ಶತಾಯುಷಿ ಮತದಾರರು

ಎಂ.ಬಿ.ಪವನ್‌ಮೂರ್ತಿ

ಅನೇಕ ಸಂದರ್ಭದಲ್ಲಿ ಹಿರಿಯ ಜೀವಗಳು ಹೇಳುವ ಮಾತುಗಳು, ತಿಳುವಳಿಕೆ ಕಿರಿಯರ ಜೀವನದಲ್ಲಿ ಮಹತ್ವದ ಘಟ್ಟವಾಗಿ ಪರಿಣಮಿಸುತ್ತವೆ. ಆದರೆ ಈ ಸತ್ಯ ಅರಿಯದ ಎಷ್ಟೋ ಕಿರಿಯರು ತಮ್ಮ ಹಿರಿಯ ಜೀವಗಳನ್ನು ಕಡೆಗಣಿಸುವುದುಂಟು. ಇನ್ನು ಶತಾಯುಷಿ ಜೀವಿಗಳು ಅದೆಷ್ಟೋ ಜೀವನ ಪಾಠ ಹೇಳುವ ಶಿಕ್ಷಕರೇ ಸರಿ. ಮೈಸೂರು ಕೂಡ 100 ವರ್ಷಗಳ ದಾಟಿದ ಹಿರಿಯ ಸಂಖ್ಯೆಯಲ್ಲಿ ಕಡಿಮೆ ಇಲ್ಲ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ 42 ಪುರುಷರು, 89 ಮಹಿಳೆಯರು ಸೇರಿದಂತೆ 131 ಶತಾಯುಷಿ ಮತದಾರರು ಇದ್ದಾರೆ. ಅದೇ ರೀತಿ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ 75 ಪುರುಷರು, 155 ಮಹಿಳೆಯರು ಸೇರಿದಂತೆ ಒಟ್ಟು 230 ಶತಾಯುಷಿಗಳಿದ್ದಾರೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ 75 ಪುರುಷರು, 122 ಮಹಿಳೆಯರು ಸೇರಿದಂತೆ ಒಟ್ಟು 197 ಶತಾಯುಷಿಗಳು, ಕೃಷ್ಣರಾಜ (ಕೆಆರ್) ವಿಧಾನಸಭಾ ಕ್ಷೇತ್ರದಲ್ಲಿ 119 ಪುರುಷರು ಹಾಗೂ 91 ಮಹಿಳೆಯರು ಸೇರಿದಂತೆ 210 ಶತಾಯುಷಿಗಳು, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 83 ಪುರುಷರು, 81 ಮಹಿಳೆಯರು ಸೇರಿದಂತೆ 164 ಮಂದಿ ಶತಾಯುಷಿಗಳು ಹಾಗೂ ಎನ್‌ಆರ್ ವಿಧಾನಸಭಾ ಕ್ಷೇತ್ರದಲ್ಲಿ 35 ಮಂದಿ ಪುರುಷರು, 41 ಮಹಿಳೆಯರು ಸೇರಿದಂತೆ 76 ಶತಾಯುಷಿಗಳು ಇದ್ದಾರೆ.

ಅದೇ ರೀತಿಯಲ್ಲಿ ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ 8 ಮಂದಿ ಪುರುಷರು ಹಾಗೂ 7 ಮಂದಿ ಮಹಿಳೆಯರು ಸೇರಿದಂತೆ ಒಟ್ಟು 15 ಮಂದಿ ಶತಾಯುಷಿಗಳು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 21 ಪುರುಷರು ಹಾಗೂ 34 ಮಹಿಳೆಯರು ಸೇರಿದಂತೆ ಒಟ್ಟು 55 ಶತಾಯುಷಿಗಳಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿರುವ 1,078 ಶತಾಯುಷಿಗಳ ಮತದಾನಕ್ಕೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.



ಭಾರತ ಚುನಾವಣಾ ಆಯೋಗವು ಈ ಬಾರಿ 85 ವರ್ಷ ಮೇಲ್ಪಟ್ಟವರಿಗೆ ಅಂಚೆ ಮತದಾನಕ್ಕೆ ಅವಕಾಶ ಮಾಡಿದ್ದು, ಇವರೂ ಸೇರಿದಂತೆ ಶತಾಯುಷಿಗಳು ಮತಗಟ್ಟೆಗೆ ಭೇಟಿ ಕೊಡದೇ ತಮ್ಮ ಮನೆಯಿಂದಲೇ ಮತ ಚಲಾಯಿಸಲು ಎಲ್ಲಾ ಪೂರಕ ವ್ಯವಸ್ಥೆ ಮಾಡಿದೆ.

ಮೈಸೂರು ಜಿಲ್ಲೆಯಲ್ಲಿ 1,997 ಶತಾಯುಷಿ ಮತದಾರರು ಇದ್ದು, ಪಿರಿಯಾಪಟ್ಟಣ, ಹುಣಸೂರು, ಚಾಮುಂಡೇಶ್ವರಿ, ಕೃಷ್ಣರಾಜ, ಚಾಮರಾಜ, ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳ ಅಂಕಿ ಅಂಶವನ್ನು ಈಗಾಗಲೇ ಮೇಲ್ಭಾಗದಲ್ಲಿ ಉಲ್ಲೇಖಿಸಲಾಗಿದೆ. ಅದರ ಹೊರತಾಗಿ ನೋಡುವುದಾದರೆ, ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಕೃಷ್ಣರಾಜನಗರ (ಕೆಆರ್ ನಗರ) ವಿಧಾನಸಭಾ ಕ್ಷೇತ್ರದಲ್ಲಿ 46 ಪುರುಷರು, 110 ಮಹಿಳೆಯರು ಸೇರಿದಂತೆ ಒಟ್ಟು 156 ಶತಾಯುಷಿ ಮತದಾರರು ಇದ್ದಾರೆ. ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಮೈಸೂರು ಜಿಲ್ಲೆಯ ಹೆಚ್‌ಡಿ ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ 79 ಪುರುಷರು, 161 ಮಹಿಳೆಯರು ಸೇರಿದಂತೆ 240 ಶತಾಯುಷಿ ಮತದಾರರು, ಇದೇ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಮೈಸೂರು ಜಿಲ್ಲೆಯ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ 67 ಪುರುಷರು, 124 ಮಹಿಳೆಯರು ಸೇರಿದಂತೆ ಒಟ್ಟು 191 ಶತಾಯುಷಿ ಮತದಾರರು ಇದ್ದಾರೆ.

ಅಂತೆಯೇ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ವರುಣ ವಿಧಾನಸಭಾ ಕ್ಷೇತ್ರದಲ್ಲಿ 77 ಪುರುಷರು, 140 ಮಹಿಳೆಯರು ಸೇರಿದಂತೆ 217 ಶತಾಯುಷಿ ಮತದಾರರು ಇದ್ದಾರೆ. ಅದೇ ರೀತಿ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಮೈಸೂರು ಜಿಲ್ಲೆಯ ಟಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ 52 ಪುರುಷರು, 133 ಮಹಿಳೆಯರು ಸೇರಿದಂತೆ ಒಟ್ಟು 185 ಶತಾಯುಷಿ ಮತದಾರರು ಇದ್ದು, ಒಟ್ಟಾರೆ ಜಿಲ್ಲೆಯಲ್ಲಿ 1,997 ಶತಾಯುಷಿಗಳು ಇದ್ದಾರೆ (ಈ ಎಲ್ಲಾ ಅಂಕಿ ಅಂಶವು ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯಿಂದ ಪಡೆದ ಮಾಹಿತಿಯಾಗಿವೆ)

ಚುನಾವಣೆಯಲ್ಲಿ ಆಗ ಗಲಾಟೆ, ದುಡ್ಡು ಕಾಸು ಇರಲಿಲ್ಲ

101 ವರ್ಷದ ಸಿದ್ದಮ್ಮನ ಮಾಸದ ನೆನಪು



ಚುನಾವಣೆಗಳಲ್ಲಿ ಈಗಿನಂತೆ ಆಗ ಗಲಾಟೆ ಇರಲಿಲ್ಲ, ದುಡ್ಡು ಕಾಸು ಎಂಬುದಿರಲಿಲ್ಲ. ಸ್ವಾತಂತ್ರ್ಯ ಬಂದ ಕಾಲದಿಂದಲೂ ಓಟು ಹಾಕುತ್ತಿದ್ದೇನೆ. ನಾಲ್ಕೈದು ವರ್ಷಗಳಿಂದ ವಯೋಸಹಜ ಅನಾರೋಗ್ಯದ ಹಿನ್ನೆಲೆಯಲ್ಲಿ ಮತಗಟ್ಟೆಗೆ ನನ್ನ ಪುತ್ರ ಕರೆದುಕೊಂಡು ಹೋಗಿ ಮತದಾನ ಮಾಡಲು ನೆರವಾಗುತ್ತಿದ್ದಾರೆ. ನಾನು ಆರೋಗ್ಯವಾಗಿದ್ದಾಗ ಒಬ್ಬಳೆ ಹೋಗಿ ಮತದಾನ ಮಾಡುತ್ತಿದ್ದೆ. ಜೀವ ಆಗಲೋ ಈಗಲೋ ಎನ್ನುವಂತಾಗಿದೆ. ನೋಡೋಣ ದೇವರಿದ್ದಾನೆ. ಆವರೆಗೆ ಬದುಕಿದ್ದರೆ ಖಂಡಿತ ಮತ ಹಾಕುತ್ತೇನೆ. ಸ್ವಾತಂತ್ರ್ಯ ಬಂದ ನಂತರದ ಹಲವು ದಶಕಗಳಲ್ಲಿ ಚುನಾವಣೆ ಎಂದರೆ ಈಗಿನಂತೆ ಯಾವುದೇ ಗಲಾಟೆ ಇರುತ್ತಿರಲಿಲ್ಲ. ಆದರೆ ಈಗ ಚುನಾವಣೆ ಎಂದರೆ ಗಲಾಟೆ ಜಾಸ್ತಿ. ಆಗ ಜನಸಂಖ್ಯೆಯೂ ಕಡಿಮೆ ಇತ್ತು. ಈಗ ದುಡ್ಡುಕಾಸು ಎಲ್ಲಾ ನಡೆಸುತ್ತಾರೆ. ಆಗ ಹೀಗೆ ಏನೂ ಇರಲಿಲ್ಲ.

–101 ವರ್ಷದ ಸಿದ್ದಮ್ಮ, ಮೈಸೂರಿನ ಕೆ.ಆರ್.ಮೊಹಲ್ಲಾದ ಹುಲ್ಲಿನ ಬೀದಿ ನಿವಾಸಿ.

85 ವರ್ಷ ಮೇಲ್ಪಟ್ಟವರಿಗೆ ಹೋಂ ವೋಟಿಂಗ್‌ಗೆ ಅವಕಾಶ



85 ವರ್ಷ ಮೇಲ್ಪಟ್ಟವರು ಮತ್ತು ಶೇ.40ಕ್ಕೂ ಅಧಿಕ ಅಂಗವೈಕಲ್ಯ ಹೊಂದಿರುವವರಿಗೆ ಚುನಾವಣಾ ಆಯೋಗವು ಮನೆಯಲ್ಲೇ ಮತದಾನ (ಹೋಂ ವೋಟಿಂಗ್) ಮಾಡುವ ಅವಕಾಶ ಕಲ್ಪಿಸಿದೆ. ಈ ಹಿನ್ನೆಲೆಯಲ್ಲಿ ಅಂತಹವರ ಮನೆಗಳಿಗೆ ಮತಗಟ್ಟೆ ಅಧಿಕಾರಿಗಳು ಭೇಟಿ ನೀಡಿ, ಅಗತ್ಯ ಕ್ರಮ ವಹಿಸಿದ್ದಾರೆ. ಈ ಪೈಕಿ ಕೆಲವರು ಮತಗಟ್ಟೆಗೆ ಬರುವುದಾಗಿ ಮನೆ ಮತದಾನಕ್ಕೆ ಅಗತ್ಯವಿರುವ 12ಡಿ ನಮೂನೆ ಪಡೆದಿಲ್ಲ. ಆಸಕ್ತರು ಸದರಿ ನಮೂನೆ ಪಡೆದು, ಭರ್ತಿ ಮಾಡಿ ಸಲ್ಲಿಸಿದ್ದಾರೆ. ಅವುಗಳನ್ನು ನಮ್ಮ ಸಹಾಯಕ ಚುನಾವಣಾಧಿಕಾರಿಗಳು ಪರಿಶೀಲಿಸಿ ಅನುಮೋದಿಸಿದ್ದಾರೆ. ಏ.13ರಿಂದ 18ರವರೆಗೆ ಮನೆ ಮತದಾನಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಮತಗಟ್ಟೆಯಲ್ಲಿ ಇರುವ ಎಲ್ಲಾ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿ ಮತದಾನ ಮಾಡಿಸಿಕೊಳ್ಳಲಿದ್ದಾರೆ. ಈ ಎಲ್ಲಾ ಪ್ರಕ್ರಿಯೆ ವಿಡಿಯೋ ಚಿತ್ರೀಕರಣವಾಗಲಿದೆ.

ಪಾರದರ್ಶಕತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ರಾಜಕೀಯ ಪಕ್ಷಗಳ ಬೂತ್ ಏಜೆಂಟ್‌ಗಳು ಈ ಪ್ರಕ್ರಿಯೆ ನೋಡಲು ಅವಕಾಶ ಮಾಡಿಕೊಡಲಾಗಿದೆ. ಎಷ್ಟೋ ಜನ ಹಿರಿಯ ನಾಗರಿಕರು ಹಾಸಿಗೆ ಹಿಡಿದಿರುತ್ತಾರೆ. ಅವರಿಗೆ ಇದು ಅನುಕೂಲವಾಗಲಿದೆ. ಮತಗಟ್ಟೆಯಲ್ಲಿ ವಿಕಲಚೇತನರಿಗೆ ವ್ಹೀಲ್‌ಚೇರ್ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲಾಗುತ್ತಿದೆ. ಚುನಾವಣೆ ಸಂದರ್ಭದಲ್ಲಿ ಈ ಪ್ರಕ್ರಿಯೆ ಹೆಚ್ಚುವರಿ ಜವಾಬ್ದಾರಿಯಾದರೂ ಪ್ರಜಾಪ್ರಭುತ್ವದ ಆಶಯದ ಈಡೇರಿಕೆಗೆ ಇದು ಎಲ್ಲರನ್ನೂ ಒಳಗೊಳ್ಳುವ ನಿಟ್ಟಿನಲ್ಲಿ ಪೂರಕವಾಗಿದೆ. ಏ.13ರಿಂದ 18ರವರೆಗೆ ಮನೆ ಮತದಾನಕ್ಕೆ ಅವಕಾಶ ಕಲ್ಪಿಸಿದರೂ ಆದಷ್ಟು ಶೀಘ್ರದಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸುವ ಗುರಿ ಹೊಂದಿದ್ದೇವೆ.

–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಮೈಸೂರು.

ನಮ್ಮ ನಡುವೆ ಇರುವಂತಹ ಶತಾಯುಷಿ ಮತದಾರರು 1951–52ರ ದೇಶದ ಮೊಟ್ಟ ಮೊದಲ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿದಂತಹವರು. ಹೊಚ್ಚ ಹೊಸ ಅನುಭವಕ್ಕೆ ಸಾಕ್ಷಿಯಾದವರು. ಇದೀಗ 18ನೇ ಲೋಕಸಭಾ ಚುನಾವಣೆಗೆ ಇಡೀ ದೇಶ ಸಜ್ಜಾಗಿದೆ. ಈ ಚುನಾವಣೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ 1,078 ಶತಾಯುಷಿಗಳು ಮತದಾನಕ್ಕೆ ಅಣಿಯಾಗಿದ್ದಾರೆ.

ವಿಶ್ವದಲ್ಲೇ ಬಹು ದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ದೇಶವೆಂಬ ಹೆಗ್ಗಳಿಕೆ ಭಾರತಕ್ಕೆ ಸಂದಿದೆ. ಪ್ರಜಾಪ್ರಭುತ್ವ ಗಟ್ಟಿಗೊಳಿಸುವಲ್ಲಿ ಮತದಾನ ಅತ್ಯಂತ ಶಕ್ತಿಶಾಲಿ ಸಾಧನ.ಸದೃಢ ರಾಷ್ಟ್ರ ನಿರ್ಮಾಣದಲ್ಲೂ ಮತದಾನ ಮಹತ್ವದ ಪಾತ್ರ ವಹಿಸಲಿದೆ. 1951ರ ಅ.25ರಿಂದ 1952ರ ಫೆ.21ರವರೆಗೆ ನಡೆದ ದೇಶದ ಮೊಟ್ಟ ಮೊದಲ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿದವರ ಪೈಕಿ ಇಂದು ಹಲವರು ಶತಾಯುಷಿಗಳಾಗಿದ್ದಾರೆ.

ಅನೇಕ ಚುನಾವಣೆಗಳಲ್ಲಿ ಈ ಶತಾಯುಷಿಗಳು ಮತದಾನದ ಹಕ್ಕು ಚಲಾಯಿಸಿ, ದೇಶದ ವಿವಿಧ ಆಡಳಿತ ವ್ಯವಸ್ಥೆಯ ಚಿತ್ರಣ ಕಂಡಿದ್ದಾರೆ. ಅಪಾರ ಅನುಭವ ದಕ್ಕಿಸಿಕೊಂಡ ಶತಾಯುಷಿಗಳು ಕಿರಿಯರಿಗೆ ಮಾರ್ಗದರ್ಶಕರಾಗಿ ಅವರ ಬದುಕು ಸುಗಮವಾಗಿ ಸಾಗಲು ಸಹಕರಿಸಿದ ತಪಸ್ವಿಗಳಿವರು ಎನ್ನಲೂಬಹುದು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲೂ ಶತಾಯುಷಿ ಮತದಾರರು ಬದುಕಿನ ಬಂಡಿ ಸಾಗಿಸಿ, ತಮ್ಮ ಕಿರಿಯರ ಬದುಕಿಗೆ ಭದ್ರ ಬುನಾದಿ ಹಾಕಿರುವುದು ಮಾತ್ರವಲ್ಲದೆ, ಮತದಾನ ಹಕ್ಕು ಚಲಾಯಿಸಿ, ಆಡಳಿತ ವ್ಯವಸ್ಥೆ ರಚನೆಯಲ್ಲೂ ಭಾಗಿಯಾಗಿದ್ದಾರೆ.

ಹಿರಿಯ ನಾಗರಿಕರು, ಅದರಲ್ಲೂ ಶತಾಯುಷಿಗಳು ತಮ್ಮ ಜೀವನದ ಸುದೀರ್ಘ ಅನುಭವದ ಕಾರಣ ಕಿರಿಯರಿಗೆ ಮಾರ್ಗದರ್ಶಕರೂ ಹೌದು. ಆತ್ಮಸ್ಥೈರ್ಯ ತುಂಬುವ ಮಹಾ ಶಕ್ತಿಯೂ ಕೂಡ. ಅಂತಹ ಅಗಾಧ ಶಕ್ತಿಯ ಸಂಖ್ಯೆ ಮೈಸೂರು ಜಿಲ್ಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿದೆ. ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳು ಇದ್ದು, ಈ ಪೈಕಿ ಕೆಆರ್ ನಗರ ವಿಧಾನಸಭಾ ಕ್ಷೇತ್ರ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಹಾಗೂ ಹೆಚ್.ಡಿ.ಕೋಟೆ, ನಂಜನಗೂಡು, ವರುಣ ಮತ್ತು ಟಿ.ನರಸೀಪುರ ವಿಧಾನಸಭಾ ಕ್ಷೇತ್ರಗಳು ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಹಂಚಿಕೆ ಆಗಿವೆ. ಒಟ್ಟಾರೆ ಮೈಸೂರು ಜಿಲ್ಲೆಯಲ್ಲಿರುವ ಈ 11 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಸ್ತುತ 1,997 ಶತಾಯುಷಿ ಮತದಾರರಿದ್ದಾರೆ.



ಮತದಾರ ಪ್ರಜಾಪ್ರಭುತ್ವದ ಸೂತ್ರಧಾರ...!

ಒಂದನೇ ಪುಟದಿಂದ

ಮನುಷ್ಯನಿಗೆ ಉಸಿರಾಟ ಎಷ್ಟು ಮುಖ್ಯವೋ, ಮತದಾನ ಕೂಡ ಅಷ್ಟೇ ಮುಖ್ಯ!



ಮನುಷ್ಯನ ಆರೋಗ್ಯದಂತೆ ದೇಶದ ಆರೋಗ್ಯ ಕೂಡ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ದೇಶದ ಆರೋಗ್ಯ ಕಾಪಾಡಲು ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಬೇಕು. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಮೊದಲ ಮಾರ್ಗವೆಂದರೆ ಮತದಾನ. ಮತದಾನ ಮಾಡಿದಾಗ ಮಾತ್ರ ನಮ್ಮ ಬದುಕು ಅರ್ಥಪೂರ್ಣವಾಗುತ್ತದೆ. ಹಣ, ಶ್ರೀಮಂತಿಕೆ ಜೀವನಕ್ಕೆ ಎಷ್ಟು ಮುಖ್ಯವೊ ಸುಭದ್ರ, ಸುರಕ್ಷಿತ ಹಾಗೂ ನ್ಯಾಯಯುತ ಆಡಳಿತ ವ್ಯವಸ್ಥೆಗೆ ಮತದಾನ ಕೂಡ ಅಷ್ಟೆ ಮುಖ್ಯ. ಈ ಹಿನ್ನೆಲೆಯಲ್ಲಿ ಮೌಲ್ಯಯುತವಾದ ಸೂಕ್ತ ವ್ಯಕ್ತಿಯನ್ನು ನಾವು ಆಯ್ಕೆ ಮಾಡಬೇಕು. ಮತದಾನ ಮಾಡದೆ ತಾತ್ಸಾರ ತೋರಿ ಈಗ ತಪ್ಪು ಮಾಡಿದರೆ ಮುಂದೆ ಮತ್ತಷ್ಟು ತಪ್ಪುಗಳಿಗೆ ನಾಂದಿಯಾಗುತ್ತದೆ. ಮತದಾರ ಯಾವುದೇ ಆಮಿಷಕ್ಕೆ ಒಳಗಾಗಬಾರದು. ಸಿಹಿಯನ್ನು ಹೆಚ್ಚಾಗಿ ತಿನ್ನುತ್ತಿದ್ದರೆ ಮಧುಮೇಹ ರೋಗ ಬಂದಂತೆ ಆಮಿಷಕ್ಕೆ ಒಳಗಾದರೆ ದುಷ್ಪರಿಣಾಮ ಎದುರಿಸಬೇಕಾಗುತ್ತದೆ. ಈಗ ಆಮಿಷಕ್ಕೆ ಒಳಗಾಗಿ ಸಿಗುವ ಲಾಭ ತಕ್ಷಣಕ್ಕೆ ಅನುಕೂಲವಾಗಬಹುದು. ಈಗ ರಾಜಿ ಮಾಡಿಕೊಂಡರೆ ಮುಂದೆ ಅದರಿಂದ ಘೋರ ಪರಿಣಾಮ ಎದುರಿಸಬೇಕಾಗುತ್ತದೆ. ಮತದಾನದ ದಿನ ರಜೆ ಇದೆ ಎಂದು ಯಾರೂ ಕೂಡ ಪ್ರವಾಸಕ್ಕೆ ಅಥವಾ ಇನ್ನಿತರ ಕೆಲಸಕ್ಕೆ ಹೋಗಬಾರದು. ಅಲ್ಪ ತೃಪ್ತಿ, ಅಲ್ಪ ಸುಖಕ್ಕೆ ಮನಸೋತರೆ ಭವಿಷ್ಯ ಹಾಳು ಮಾಡಿಕೊಳ್ಳಬೇಕಾಗುತ್ತದೆ. ಆದ ಕಾರಣ ದೇಶದ ಭವಿಷ್ಯ ಉತ್ತಮವಾಗಿರಲು ಅರ್ಹರಾದ ಅಭ್ಯರ್ಥಿ ಆಯ್ಕೆ ಮಾಡಬೇಕು.

–ಆರ್.ಗುರು, ಹಿರಿಯ ಉದ್ಯಮಿ, ಮೈಸೂರು.

ಪ್ರಜಾಪ್ರಭುತ್ವ ಹಬ್ಬದಲ್ಲಿ ಪ್ರತಿಯೊಬ್ಬರು ಭಾಗಿಯಾಗಿ



ಮತದಾನದ ದಿನ ಪ್ರವಾಸಕ್ಕೆ ಹೋಗುವುದು, ಸಿನಿಮಾಗೆ ಹೋಗುವುದನ್ನು ಮಾಡಬೇಡಿ. ಏನೇ ಕೆಲಸ ಇದ್ದರೂ ಅದನ್ನು ಬಿಟ್ಟು ಬಂದು ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಐದು ವರ್ಷಕ್ಕೊಮ್ಮೆ ಬರುವ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಯಾಗಿ.

ಮತದಾನ ನಮ್ಮ ಹಕ್ಕು ಮಾತ್ರವಲ್ಲದೆ ಕರ್ತವ್ಯ ಕೂಡ ಆಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಮತದಾನದ ಮೂಲಕ ತಮ್ಮ ಜವಾಬ್ದಾರಿ ನಿರ್ವಹಿಸಬೇಕು. ಇವರಿಗೆ ಮತ ಹಾಕಿ, ಅವರಿಗೆ ಮತ ಹಾಕಿ ಎಂದು ಯಾರಿಗೂ ಸಲಹೆ ನೀಡುವುದಿಲ್ಲ. ಆದರೆ ಮತದಾನದಿಂದ ಮಾತ್ರ ಹಿಂದೆ ಸರಿಯಬೇಡಿ.

ಕಡ್ಡಾಯ ಮತದಾನದ ಮೂಲಕ ಒಳ್ಳೆಯ ಸರ್ಕಾರ ರಚನೆ ಮಾಡಿ. ಒಳ್ಳೆಯ ಜನಪ್ರತಿನಿಧಿ ಆಯ್ಕೆ ಮಾಡಿ. ಮತದ ಶ್ರೇಷ್ಠತೆ ತಿಳಿಯಿರಿ. ಯಾವುದೇ ಕಾರಣಕ್ಕೂ ಆಸೆ, ಆಮಿಷಗಳಿಗೆ ಒಳಗಾಗಿ ಮತಗಳನ್ನು ಮಾರಿಕೊಳ್ಳಬೇಡಿ. ಧರ್ಮ, ಜಾತಿ, ಮತದ ಭೇದ–ಭಾವವಿಲ್ಲದೆ ಉತ್ತಮ ಅಭ್ಯರ್ಥಿ ಆಯ್ಕೆ ಮಾಡಿ.

–ಸರ್ ಖಾಜಿ ಹಜರತ್ ಮೌಲಾನ ಮೊಹಮ್ಮದ್ ಉಸ್ಮಾನ್ ಷರೀಫ್

ಮತದಾನ ಮಾಡದೇ ಇದ್ದರೆ ಬದುಕಿದ್ದು ಸತ್ತಂತೆ

ಐದು ವರ್ಷಗಳ ಕಾಲ ದೇಶವನ್ನು ಮುನ್ನಡೆಸಲು ಆಡಳಿತದ ಚುಕ್ಕಾಣಿ ಹಿಡಿಯುವವರನ್ನು ನಿರ್ಧರಿಸುವ ಚುನಾವಣೆಯಲ್ಲಿ ಮತದಾನ ಮಾಡಲಿಲ್ಲ ಅಂದರೆ ದೇಶಕ್ಕೆ ಮಾಡುವ ದೊಡ್ಡ ದ್ರೋಹ.



ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು, ಪಕ್ಷೇತರರು ಸ್ಪರ್ಧೆ ಮಾಡಿರುತ್ತಾರೆ. ಇವರಲ್ಲಿ ನಿಸ್ವಾರ್ಥದಿಂದ ದೇಶ ಸೇವೆ ಮಾಡಬಲ್ಲ ಉತ್ತಮರು ಯಾರು ಎಂದು ಆಯ್ಕೆ ಮಾಡಿಕೊಂಡು ಮತದಾನ ಮಾಡಬೇಕು. ಮತದಾನ ಮಾಡಲಿಲ್ಲ ಅಂದರೆ ಬದುಕಿದ್ದು ಸತ್ತಂತೆ. ನಗರದ ಸ್ವಚ್ಛತೆಯನ್ನು ಕಾಪಾಡಲು ಪ್ರಮುಖ ಪಾತ್ರ ವಹಿಸುವ ಪೌರಕಾರ್ಮಿಕರು ಕಡ್ಡಾಯವಾಗಿ ಮತದಾನ ಮಾಡಬೇಕು. ತಾವು ಮತದಾನ ಮಾಡುವುದರಿಂದ ದೇಶದ ಭವಿಷ್ಯ ಬದಲಾಯಿಸಬಹುದು ಎಂದು ಮತದ ಮಹತ್ವವನ್ನು ಅರಿಯಬೇಕು. ಈ ಹಿನ್ನೆಲೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡಬೇಕು. ಮತದಾರರು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗಬಾರದು. ತಾವು ಚಲಾಯಿಸುವ ಮತಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂಬ ವಾಸ್ತವತೆಯನ್ನು ಅರಿತುಕೊಳ್ಳಬೇಕು. ಇಂತಹ ನಿರ್ಧಾರ ಪ್ರತಿಯೊಬ್ಬರಲ್ಲೂ ಇದ್ದರೆ ಯಾರೂ ಕೂಡ ಮತದಾರರನ್ನು ಭ್ರಷ್ಟರಾಗಿ ಮಾಡಲು ಸಾಧ್ಯವಿಲ್ಲ.



ಮತದಾನ ನಮ್ಮ ಹಕ್ಕು ಎಂದು ತಿಳಿಯುವುದರ ಜೊತೆಗೆ, ಮತದಾನ ನಮ್ಮ ಜವಾಬ್ದಾರಿ ಎಂಬುವುದನ್ನು ಕೂಡ ಅರಿಯಬೇಕು. ಈ ಮೂಲಕ ಕಡ್ಡಾಯವಾಗಿ ಮತದಾನ ಮಾಡಬೇಕು.

–ಮಾರ, ಪೌರಕಾರ್ಮಿಕರ ಸಂಘದ ಅಧ್ಯಕ್ಷ

ಮತದಾನ ಮಾಡದೇ ಜನಪ್ರತಿನಿಧಿ, ಸರ್ಕಾರ ಟೀಕೆ ಸರಿಯಲ್ಲ

ಮತದಾನ ಮಾಡದೆ ಆ ಸರ್ಕಾರ ಸರಿಯಿಲ್ಲ, ಈ ಜನಪ್ರತಿನಿಧಿ ಸರಿಯಿಲ್ಲ ಎಂದು ಟೀಕಿಸುವುದು ಸರಿಯಲ್ಲ. ಅತೀ ಹೆಚ್ಚು ಜನಸಂಖ್ಯೆ ಇರುವ ವಿಶ್ವದ ಪ್ರಬಲ ಪ್ರಜಾಪ್ರಭುತ್ವ ದೇಶಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ಈ ಸ್ವತಂತ್ರ ಪ್ರಜಾಪ್ರಭುತ್ವ ದೇಶದಲ್ಲಿ ಜನರೇ ಪ್ರಭುಗಳು ಎಂಬುದನ್ನು ಅರಿಯಬೇಕು. ನಮ್ಮ ಮೂಲಕ ಆಯ್ಕೆಯಾದ ಪ್ರತಿನಿಧಿಗಳು ಆಡಳಿತ ನಡೆಸುತ್ತಾರೆ. ಈ ಮೂಲಕ ನಾವೇ ಆಡಳಿತ ನಡೆಸುವವರು ಎಂಬುದನ್ನು ತಿಳಿದು ಕಡ್ಡಾಯವಾಗಿ ಮತದಾನ ಮಾಡಬೇಕು.

ಚುನಾವಣೆಯಲ್ಲಿ ಸ್ಪರ್ಧೆ ಮಾಡಿರುವ ಯಾವ ವ್ಯಕ್ತಿಯೂ ಅರ್ಹನಲ್ಲ ಎಂದು ಅನಿಸಿದರೆ ತಿರಸ್ಕರಿಸಲು ಚುನಾವಣಾ ಆಯೋಗ 'ನೋಟಾ' ಮೂಲಕ ಅವಕಾಶ ಮಾಡಿಕೊಟ್ಟಿದೆ. ಈ ಸಂದರ್ಭದಲ್ಲಿ ನೋಟಾ ಚಲಾಯಿಸಿ. ಆದರೆ ಮತದಾನದ ಮಹತ್ವ ಅರಿತು ಕಡ್ಡಾಯವಾಗಿ ಮತದಾನ ಮಾಡಬೇಕು. ಲೋಕಸಭಾ ಚುನಾವಣೆ ಮುಂದಿನ ಐದು ವರ್ಷದ ಸರ್ಕಾರದ ಅವಧಿಯಲ್ಲಿ ದೇಶದ ಭವಿಷ್ಯವನ್ನೆ ನಿರ್ಧರಿಸುತ್ತದೆ. ಇದು ಐದು ವರ್ಷಕ್ಕೊಮ್ಮೆ ಬರುವ ಪ್ರಜಾಪ್ರಭುತ್ವದ ಹಬ್ಬ. ಈ ಹಿನ್ನೆಲೆಯಲ್ಲಿ ಹಬ್ಬದಲ್ಲಿ ಎಲ್ಲರೂ ಭಾಗಿಯಾಗಿ ಸಂಭ್ರಮಿಸಬೇಕು. ಚುನಾವಣೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡಿ ನಮ್ಮ ಜವಾಬ್ದಾರಿ ಹಾಗೂ ಹಕ್ಕು ನಿರ್ವಹಿಸಬೇಕು.


–ಖಲೀಂ ಅಹಮ್ಮದ್ ಎಂ.ಧರ್ಮ ಬೋಧಕರು, ಖೈಫ್ ಮಸೀದಿ ಕಾರ್ಯದರ್ಶಿ

ಜಾತಿ ನೋಡಿ ಮತದಾನ ಮಾಡಿದ್ರೆ ದೇಶಕ್ಕೆ ಅಪಾಯ

ಮತದಾನ ಮಾಡುವಾಗ ಯಾವುದೇ ಜಾತಿ, ಧರ್ಮ, ಪಂಥದ ಭೇದ–ಭಾವ ಮಾಡಬಾರದು. ನಾವು ಹಾಕುವ ಮತ ಶ್ರೇಷ್ಠವಾಗಿರಬೇಕು.ಮತದಾರ ಜಾತಿ, ಧರ್ಮ, ಪಂಥ ನೋಡಿ ಮತ ಹಾಕಿದರೆ ದೇಶಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಇದರಿಂದ ಭವಿಷ್ಯತ್ತಿನಲ್ಲಿ ಆಗುವ ದುಷ್ಪರಿಣಾಮವನ್ನು ಮತದಾರನೇ ಅನುಭವಿಸಬೇಕಾಗುತ್ತದೆ. ಮತದಾನ ನಮ್ಮ ಸಂಪೂರ್ಣ ಹಕ್ಕು ಎಂದು ಭಾವಿಸಬೇಕು. ಐದು ವರ್ಷಕ್ಕೊಮ್ಮೆ ಸಿಗುವ ಈ ಅವಕಾಶವನ್ನು ನಾವು ಬಳಸಿಕೊಳ್ಳಬೇಕು. ನಮ್ಮಿಂದ ರಚನೆ ಆಗುವ ಸರ್ಕಾರವನ್ನು ನಾವೇ ನಿರ್ಧರಿಸಬೇಕು.

–ರವಿ, ತರಕಾರಿ ವ್ಯಾಪಾರಿ, ದೇವರಾಜ ಮಾರುಕಟ್ಟೆ, ಮೈಸೂರು

ಮೇರು ಚಿತ್ರಕಲೆ



ಈಜಿಪ್ಟಿಯನ್ ಪೇಂಟರ್ ಒಬ್ಬರು ರೂಪಿಸಿರುವ ಈ ಒಂದು ಮೇರು ಚಿತ್ರಕಲೆ 'ಮಾಧ್ಯಮ'ವನ್ನು ಅರ್ಥಪೂರ್ಣವಾಗಿ ವಿವರಿಸುತ್ತದೆ.

ಪತ್ನಿ: ಏನು ಪುರೋಹಿತರೇ, ನನ್ನ ಗಂಡ ಸಿಕ್ಕಾಪಟ್ಟೆ ಕುಡಿದು ದಿನಾ ಜಗಳ ಆಡ್ತಿರ್ತಾನೆ. ನೀವು ಜಾತಕ ಸರಿಯಾಗಿ ನೋಡಿರ್ಲಿಲ್ವಾ?.

ಪುರೋಹಿತರು: ಜಾತಕ ನೋಡಿ ಅವರಿಗೆ ಕುಜ ದೋಷ ಇದೆ ಎಂದು ಹೇಳಿದ್ನಲ್ಲ.

ಪತ್ನಿ: ಕುಜ ದೋಷ ಅಂದ್ರೆ?

ಪುರೋಹಿತ: ಕುಡಿದು ಜಗಳ ಆಡೋ ದೋಷ...


ಮೈಸೂರು ಮಿತ್ರ
ಸ್ಥಾಪನೆ: 1980
45
ಅತ್ಯುತ್ತಮ ಪತ್ರಿಕೋದ್ಯಮ
ಮೈಸೂರು, ಮಂಡ್ಯ, ಕೊಡಗು,
ಹಾಸನ ಮತ್ತು ಚಾಮರಾಜನಗರ
ಸೇರಿದಂತೆ ಐದು ಜಿಲ್ಲೆಗಳಲ್ಲಿ
ಹೆಚ್ಚು ಪ್ರಸರಣ ಹೊಂದಿರುವ
ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
45ನೇ ವರ್ಷದ ವಾರ್ಷಿಕೋತ್ಸವದ ಶುಭಾಶಯಗಳು
ಕೆ.ಮರೀಗೌಡ
ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ
ಹಾಗೂ ಕೆ.ಪಿ.ಸಿ.ಸಿ ಸದಸ್ಯರು


ಮೈಸೂರು ಮಿತ್ರ
ಸ್ಥಾಪನೆ : 1980
45
ಅತ್ಯುತ್ತಮ ಪತ್ರಿಕೋದ್ಯಮ
ಪತ್ರಿಕಾ ಮಾಧ್ಯಮದಲ್ಲಿ ಪ್ರಕಾಶಿಸುತ್ತಿರುವ ನಮ್ಮ
'ಮೈಸೂರು ಮಿತ್ರ' ನಿಗೆ
ಶುಭಾಶಯಗಳು